# ಕಾನೂನಿನ ಜಗತ್ತಿನಲ್ಲಿ ಭಾಷೆ ಮತ್ತು ಸಾಹಿತ್ಯ

ಡಾ.ಪಿ.ಈಶ್ವರ ಭಟ್

- ಮನುಷ್ಯ ತನ್ನ ಹುಟ್ಟಿನ ಸಾವಿರಾರು ವರ್ಷನಂತರ ಭಾಷೆಯನ್ನು ಕಲಿತ, ಅದನ್ನು ತನ್ನ ದಿನನಿತ್ಯದ ಮಾಧ್ಯಮವನ್ನಾಗಿ ಮಾಡಿಕೊಂಡ. ಹಾಗಾಗೀ ಭಾಷೆಯೆಂಬುದು ಒಂದು ಸಂವಹನ ಮಾಧ್ಯಮ. ಭಾಷೆ ಒಂದು ಸಂಸ್ಕೃತಿಯ ಭಾಗ. ಅಂತೆಯೇ ಕಾನೂನು, ನೈತಿಕತೆ ಮತ್ತು ಧಾರ್ಮಿಕತೆಗಳು ಸಂಸ್ಕೃತಿಯ ಭಾಗವೇ ಆಗಿವೆ. ಕಾನೂನಿನ ಜಗತ್ತು ಶಬ್ದಗಳ ಜಗತ್ತು. ಮೌನಕ್ಕೂ ಅರ್ಥ ಕಟ್ಟುವ ಜಗತ್ತಾಗಿದೆ.
- ಕಾನೂನಿನ ಮೂಲ ಗುರಿಗಳಾದ ನ್ಯಾಯ ಸಾಧನೆ, ಶಿಷ್ಟರಕ್ಷಣೆ, ದುಷ್ಟ ಶಿಕ್ಷಣೆ, ಶಾಂತಿಸ್ಥಾಪನೆ, ಹಕ್ಕುಗಳ ಮಾನ್ಯತೆ, ಜನಕಲ್ಯಾಣ ಹಾಗೂ ಸಾಮಾಜಿಕ ಸಾಮರಸ್ಯಗಳನ್ನು ಸಾಧಿಸಲು ಕಾನೂನಿನ ಬಲದೊಂದಿಗೆ ಸಮಾಜದ ಸಹಕಾರವೂ ಇದೆ. ಹೀಗೆ ಕಾನೂನಿಗೂ ಭಾಷೆಗೂ ಪರಸ್ಪರ ಬಲಿಷ್ಠಗೊಳಿಸುವ ಸಂಬಂಧವಿದೆ. ಕಾನೂನಿನ ಜ್ಞಾನದೊಂದಿಗೆ ಭಾಷಾಕೌಶಲ್ಯದ ಸಾಮರ್ಥ್ಯವನ್ನು ಬೆಳೆಸಿಕೊಳ್ಳಬೇಕಾಗಿದೆ.
- ರಸಾನುಭವದ ಸುಂದರವಾದ ಅಭಿವ್ಯಕ್ತಿಯೇ ಭಾಷೆ. ಸಾಹಿತ್ಯ ಮೂಲಸತ್ವವೂ ಅಭಿವ್ಯಕ್ತಿಯ ಮಾಧ್ಯಮವಾದ ಭಾಷೆಯಲ್ಲಿಯೂ ಇರುತ್ತದೆ. ಕಾನೂನು ಹಾಗೂ ನ್ಯಾಯಗಳ ಪರಿಕಲ್ಪನೆಗಳು ಕೂಡ ಭಾಷೆಯ ಮೂಲಕ ಸಾಹಿತ್ಯಕ್ಕೆ ಪ್ರವೇಶಿಸುತ್ತವೆ.

**ಕಾನೂನು ಮತ್ತು ಸಾಹಿತ್ಯ:**

- ಕಾನೂನು ಮತ್ತು ಸಾಹಿತ್ಯ ಎರಡು ಕೂಡ ಜೀವನಾನುಭವಕ್ಕೆ ಗಾಢವಾಗಿ ಸಂಬಂಧಿಸಿದವುಗಳು. 'ಕಾನೂನಿನ ಜೀವಾಳ ಅನುಭವವೇ ಹೊರತು ತಾರ್ಕಿಕತೆಯಲ್ಲ' ಎಂಬುದು ಅಮೇರಿಕೆಯ ನ್ಯಾಯಾಧೀಶ, ನ್ಯಾಯತತ್ವಜ್ಞಾನಿ ಓ.ಡಬ್ಲ್ಯು.ಹೋಮ್ಸ್ ವಿಚಾರ. ಸಾಹಿತ್ಯ ಜೀವನದ ಅನುಭವವದಿಂದ ಮೂಡಿಬರುತ್ತದೆ. ಕಾನೂನಿನ ಭಾಷೆ – ವಿಧಿ ನಿಷೇಧದ ಮತ್ತು ನಿಯಂತ್ರಣದ ಔಪಚಾರಿಕ ಭಾಷೆಯಾಗಿದ್ದು, ಗಂಭೀರವಾದ ಭಾಷೆಯಾಗಿದೆ. ಕಟ್ಟುನಿಟ್ಟಾದ ಭಾಷೆಯಾಗಿದೆ. ಉದ್ದೇಶಪೂರ್ವಕವಾದ ರಾಜಗಾಂಭೀರ್ಯವನ್ನು ಹೊಂದಿದೆ. ಕಾನೂನಿನ ಭಾಷೆಗೆ ಹೋಲಿಸಿದರೆ ಸಾಹಿತ್ಯ ಭಾಷೆ ಸರಳ, ಸುಗಮ ಮತ್ತು ಲಾಲಿತ್ಯಪೂರ್ಣ. ಕಾನೂನಿ ಭಾಷೆ ನೀರಸ ಮತ್ತು ಅದರ ಸೀಮಿತ ಉದ್ದೇಶ ವಿಧಿ ನಿಷೇಧಗಳ ನಿರ್ಭಾವುಕ ಸಂದೇಶ ರವಾನೆ ಹೊಂದಿದೆ.
- ಕಾನೂನು ಮತ್ತು ಸಾಹಿತ್ಯಗಳ ಪ್ರಪಂಚಗಳು ಬೇರೆ ಬೇರೆಯೆಂದು ಕೆಲವು ದಶಕಗಳ ಕಾಲ ತಿಳಿಯಲಾಗಿತ್ತು. ಆದರೆ ಕಾನೂನಿನ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಮತ್ತು ರಾಜಕೀಯ ಆಯಾಮಗಳನ್ನು ನ್ಯಾಯತಜ್ಞರು ಗಮನಿಸಿ 'ಕಾನೂನು ಮತ್ತು ಸಾಹಿತ್ಯ' ಎಂಬ ಯೋಚನಾ ಪಂಥವು 1970ರಿಂದ ಈಚೆಗೆ ಬೆಳೆದುಬಂದಿರುವುದನ್ನು ತಿಳಿಸುತ್ತಾರೆ.
- ಆದರೆ ಭಾರತೀಯ ಪರಂಪರೆಯಲ್ಲಿ ಕಾನೂನು ಸಾಹಿತ್ಯಗಳು ಏಕಕಾಲಕ್ಕೆ ಬೆಳೆದುಬಂದಿರುವುದನ್ನು ದಾಖಲಿಸಬಹುದು. ರಾಮಾಯಣ, ಮಹಾಭಾರತಗಳು ಅದರಲ್ಲಿ ಬರುವ ಭಗವದ್ಗೀತೆಗಳಲ್ಲಿ ರಾಜನೀಯ ಹಕ್ಕುಗಳ ಬಗ್ಗೆ ಗಮನಸೆಳೆಯುತ್ತವೆ. ಅಲ್ಲಿ ನ್ಯಾಯಿಕ, ನೈತಿಕ, ಕಾನೂನಾತ್ಮಕ ಮತ್ತು ಮಾನವ ಕರ್ತವ್ಯಗಳ

ಕುರಿತು ಸಮಗ್ರ ವಿವರಣೆಯು ಇದೆ. ಸರ್ವೋಚ್ಚ ಮತ್ತು ಉಚ್ಚ ನ್ಯಾಯಾಲಯಗಳ 40 ತೀರ್ಪುಗಳಲ್ಲಿ ಇವುಗಳ ಬೆಂಬಲವನ್ನು ಗಮನಿಸಬಹುದು.

- ಇನ್ನು ಕಾಳಿದಾಸನ ಶಾಕುಂತಲಾ ನಾಟಕ, ಮೃಚ್ಛಕಟಿಕ ಕೃತಿಗಳಲ್ಲಿಯೂ ನ್ಯಾಯಿಕ ವಿಧಾನಗಳನ್ನು ಗಮನಿಸಬಹುದು.
- ಇನ್ನು ಕನ್ನಡದ ವಡ್ಡಾರಾಧನೆ, ಪಂಪ, ರತ್ನ, ಪೊನ್ನರ ಮಹಾಕಾವ್ಯಗಳು, ವಚನಕಾರರ ವಚನಗಳು, ದಾಸರ ಕೀರ್ತನೆಗಳು, ತತ್ವಪದಕಾರರ ಚಿಂತನೆಗಳು, ಜನಪದ ಸಾಹಿತ್ಯ ಇಲ್ಲೆಲ್ಲಾ ನೀಡುವ ಸಂದೇಶಗಳು ಸಮಾಜಕ್ಕೆ ಒಂದು ಎಚ್ಚರಿಕೆಯ ಗಂಟೆಯನ್ನೇ ನೀಡುತ್ತವೆ. ನ್ಯಾಯಿಕ ನೆಲೆಯಲ್ಲಿ ಮಾಡುವ ಒಂದೊಂದು ಚಿಂತನೆಗಳು ಕೂಡ ಕಾನೂನು ಮತ್ತು ಮಾನವ ಹಕ್ಕುಗಳ ಮೇಲೆ ಬೆಳಕು ಚೆಲ್ಲುತ್ತವೆ.
- ಬದಾಮಿ ಶಾಸನದಲ್ಲಿ 'ಸಾಧುಗೆ ಸಾಧು, ಮಾಧುರ್ಯಂಗೆ ಮಾಧುರ್ಯಂ, ಕಲಿಯುಗ ವಿಪರೀತನ್' ಎಂಬ ಸಾಲುಗಳು, 'ಧರೆಯಂ ರಕ್ಷಿಸಿ ದುಷ್ಟರಂ ಜಡಿದು ಸದ್ಧರ್ಮಂಗಳಂ ಕಾಯ್ದು' ಎಂಬ ಧರ್ಮಶಾಸ್ತ್ರದ ಮಾತುಗಳು ಸಾಮಾಜಿಕ ಕಾನೂನುಗಳನ್ನು ಪ್ರತಿನಿಧಿಸುತ್ತವೆ.
- ಗ್ರೀಕ್‌ರ ಸಾಹಿತ್ಯ, ಇಂಗ್ಲೀಷ್‌ರ ಸಾಹಿತ್ಯಗಳನ್ನು ಗಮನಿಸಿದಾಗ ಉದ್ದಕ್ಕೂ ಸಮಾಜದಲ್ಲಿ ವ್ಯಕ್ತಿ ಹೇಗೆ ಬದುಕಬೇಕೆಂಬ ನೀತಿ ನಿಯಮಗಳನ್ನೇ ನಿರೂಪಿಸುತ್ತವೆ. ಕನ್ನಡದ ಆಧುನಿಕ ಸಾಹಿತ್ಯದಲ್ಲಿ ಬೇಂದ್ರೆಯವರ 'ಸಖೀಗೀತ', 'ನಾಲ್ಕುತಂತಿ' ಕವನಗಳು, ಕುವೆಂಪು ಅವರ 'ಜಲಗಾರ', 'ಬೆರಳ್‌ಗೆ ಕೊರಲ್' ನಾಟಕಗಳು, ಶಿವರಾಮ ಕಾರಂತರ 'ಚೋಮನದುಡಿ', 'ಅಳಿದ ಮೇಲೆ' ಕಾದಂಬರಿಗಳು, ಮಾಸ್ತಿ ವೆಂಕಟೇಶ ಅಯ್ಯಂಗಾರರು ಕಥೆಗಳಲ್ಲಿ ಜೀವನ ದರ್ಶನವನ್ನು ಕಾಣುತ್ತೇವೆ. ಜೀವನಕ್ಕೆ ಸಂದೇಶ ನೀಡುವುದರೊಂದಿಗೆ ಮನುಷ್ಯನು ಅನುಸರಿಸಬೇಕಾದ ನೀತಿಮಾರ್ಗಗಳನ್ನು ಮನದಟ್ಟು ಮಾಡುತ್ತಾರೆ. ಅಂದರೆ ಸಾಹಿತ್ಯ ಕಾನೂನು ಹಾಸುಹೊಕ್ಕಾಗಿರುವುದನ್ನು ಅವಲೋಕಿಸಬಹುದು.

**ಸಾಹಿತ್ಯವಾಗಿ ಕಾನೂನು:**

- ಸಾಮಾನ್ಯವಾಗಿ ಕಾನೂನಿನ ತಾಂತ್ರಿಕ ಭಾಷೆಯಲ್ಲಿ ಲಾಲಿತ್ಯದ ಕೊರತೆಯಿದೆ. ಕೇವಲ ಸಂದೇಶ ವಾಹಕವಾಗಿ ಕಾನೂನು ಕೆಲಸ ಮಾಡುವಾಗ ಅದರ ಬರವಣಿಗೆ ಪರಿಣಾಮಕಾರಿ ಎನಿಸಲಾರದು. ಕಾನೂನಿನ ಬರಹಕ್ಕೆ ಸಾಹಿತ್ಯದ ಮೆರಗು ಕೊಡುವುದು ಅಗತ್ಯವೆನಿಸಿದೆ. ಅದಾಗ್ಯೂ ಭಾರತ, ಅಮೇರಿಕ ದೇಶಗಳ ಸರ್ವೋಚ್ಚ ನ್ಯಾಯಾಲಯಗಳ ಹಲವಾರು ತೀರ್ಪುಗಳಲ್ಲಿ ಸಾಹಿತ್ಯ ಲಕ್ಷಣಗಳಿರುವುದನ್ನು ಗಮನಿಸಬಹುದೆಂದು ಲೇಖಕರು ಹೇಳುತ್ತಾರೆ.
- ಸಾಹಿತ್ಯವಾಗಿ ಕಾನೂನು ಹೊರಹೊಮ್ಮಿದುದಕ್ಕೆ ಹಲವಾರು ಉದಾಹರಣೆಗಳು ಹೆಸರಿಸುತ್ತಾ, ಫೆಲಿಕ್ಸ್ ಫ್ರಾಂಕ್‌ಫರ್ಟ್‌ರ 'ಸಾಕ್ಕೊ ಮತ್ತು ವಾನ್‌ಜೆಟ್ಟಿ' ಪ್ರಕರಣ, ರಸ್ಕಿನ್ ಪ್ರಕರಣ, ರಾಮ ಜನ್ಮಭೂಮಿ ಪ್ರಕರಣದಂತಹ ಹಲವಾರು ತೀರ್ಪುಗಳು ಸಾಹಿತ್ಯದ ಭಾಷೆ ಹೊಂದಿರುವುದನ್ನು ಗಮನಿಸಬಹುದು.
- ಅಂದರೆ ಕಾನೂನಿನ ಭಾಷೆ ಸಾಹಿತ್ಯವಾಗಿ ಮೂಡಿಬರಲು ಎಷ್ಟು ಸಾಧ್ಯವೋ ಅಷ್ಟು ಅದು ಜೀವಂತಿಕೆಯಿಂದ ಕೂಡಿರುತ್ತದೆ ಎಂಬ ಭಾವ ಈ ಲೇಖನದಲ್ಲಿ ಇದ್ದರೂ, ತೀರ್ಪು ಸಾಹಿತ್ಯವಾಗಿದ್ದರೂ ಅಷ್ಟೇ, ಇಲ್ಲದಿದ್ದರೂ ಅಷ್ಟೇ ತೀರ್ಪು ಒಂದೇ. ಆದರೆ ಯಾವುದೇ ಬರವಣಿಗೆ ಇರಲಿ ಅದು

ಲಾಲಿತ್ಯಪೂರ್ಣವಾಗಿದ್ದರೆ ಅದರ ಬೆಲೆ ಇನ್ನೂ ಹೆಚ್ಚಾಗುವುದರಲ್ಲಿ ಸಂದೇಹವಿಲ್ಲ ಎಂಬುದು ಈ ಲೇಖನದ ಉದ್ದೇಶ.

**ಸಾಹಿತ್ಯದಿಂದ ಕಾನೂನಿಗಾಗುವ ಲಾಭಗಳು:**

- ಒಬ್ಬ ಕಾನೂನು ಶಾಸ್ತ್ರಜ್ಞ, ನ್ಯಾಯಾಧೀಶ, ನ್ಯಾಯವಾದಿ ಸಾಹಿತ್ಯವನ್ನು ಓದುವದರಿಂದ ಅವನಲ್ಲಿ ಜೀವನಾನುಭವ ಹೆಚ್ಚಾಗುತ್ತದೆ. ವಾಸ್ತವಿಕ ಜಗತ್ತಿನ ಅರಿವು ಬೆಳೆಯುತ್ತದೆ.
- ಸಾಹಿತ್ಯ ಲೋಕದಲ್ಲಿ ತಲ್ಲೀನರಾದವರು ತಮ್ಮ ಅನುಭವಗಳನ್ನು ಸಾಹಿತ್ಯದಲ್ಲಿ ಬರುವ ಪಾತ್ರಗಳ ಅನುಭವ ಮತ್ತು ವರ್ತನೆಗಳೊಂದಿಗೆ ತಮ್ಮನ್ನು ಹೋಲಿಸಿ ಮಾನಸಿಕವಾಗಿ ಬಲಿಷ್ಠಗೊಳ್ಳುತ್ತಾರೆ.
- ಸಾಹಿತ್ಯದ ಓದುವಿಕೆಯು ನಮ್ಮ ಲೇಖನ ಕೌಶಲ್ಯವನ್ನು ಹೆಚ್ಚಿಸುತ್ತದೆ.
- ಸಾಹಿತ್ಯದ ಓದು ನಮ್ಮ ಭಾವನಾ ಪ್ರಪಂಚವನ್ನು ವಿಸ್ತರಿಸುತ್ತದೆ.
- ನೀತಿ ಸಂದೇಶಗಳೇ ಸಾಹಿತ್ಯದ ಉದ್ದೇಶವಲ್ಲದಿದ್ದರೂ, ನಮ್ಮ ದೃಷ್ಟಿಕೋನವನ್ನು ಬೆಳೆಸುತ್ತದೆ.
- ಪುಸ್ತಕ ಜ್ಞಾನವು ನಮ್ಮ ಆತ್ಮಜ್ಞಾನದ ಹಸಿವನ್ನು ನೀಗಿಸುತ್ತದೆ.
- ಸಾಹಿತ್ಯದಿಂದ ಕಾನೂನು ಹೆಚ್ಚು ಮಾನವೀಯಗೊಳ್ಳುವುದರಲ್ಲಿ ಸಂದೇಹವಿಲ್ಲ.
- ಸಾಹಿತ್ಯಕ್ಕೆ ಚಿಕಿತ್ಸಕ ಗುಣವಿದೆ. ಅದು ನಮ್ಮ ಮಾನಸಿಕ ಹಾಗೂ ಬೌದ್ಧಿಕ ವಿಕಸನಕ್ಕೆ ದಾರಿಮಾಡಿಕೊಡುತ್ತದೆ. ಒಬ್ಬ ಕಾನೂನು ಓದಿರುವ ವ್ಯಕ್ತಿ ಇಂತಹ ಸಾಹಿತ್ಯದ ಮೂಲಕ ಮತ್ತಷ್ಟು ವಿಕಸನದೆಡೆಗೆ ಹೆಜ್ಜೆ ಇಡುತ್ತಾನೆ.
- ಜೀವನ ಕಲೆಯನ್ನು ಸಾಹಿತ್ಯ ಎಂತಹವನಿಗೆ ಮಾರ್ಗದರ್ಶಿಸುತ್ತದೆ.
- ಒಟ್ಟಿನಲ್ಲಿ ಕಾನೂನನ್ನು ಮಾನವೀಯಗೊಳಿಸುವ ಕೈಂಕರ್ಯದಲ್ಲಿ ಸಾಹಿತ್ಯ ಮಹತ್ತರ ಕೊಡುಗೆ ನೀಡುವುದರಲ್ಲಿಯ ಸಂದೇಹವಿಲ್ಲ.

# I ಚೆಲುವ ಕನ್ನಡ ನಾಡು

ಕರ್ನಾಟಕವು ನೈಸರ್ಗಿಕವಾಗಿ, ಭೌಗೋಲಿಕವಾಗಿ, ರಾಜಕೀಯವಾಗಿ, ಸಾಂಸ್ಕೃತಿಕವಾಗಿ ಶ್ರೀಮಂತತೆಯನ್ನು ಹೊಂದಿರುವ ನಾಡು. ಇಂತಹ ನಾಡಿನ ಕುರಿತು ಶಾಸನಗಳು, ಗ್ರಂಥಗಳು, ಐತಿಹಾಸಿಕ ದಾಖಲೆಗಳು ಮಹತ್ವಪೂರ್ಣವಾದ ಮಾಹಿತಿಯನ್ನು ನೀಡುತ್ತವೆ.

**ಐತಿಹಾಸಿಕ ಹಿನ್ನೆಲೆ:** ಇತಿಹಾಸ ಪೂರ್ವದಿಂದಲೂ ಕರ್ನಾಟಕವು ಜನವಸತಿಗೆ ಯೋಗ್ಯವಾದ ಸ್ಥಳವಾಗಿತ್ತು ಎಂಬುದಕ್ಕೆ ಆಧಾರಗಳಿವೆ. ಕರ್ನಾಟಕದಲ್ಲಿ ಮೊಟ್ಟ ಮೊದಲಿಗೆ ದೊರೆಯುವ ಶಾಸನಗಳು ಅಶೋಕನ ಶಾಸನಗಳು. ಅವು ಮಸ್ಕಿ, ಕೊಪ್ಪಳ, ಜಟಿಂಗರಾಮೇಶ್ವರ, ಬ್ರಹ್ಮಗಿರಿ ಹೀಗೆ ಮೊದಲಾದ 12 ಸ್ಥಳಗಳಲ್ಲಿ ದೊರೆಯುತ್ತವೆ. ಅಂದರೆ ಮೌರ್ಯರು ಕರ್ನಾಟಕದಲ್ಲಿ ಮೊಟ್ಟಮೊದಲ ಬಾರಿ ಆಡಳಿತ ನಡೆಸಿರಬಹುದು. ಅವರ ನಂತರ ಶಾತವಾಹನರು, ಕದಂಬರು, ಗಂಗರು, ಚಾಲುಕ್ಯರು, ರಾಷ್ಟ್ರಕೂಟರು, ಹೊಯ್ಸಳರು, ವಿಜಯನಗರ ಅರಸರು, ಕೆಳದಿಯರು, ಉತ್ತರಾರ್ಧದ ಕೊನೆಗೆ ಮಹಮ್ಮದೀಯರು ಕೊನೆಯದಾಗಿ ಮೈಸೂರಿನ ಒಡೆಯರು ಹಾಗೂ ಬ್ರಿಟಿಷರು ರಾಜ್ಯಭಾರ ನಡೆಸಿರುವುದನ್ನು ಗಮನಿಸಬಹುದು.

ಮುಂದೆ ಸ್ವಾತಂತ್ರ್ಯ ಭಾರತದಲ್ಲಿ ಹೋರಾಟ ನಡೆಸಿದ ಕನ್ನಡದ ಕಲಿಗಳು ನಾಡಿನ ಏಕೀಕರಣಕ್ಕಾಗಿಯೂ ಹೋರಾಡಿದರು. ಹರ್ಡೇಕರ ಮಂಜಪ್ಪ, ಆಲೂರ ವೆಂಕಟರಾಯರು, ಗಂಗಾಧರರಾವ್ ದೇಶಪಾಂಡೆ ಮೊದಲಾದವರನ್ನು ಹೆಸರಿಸಬಹುದು. ಭಾರತ ಸ್ವಾತಂತ್ರ್ಯಗೊಂಡ ನಂತರ ಕರ್ನಾಟಕವು ರಾಜ್ಯಪುನರ್ರ್ವಿಂಗಡನೆ ನಂತರ 1956 ನವ್ಹೆಂಬರ್ 1 ರಂದು ಮೈಸೂರು ರಾಜ್ಯ ಸ್ಥಾಪನೆಗೊಂಡಿರು. ಮುಂದೆ 1973 ನವ್ಹೆಂಬರ್ 1 ರಂದು ಕರ್ನಾಟಕ ರಾಜ್ಯವೆಂದು ಮರುನಾಮಕರಣಗೊಂಡಿತು.

ಇಂತಹ ಭವ್ಯ ಇತಿಹಾಸವನ್ನು ಹೊಂದಿರುವ ಕರ್ನಾಟಕ ಭೌಗೋಳಿಕ ಹಿನ್ನೆಲೆಯನ್ನು ಕವಿರಾಜಮಾರ್ಗ ಗ್ರಂಥವು 'ಕಾವೇರಿಯಿಂದಮಾ ಗೋದಾವರಿವಮಿರ್ಪ ನಾಡದಾ ಕನ್ನಡದೊಳ್' ಎಂಬುದರ ಮೂಲಕ ಕನ್ನಡ ನಾಡಿನ ಭೌಗೋಳಿಕ ವಿಸ್ತಾರವನ್ನು ತಿಳಿಸುತ್ತದೆ. 10ನೇ ಶತಮಾನದ ಪಂಪನಿಂದ ಹಿಡಿದು 19ನೇ ಶತಮಾನದ ಮುದ್ದಣ್ಣನವರೆಗೆ ಕನ್ನಡ ಪ್ರಾಚೀನ ಸಾಹಿತ್ಯ ವಿಸ್ತರಿಸಿದ್ದು ಈ ನಾಡಿನ ಹೆಗ್ಗಳಿಕೆಯಾಗಿದೆ.

**ಹಣಕಾಸು, ಉದ್ದಿಮೆ:** ಆರ್ಥಿಕವಾಗಿ ಮುಂದುವರೆದ ರಾಜ್ಯ ಕರ್ನಾಟಕ. ಕೃಷಿಯೇ ಜೀವನಾಡಿಯಾಗಿದ್ದರೂ ಔದ್ಯಮಿಕವಾಗಿ, ಆರ್ಥಿಕವಾಗಿ ಸಾಕಷ್ಟು ಅಭಿವೃದ್ಧಿಯನ್ನು ಸಾಧಿಸಿದೆ. ದೇಶ ಪ್ರತಿಷ್ಠಿತ ಕಂಪನಿಗಳು ಬಂಡವಾಳವನ್ನು ಹೂಡಿವೆ. ಇಸ್ರೋ, ಎಚ್‌ಎಮ್‌ಟಿ, ಡಿಆರ್‌ಡಿಓ, ಟಿಸಿಎಸ್, ಐಬಿಎಂ, ಮೈಕ್ರೋಸಾಫ್ಟ್‌ದಂತಹ ಪ್ರತಿಷ್ಠಿತ ವಿಜ್ಞಾನ ಮತ್ತು ಮಾಹಿತಿ ತಂತ್ರಜ್ಞಾನದ ಕ್ಷೇತ್ರಗಳು ರಾಜ್ಯದಲ್ಲಿ ಮನೆ ಮಾಡಿರುವುದು ಅವಲೋಕಿಸಬಹುದು.

ಮಾತ್ರವಲ್ಲದೇ ದೇಶದ ಪ್ರತಿಷ್ಠಿತ ಬ್ಯಾಂಕ್‌ಗಳನ್ನು ಹೊಂದಿರುವ ರಾಜ್ಯ ನಮ್ಮದು. ಬೆಂಗಳೂರು ಜಗತ್ತಿನ ಶ್ರೇಷ್ಠ ನಗರಗಳಲ್ಲೊಂದಾಗಿದ್ದು ಭಾರತದ ಸಿಲಿಕಾನ್ ವ್ಯಾಲಿ ಎಂದು ಕರೆಸಿಕೊಂಡಿದೆ.

**ಶಿಕ್ಷಣ:** ಪ್ರಾಚೀನ ಕಾಲದಿಂದಲೂ ಶಿಕ್ಷಣಕ್ಕೆ ಬಹುಮೌಲಿಕ ಕೊಡುಗೆ ನೀಡಿರುವ ಕರ್ನಾಟಕ ಗುರುಕುಲ ಪದ್ಧತಿ ಶಿಕ್ಷಣವನ್ನು ಹೊಂದಿತ್ತು. ಕೂಡಲಸಂಗಮ, ನಾಗಾವಿ, ಸಾಲೋಟಗಿ, ಬಳ್ಳಿಗಾವೆ ಮಹತ್ವದ ಶಿಕ್ಷಣ ಕೇಂದ್ರಗಳಾಗಿದ್ದವು. ಸ್ತ್ರೀಯರಿಗೆ ಸಮಾನವಾದ ಶಿಕ್ಷಣ ನೀಡಿದ ಅನೇಕ ಕುರುಹುಗಳು ಶಾಸನಗಳಲ್ಲಿ ದೊರೆಯುತ್ತವೆ. 1056 ಶಾಸನದಲ್ಲಿ 'ಸ್ವಶ್ರೀ ನಾಗಾರ್ಜುನಯ್ಯನ ಮಗಳ ನಾಗಶ್ರೀ ಸರ್ವಶಾಸ್ತ್ರ ಪಾರಂಗತಮತಿಗಳ್' ಎಂದು ಉಲ್ಲೇಖಿಸಿದೆ. ಇದಕ್ಕೆ ಅನೇಕ ರಾಣಿಯರು ಶಿಕ್ಷಣದಲ್ಲಿ ಪ್ರಾವೀಣ್ಯತೆಯನ್ನು ಹೊಂದಿರುವುದು ತಿಳಿಯುತ್ತದೆ. ವಚನಕಾರ್ತಿಯರು ವಿದ್ಯಾವಂತರಾಗಿದ್ದರೆಂಬುದು ಅವರ ಸಾವಿರಾರು ವಚನಗಳಿಂದ ತಿಳಿದು ಬರುತ್ತದೆ.

ಇಂದು ಕರ್ನಾಟಕದಲ್ಲಿ 30ಕ್ಕೂ ಹೆಚ್ಚು ವಿಶ್ವವಿದ್ಯಾಲಯಗಳು ಕಾರ್ಯನಿರ್ವಹಿಸುತ್ತಿವೆ. ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್, ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್, ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ನಿಮ್ಹಾನ್ಸ್ ಮಹತ್ವದ ಕೇಂದ್ರಗಳಾಗಿವೆ. ಅನೇಕ ಪ್ರಸಿದ್ಧ ವಿಜ್ಞಾನಿಗಳು, ತಂತ್ರಜ್ಞರನ್ನು, ಶಿಕ್ಷಕರನ್ನು ನೀಡಿದ ನಾಡು ಕನ್ನಡ.

**ಕ್ರೀಡೆ:** ಕ್ರೀಡಾ ಚಟುವಟಿಕೆಗಳಿಗೂ ನಮ್ಮ ನಾಡು ಪ್ರಸಿದ್ಧಿಯನ್ನು ಗಳಿಸಿದೆ. ರಾಷ್ಟ್ರೀಯ ಅಂತರಾಷ್ಟ್ರೀ ಕ್ರೀಡಾಪಟುಗಳನ್ನು ರೂಪಿಸಿದೆ ಶ್ರೇಯಸ್ಸು ಕರ್ನಾಟಕಕ್ಕಿದೆ. ವಂದನಾ ರಾವ್, ಅಶ್ವಿನಿ ನಾಚಪ್ಪ (ಅಥ್ಲೆಟಿಕ್ಸ್), ಪ್ರಸನ್ನ್, ಜಿ.ಆರ್.ವಿಶ್ವನಾಥ, ಜಾವಗಲ್ ಶ್ರೀನಾಥ್, ರಾಹುಲ್ ದ್ರಾವಿಡ್, ಅನಿಲ್ ಕುಂಬ್ಳೆ (ಕ್ರಿಕೆಟ್) ಪ್ರಕಾಶ ಪಡಕೋಣೆ (ಬ್ಯಾಡ್ಮಿಂಟನ್) ಪಂಕಜ್ ಅಡ್ವಾನಿ (ಸ್ನೂಕರ್), ಎಂ.ಎನ್.ತ್ರಿವೇಣಿ (ಜೂಡೋ) ಮೊದಲಾದವರನ್ನು ಹೆಸರಿಸಬಹುದು.

**ಸಂಸ್ಕೃತಿ :** ಕರ್ನಾಟಕ ಪ್ರಾಚೀನ ಕಾಲದಿಂದಲೂ ತನ್ನ ವಿಶಿಷ್ಟ ಸಂಸ್ಕೃತಿಯಿಂದ ಖ್ಯಾತಿಯನ್ನು ಪಡೆದಿದೆ. ನಮ್ಮ ಜನಪದ ಕಲೆಗೆ ವಿಶ್ವವೇ ಬೆರಗಾಗಿದೆ. ಡೊಳ್ಳು ಕುಣಿತ, ಕೋಲಾಟ, ವೀರಗಾಸೆ, ಹುತ್ತರಿ, ಕರಗ, ಯಕ್ಷಗಾನ ಇತ್ಯಾದಿಗಳು. ಅದರಲ್ಲಿಯೂ ಕರ್ನಾಟಕ ಸಂಗೀತ ವಿಶಿಷ್ಟತೆ ಹೊಂದಿದೆ. ಪುರಂದರದಾಸರನ್ನು ಕರ್ನಾಟಕ ಸಂಗೀತ ಪಿತಾಮಹ ಎಂದು ಕರೆಯಲಾಗುತ್ತಿದೆ. ಪೀಟಿಲು ಚೌಡಯ್ಯ, ವೀಣೆ ದೊರೆಸ್ವಾಮಿಗಳು ಒಂದೆಡೆಯಾದರೆ ಹಿಂದೂಸ್ಥಾನಿ ಸಂಗೀತದ ದಿಗ್ಗಜರಾದ ಭೀಮಸೇನ ಜೋಶಿ, ಗಂಗೂಬಾಯಿ ಹಾನಗಲ್, ಬಸವರಾಜ ರಾಜಗುರು, ಮಲ್ಲಿಕಾರ್ಜುನ ಮನ್ಸೂರ್, ಪುಟ್ಟರಾಜ ಗವಾಯಿಗಳನ್ನು ಹೆಸರಿಸಬಹುದು.

ಕರ್ನಾಟಕ ಶಿಲ್ಪಕಲೆಗಳ ತೊಟ್ಟಿಲು ಎಂಬ ಮಾತು ಸೂರ್ಯನಷ್ಟೇ ಸತ್ಯ. ಬೇಲೂರು, ಹಳೆಬೀಡು, ಶ್ರವಣಬೆಳಗೊಳ, ಬಾದಾಮಿ, ಪಟ್ಟದಕಲ್ಲು, ಹಂಪಿ ಹೀಗೆ ನಾಡಿನುದ್ದಗಲಕ್ಕೂ ಸಾವಿರಾರು ಸಂಖ್ಯೆಯಲ್ಲಿರುವ ದೇವಾಲಯಗಳು ನಮ್ಮ ಸಂಸ್ಕೃತಿಯ ಪ್ರತಿಬಿಂಬಗಳಾಗಿವೆ. ಅಂತೆಯೇ ಪ್ರಾಚೀನ ಮಸೀದಿ, ಚರ್ಚುಗಳನ್ನು ಅವಲೋಕಿಸಬಹುದು.

ಕರ್ನಾಟಕದ ರಂಗಭೂಮಿಯ ಅಷ್ಟೇ ಸತ್ವಯುಕ್ತವಾಗಿ ಕೊಡುಗೆಯನ್ನು ನೀಡಿದೆ. ಏಣಗಿ ಬಾಳಪ್ಪನವರು, ಗುಬ್ಬಿ ವೀರಣ್ಣನವರು, ಹಿರಣ್ಣಯ್ಯ, ಮೊದಲಾದವರನ್ನು ಹೆಸರಿಸಬಹುದು. ಇದರೊಂದಿಗೆ ಸಿನಿಮಾ, ಚಿತ್ರಕಲೆ, ನಾಟ್ಯ ಹೀಗೆ ಹಲವು ನೆಲೆಗಳಲ್ಲಿ ಸಂಸ್ಕೃತಿಯು ಅನಾವರಣಗೊಂಡಿದ್ದನ್ನು ಮರೆಯುವಂತಿಲ್ಲ.

**ಧರ್ಮ:** ಕರ್ನಾಟಕವು ಹಲವು ಮತ, ಧರ್ಮಗಳ ನೆಲೆವೀಡು. ಕ್ರಿಸ್ತ ಆರಂಭದಲ್ಲಿ ಬೌದ್ಧಧರ್ಮದ ಪ್ರಭಾವ ಇದ್ದರೆ, ತದನಂತರದಲ್ಲಿ ಜೈನಧರ್ಮ ತನ್ನದೇ ಆದ ಕೊಡುಗೆಯನ್ನು ನೀಡಿತು, 11ನೇ ಶತಮಾನದ ನಂತರದಲ್ಲಿ ಶೈವ ಹಾಗೂ ವೈಷ್ಣವ ಧರ್ಮಗಳು ಕನ್ನಡ ಧಾರ್ಮಿಕ ಕ್ಷೇತ್ರವನ್ನು ಮತ್ತಷ್ಟೂ ಶ್ರೀಮಂತಗೊಳಿಸಿದವು. ಮುಂದೆ ಮಹಮದೀಯರಿಂದ ಇಸ್ಲಾಂ ಧರ್ಮದ ಪ್ರಭಾವ, ಬ್ರಿಟಿಷ್‌ರಿಂದ ಕ್ರೈಸ್ತ ಧರ್ಮಗಳ ಪ್ರಭಾವ ಉಂಟಾಗಿರುವುದನ್ನು ಗಮನಿಸಬಹುದು. ಇದೆಲ್ಲದರ ಜೊತೆಗೆ ದ್ವೈತ್, ಅದ್ವೈತ್, ವಿಶಿಷ್ಟಾದ್ವೈತಗಳ ಪ್ರಭಾವವು ಕನ್ನಡ ಆಧ್ಯಾತ್ಮ ಕ್ಷೇತ್ರವನ್ನು ವಿಸ್ತರಿಸಿತು. 12ನೇ ಶತಮಾನದಲ್ಲಿ ವೀರಶೈವ–ಲಿಂಗಾಯತ ಧರ್ಮದಿಂದ ನಾಡಿನಲ್ಲಿದ್ದ ಮೇಲು ಕೀಳು ಭಾವನೆಗಳನ್ನು ತೊಡೆದುಹಾಕು ಸರ್ವಸಮಾನತೆಯ ಸಮಾಜವನ್ನು ನಿರ್ಮಿಸಲು ಕರೆನೀಡಿದರು. ಬಸವಣ್ಣನವರು ತಮ್ಮ ಸಮಾಜೋಧಾರ್ಮಿಕ ವಿಚಾರಗಳಿಂದ ಜಾಗತಿಕ ಮನ್ನಣೆ ಪಾತ್ರವಾಗಿದ್ದನ್ನು ಗಮನಿಸಬೇಕು.

- ಹೀಗೆ ಕರ್ನಾಟಕ ಎಲ್ಲ ರಂಗಗಳಲ್ಲಿ ತಮ್ಮ ವಿಶಿಷ್ಟ ಕೊಡುಗೆಯ ಮೂಲಕ ಜಗತ್ತನ್ನು ತನ್ನತ್ತ ಸೆಳೆದಿದೆ. 2000 ವರ್ಷಗಳ ಸುದೀರ್ಘ ಪರಂಪರೆಯನ್ನು ಹೊಂದಿರುವ ಕನ್ನಡ ನಾಡನ್ನು ಭಾಷಿಕವಾಗಿ ಸಾಂಸ್ಕೃತಿಕವಾಗಿ ದಕ್ಕೆಯಾಗದ ಹಾಗೆ ಉಳಿಸಿಕೊಂಡು ಹೋಗುವುದು ಕನ್ನಡಿಗರ ಕರ್ತವ್ಯ. ಕನ್ನಡ–ಕರ್ನಾಟಕವನ್ನು ಬಲವರ್ಧನೆಗೊಳಿಸುವುದು ಇಂದಿನ ಅಗತ್ಯತೆ ಹಾಗೂ ಅನಿವಾರ್ಯತೆ ಇದೆ.

# 1. ದುರ್ಜನರ ಸಂಗಬೇಡ

ಬಸವಣ್ಣನವರ ವಚನಗಳು:

ಸಾರ ! ಸಜ್ಜನರ ಸಂಗವ ಮಾಡುವುದು
ದೂರ ! ದುರ್ಜನರ ಸಂಗವದು
ಬೇಡವಯ್ಯಾ ! ಆವ ಹಾವಾದರೇನು ?
ವಿಷವೊಂದೆ. ಅಂತವರ ಸಂಗವದು ಬೇಡವಯ್ಯಾ
ಅಂತರಂಗ ಶುದ್ಧವಿಲ್ಲದವರ ಸಂಗ ಸಿಂಗಿ ಕಾಳಕೂಟ
ವಿಷವೊ ಕೂಡಲಸಂಗಮದೇವಾ

ಅಣ್ಣ ಬಸವಣ್ಣನವರು 12ನೇ ಶತಮಾನದ ಮಹಾಶರಣರು. ತಮ್ಮ ವಚನಗಳ ಮೂಲಕ ವೈಚಾರಿಕ ಪ್ರಜ್ಞೆಗೆ ಕರೆ ನೀಡಿದವರು. ಆರೋಗ್ಯಪೂರ್ಣ ಸಮಾಜಕ್ಕೆ ಉತ್ತಮವಾದ ಸಹವಾಸವೂ ಅಗತ್ಯ ಹಾಗೂ ಅನಿವಾರ್ಯ ಎಂಬ ಚಿಂತನೆ ಬಸವಣ್ಣನವರದು.

ವ್ಯಕ್ತಿಯ ಸಾಮಾಜೀಕರಣ ದೀಕ್ಷೆಗೆ ಗೆಳೆತನವು ಒಂದು. ಅಂತಹ ಗೆಳೆತನ ಶ್ರೇಷ್ಠತಮವಾಗಿದ್ದರೆ ವ್ಯಕ್ತಿಯ ಕಲ್ಯಾಣ ಸಾಧ್ಯ. ದುರ್ಜನರ ಸಂಗ ವ್ಯಕ್ತಿಯನ್ನು ಮಾತ್ರವಲ್ಲದೇ ಸಾಮಾಜಿಕ ಆರೋಗ್ಯವನ್ನು ತಲ್ಲಣಗೊಳಿಸುತ್ತದೆ. ಅಂತೆಯೇ ಬಸವಣ್ಣನವರು ದುರ್ಜನರ ಸಂಗವನ್ನು ಹಾವಿಗೆ ಹೋಲಿಸುತ್ತಾರೆ. ಸಿಂಗಿ ಕಾಳಕೂಟದ ವಿಷವೆಂದು ಕರೆಯುತ್ತಾರೆ. ಅವರಿಂದ ಯಾವ ಸಮಾಜವು ನಿರ್ಮಾಣಗೊಳ್ಳಲಾರದು, ಉದ್ಧಾರವೂ ಆಗಲಾರದು ಎನ್ನುವ ಅಣ್ಣನವರು, ವ್ಯಕ್ತಿಯಿಂದ ಸಮಾಜ, ಸಮಾಜದಿಂದ ರಾಷ್ಟ್ರ ಎಂಬ ಧ್ಯೇಯ ಅವರ ವಚನದ ನೆಲೆಯಲ್ಲಿ ಮೂಡಿಬರುತ್ತದೆ. ಸದಾ ಸಂಪನ್ನರಾದ ಜ್ಞಾನದ ರೂಪವಾದ ಉತ್ತಮರ ಸಹವಾಸಕ್ಕೆ ಒತ್ತು ನೀಡಿರುವ ಅವರ ಈ ವಚನ ಯುವಜನಾಂಗಕ್ಕೆ ಪ್ರಸ್ತುತವೆನಿಸಿದೆ.

ಜ್ಞಾನದ ಬಲದಿಂದ ಅಜ್ಞಾನದ ಕೇಡ ನೋಡಯ್ಯಾ ;
ಜ್ಯೋತಿಯ ಬಲದಿಂದ ತಮಂಧದ ಕೇಳ ನೋಡಯ್ಯಾ;
ಸತ್ಯದ ಬಲದಿಂದ ಅಸತ್ಯದ ಕೇಡ ನೋಡಯ್ಯಾ ;
ಪರುಷದ ಬಲದಿಂದ ಅವಲೋಹದ ಕೇಡ ನೋಡಯ್ಯಾ
ಕೂಡಲಸಂಗನ ಶರಣರ ಅನುಭಾವದಿಂದ
ಎನ್ನ ಮನದ ಕೇಡ ನೋಡಯ್ಯಾ!

ಜ್ಞಾನದಿಂದ ಮಾತ್ರ ಅಜ್ಞಾನವನ್ನು ಹೋಗಲಾಡಿಸಲು ಸಾಧ್ಯ. ಹೇಗೆ ಜ್ಯೋತಿಯಿಂದ ಕತ್ತಲೆಯನ್ನು ಹೋಗಲಾಡಿಸಲು ಸಾಧ್ಯವೋ, ಹಾಗೇ ಜ್ಞಾನದ ಬಲದಿಂದ ಸದೃಢವಾದ ಸಮಾಜವನ್ನು ಕಟ್ಟಲು ಸಾಧ್ಯವೆನ್ನುತ್ತಾರೆ ಬಸವಣ್ಣನವರು. ಸತ್ಯವು ಅಸತ್ಯವನ್ನು ಸರ್ವನಾಶ ಮಾಡುತ್ತದೆ, ಪರುಷಮಣಿಯಿಂದ ಯಾವುದೇ ಲೋಕವು ಚಿನ್ನವಾಗಿ ಪರಿವರ್ತನೆಗೊಳ್ಳುತ್ತದೆ. ಅಂತೆಯೇ ಸತ್ಯ ಶರಣರ ಸಂಘದಿಂದ ಉತ್ತಮ ಸಮಾಜವು ನಿರ್ಮಾಣಗೊಳ್ಳುತ್ತದೆ. ಅಂತಹ ಶರಣರಿಂದ ನಮ್ಮ ಮನದ

ಕಲ್ಮಶವನ್ನು ತೊಡೆದುಹಾಕಲು ಸಾಧ್ಯ. ಜ್ಞಾನದ ಬಲದಿಂದ ಲೋಕಕ್ಕೆ ಬೆಳಕಾಗಬೇಕು. ಅಂತಹ ಶರಣರು (ಎಲ್ಲವನ್ನು ಗೆದ್ದವರು, ಅರಿಷಡ್ವರ್ಗಗಳ ಮೇಲೆ ವಿಜಯ ಸಂಪಾದಿಸಿದವರು ಶರಣರು) ನಮ್ಮನ್ನು ಭವಬಂಧನದಿಂದ ಬಿಡುಗಡೆಗೊಳಿಸಲು ಸಾಧ್ಯ. ಅವರ ಸಂಘವೇ ನಮ್ಮ ಬದುಕಿನ ಮೂಲಮಂತ್ರವಾಗಬೇಕು. ಅವರ ಸಂಗದಿಂದಲೇ ಅರ್ಥಪೂರ್ಣವಾದ ಸಮಾಜ ನಿರ್ಮಿಸಲು ಸಾಧ್ಯವೆಂಬುದು ಬಸವಣ್ಣನವರ ದಿವ್ಯ ಸಂದೇಶ.

ಅಕ್ಕಮಹಾದೇವಿ ವಚನಗಳು:

ಅರಿಯದವರೊಡನೆ ಸಂಗವ ಮಾಡಿದರೆ
ಕಲ್ಲು ಹೊಯ್ದು ಕಿಡಿಯ ತೆಗೆದುಕೊಂಬಂತೆ.
ಬಲ್ಲವರೊಡನೆ ಸಂಗವ ಮಾಡಿಹರೆ
ಹೊಸೆದು ಬೆಣ್ಣೆಯ ತೆಗೆದುಕೊಂಬಂತೆ.
ಚೆನ್ನಮಲ್ಲಿಕಾರ್ಜುನಯ್ಯ, ನಿಮ್ಮ ಶರಣರ ಸಂಗ
ಕರ್ಪುರ ಗಿರಿಯ ಉರಿ ಕೊಂಡಂತೆ.

ಅಕ್ಕಮಹಾದೇವಿ ಸಜ್ಜನರ ಸಂಘಕ್ಕಾಗಿ ಪ್ರೇರೇಪಿಸುತ್ತಾಳೆ. ಜ್ಞಾನವಂತರ ಸಂಗ ಮೊಸರು ಹೊಸೆದು ಬೆಣ್ಣೆಯನ್ನು ತೆಗೆದುಕೊಂಡಂತೆ. ಅದು ಹಿತಕರ, ಆರೋಗ್ಯಕರ. ನಮ್ಮ ಅಂತರಂಗದ ಬಹಿರಂಗದ ವಿಕಾಸಕ್ಕೂ ಮಧುಕರವೆನ್ನುತ್ತಾಳೆ ಅಕ್ಕ. ಅದೇ ದುರ್ಜನರ ಸಂಗ ಕಲ್ಲ ಹೊಸೆದು ಕಿಡಿಯನ್ನು ತೆಗೆದುಕೊಂಡಂತೆ ಎನ್ನುವ ಮೂಲಕ ದುರ್ಜನರ ಸಂಘದ ಪರಿಣಾಮಗಳನ್ನು ಅಕ್ಕ ಎತ್ತಿ ತೋರಿಸುತ್ತಾಳೆ. ವ್ಯಕ್ತಿಯ ವಿಕಾಸಕ್ಕೆ ಉತ್ತಮವಾದ ಸಾಂಗತ್ಯಬೇಕು. ಎಲ್ಲಿ ಉತ್ತಮವಾದ ಸಂಘ ಇರುವುದೋ ಅಲ್ಲಿ ಜ್ಞಾನವು ಮನೆಮಾಡಿಕೊಂಡಿರುವುದು. ಶರಣರ ಸಂಘವೆಂಬುದು ಜ್ಞಾನದ ಆಗರ. ಅದು ಕರ್ಪೂರದ ಗಿರಿ ಇದ್ದಂತೆ. ಕರ್ಪೂರವು ತನ್ನನ್ನೇ ದಹಿಸಿಕೊಂಡು ಪರಿಮಳವನ್ನು ನೀಡುವಂತೆ ಉತ್ತಮರು ಕೂಡ ಹಾಗೆಯೇ. ಅವರು ತಮ್ಮ ಬದುಕನ್ನೇ ಮುಡುಪಾಗಿಟ್ಟು ಇನ್ನೊಬ್ಬರ ಬದುಕನ್ನು ಕಟ್ಟಲು ಹಾತೊರೆಯುತ್ತಾರೆ. ಅಂತಹ ಸಂಗವನ್ನು ಭಗವಂತ ನನಗೆ ಕರುಣಿಸು ಎಂಬ ಹೆಬ್ಬಯಕೆ ಅಕ್ಕಮಹಾದೇವಿಯದು. ಸುಡುವ ಅಗ್ನಿಯ ಸಂಗವನ್ನು ಬಯಸದೇ ಜೀವ ನೀಡುವ ಶರಣರ ಅನುಭಾವದ ಸಂಘವನ್ನು ಹೊಂದಬೇಕೆಂದು ಅಕ್ಕ ದಿವ್ಯ ಸಂದೇಶವನ್ನೇ ಈ ವಚನದಲ್ಲಿ ನೀಡಿದ್ದಾಳೆ.

ಜೇಡರ ದಾಸಿಮಯ್ಯ:

ಕರಿಯನಿತ್ತಡೆ ಒಲ್ಲೆ, ಸಿರಿಯನಿತ್ತಡೆ ಒಲ್ಲೆ
ಹಿರಿದಪ್ಪ ರಾಜ್ಯವನಿತ್ತಡೆ ಒಲ್ಲೆ!
ನಿಮ್ಮ ಶರಣರ ಸೂಳ್ನುಡಿಯನೊಂದರೆಗಳಿಗೆಯಿತ್ತಡೆ
ನಿಮ್ಮ ನಿತ್ತೆ ಕಾಣಾ ರಾಮನಾಥಾ!

ಬಸವಣ್ಣನವರ ಪೂರ್ವದಲ್ಲಿದ್ದ ಮಹಾ ವಚನಕಾರ ದಾಸಿಮಯ್ಯನವರು. ತನ್ನ ವಚನಗಳಲ್ಲಿ ಸತ್ಯ ಶರಣರ ಸಂಗವನ್ನು ಅಪೇಕ್ಷಿಸುತ್ತಾರೆ. ಶರಣರ ಸಂಪರ್ಕ, ಶರಣರ ಒಂದು ಮಾತು ನಮ್ಮ ಬದುಕಿನ ಪಥವನ್ನೇ ಬದಲಿಸುತ್ತದೆ, ಮಾತ್ರವಲ್ಲದೇ ಅದು ನಮ್ಮ ಜೀವನದ ಮಹಾಬೆಳಕಾಗುವುದರಲ್ಲಿ ಸಂದೇಹವಿಲ್ಲವೆಂಬ ಭಾವ ದಾಸಿಮಯ್ಯನವರದು. ಅಂತೆಯೆ ಭಗವಂತನಲ್ಲಿ ಅವರು ಪ್ರಾರ್ಥಿಸುತ್ತಾರೆ 'ಆನೆ ಕೊಟ್ಟರೂ ಬೇಡ, ಸಿರಿ ಸಂಪತ್ತುಗಳನ್ನು ಕೊಟ್ಟರೂ ಬೇಡ, ನನಗೆ ಸಾಮ್ರಾಜ್ಯವನ್ನೇ ಧಾರೆ ಎರೆದರೂ ಬೇಡ, ಅವೆಲ್ಲಕ್ಕೂ ಮಿಗಿಲಾದ ಶರಣರ ಒಂದು ಹಿತನುಡಿ ಸಾಕೆಂದು' ವಿನಂತಿಸಿಕೊಳ್ಳುತ್ತಾರೆ. ಶರಣರೆಂದರೆ ಬೆಲೆಕಟ್ಟಲಾರದವರು. ಉಪಮಿಸಲು ಉಪಾತೀತರು. ಸತ್ಯಶುದ್ಧ ಜೀವನವನ್ನು ನಡೆಸಿದವರು. ಅಂತವರ ಸಂಘಬೇಕೆಂದು ಮನಸಾರೆ ಹಾತೊರೆಯುತ್ತಾರೆ.

ಎಳ್ಳು ಇಲ್ಲದ ಗಾಣದಲ್ಲಿ ಎಣ್ಣೆಯುಂಟೇ?
ಜೊಳ್ಳು ತೂರಿದಲ್ಲಿ ಬತ್ತ ಉಂಟೇ?
ಕಳ್ಳಹಾದರಿಗರ ಸಂಪಾದನೆ ಹೊಳ್ಳ ಕುಟ್ಟಿ ಕೈ
ಹೊಟ್ಟಾದಂತೆ ಕಾಣಾ ರಾಮನಾಥಾ

ಕಳ್ಳ ಮಾರ್ಗದಿಂದ ಗಳಿಸಿದ ಸಂಪತ್ತಿಗೆ ಅರ್ಥವಿಲ್ಲ. ಸತ್ಯದ ದುಡಿಮೆಯ ಸಂಪಾದನೆ ಮಾತ್ರ ಭಗವಂತನ ಪ್ರೀತಿಗೆ ಪಾತ್ರವಾಗುತ್ತದೆ. ಅಂತಹ ಸತ್ಯಮಾರ್ಗದ ದುಡಿಮೆಯ ಫಲ ನಮ್ಮದಾಗಲೆಂಬ ಸಂದೇಶವನ್ನು ದಾಸಿಮಯ್ಯನವರು ವಚನದಲ್ಲಿ ಮಾರ್ಮಿಕವಾಗಿ ಹೇಳುತ್ತಾರೆ.

ಒಟ್ಟಿನಲ್ಲಿ ಶರಣರ ಈ ವಚನಗಳನ್ನು ಅವಲೋಕಿಸಿದಾಗ ಸಮಾಜದ ಸ್ವಾಸ್ಥ್ಯಕ್ಕೆ, ಉತ್ತಮವಾದ ನಾಳೆಗಳಿಗೆ ಸಜ್ಜನರ ಒಡನಾಟಬೇಕು. ಉತ್ತಮರ ಸಂಗದಿಂದ ಮಾತ್ರ ಬದುಕು ಭವ್ಯತೆಗೆ ಏರಲು ಸಾಧ್ಯ. ಸುಂದರ ಸಮಾಜ–ದೇಶವನ್ನು ಕಟ್ಟಲು ಸಾಧ್ಯ. ಸದಾಚಾರ ಸಂಪನ್ನ ಗುಣಗಳು ಮಾತ್ರ ನಮ್ಮ ಭವಿಷ್ಯವನ್ನು ಅದ್ಭುತವಾಗಿ ನಿರ್ಮಿಸುತ್ತವೆ. ಇಂದಿನ ಮನ್ವಂತರಕ್ಕೆ ಶರಣರ ಈ ಸಂದೇಶಗಳು ಪೂಜ್ಯನೀಯ ಹಾಗೂ ಅನುಕರಣೀಯವೆನಿಸಿವೆ.

# ಕುಲ ಕುಲ ಕುಲವೆಂದು ಹೊಡೆದಾಡದಿರಿ

## ಕನಕದಾಸರು

ಕುಲ ಕುಲ ಕುಲವೆಂದು ಹೊಡೆದಾಡದಿರಿ
ನಿಮ್ಮ ಕುಲದ ನೆಲೆಯನ್ನೇನಾದರೂ ಬಲ್ಲಿರಾ ಬಲ್ಲಿರಾ
ಕುಲ ಕುಲ ಕುಲವೆಂದು ಹೊಡೆದಾಡದಿರಿ

ಹುಟ್ಟದ ಯೋನಿಗಳಿಲ್ಲ
ಮೆಟ್ಟದ ಭೂಮಿಗಳಿಲ್ಲ
ಅಟ್ಟು ಉಣ್ಣದ ವಸ್ತುಗಳಿಲ್ಲ
ಗುಟ್ಟು ಕಾಣಿಸಬಂತು ಹಿರಿದೇನು ? ಕಿರಿದೇನು ?
ಮೆತ್ತನೆ ಸರ್ವಜ್ಞನೆನೆ ಕಂಡ್ಯಾ ಮನುಜ

ಜಲವೆ ಸಕಲ ಕುಲಕ್ಕೆ ತಾಯಿಲ್ಲವೆ
ಜಲದ ಕುಲವನ್ನೇನಾದರೂ ಬಲ್ಲಿರಾ
ಜಲದ ಬೊಬ್ಬುಳಿಯಂತೆ ಸ್ಥಿರವಲ್ಲ ಈ ದೇಹ
ನೆಲೆಯ ಅರಿತು ನೀ ಹರಿಯ ನೆನೆ ಮನುಜ

ಹರಿಯೇ ಸರ್ವೋತ್ತಮ ಹರಿಯೇ ಸರ್ವೇಶ್ವರ
ಹರಿಮಯವೆಲ್ಲವೆನುತ ತಿಳಿದು
ಸಿರಿಕಾಗಿನೆಲೆಯಾದಿಕೇಶವರಾಯನ
ಚರಣ ಕಮಲವನು ಕೀರ್ತಿಸುವನೆ ಕುಲಜ
ಕುಲ ಕುಲ ಕುಲವೆಂದು ಹೊಡದಾಡದಿರಿ

## ಕುಲ ಕುಲ ಕುಲವೆಂದು ಹೊಡೆದಾಡದಿರಿ

ಕನಕದಾಸರು 15ನೇ ಶತಮಾನದ ದಾಸಪಂಥದ ಶ್ರೇಷ್ಠ ದಾಸರಲ್ಲಿ ಒಬ್ಬರು. ಮೂಲತಃ ಹಾವೇರಿ ಜಿಲ್ಲೆಯ ಬಾಡ ಗ್ರಾಮದಲ್ಲಿ ಜನಿಸಿದರು. ಮೊದಲು ಪಾಳೆಗಾರರಾಗಿದ್ದ ಅವರು ನಂತರ ದಾಸಪಂಥವನ್ನು ಸೇರಿದರು. ವ್ಯಾಸರಾಯರ ಶಿಷ್ಯರಾಗಿ ಸಾವಿರಾರು ಕೀರ್ತನೆಗಳನ್ನು ರಚಿಸಿದ್ದಾರೆ. ಮೋಹನ ತರಂಗಿಣಿ, ನಳಚರಿತ್ರೆ, ರಾಮಧಾನ್ಯ ಚರಿತ್ರೆ, ಹರಿಭಕ್ತಿ ಸಾರ ಕೃತಿಗಳನ್ನು ರಚಿಸಿದ್ದಾರೆ. ತಮ್ಮ ಕೀರ್ತನೆಗಳ ಮೂಲಕ ಧಾರ್ಮಿಕ ಹಾಗೂ ಸಾಮಾಜಿಕ ವಿಮರ್ಶೆಯನ್ನು ಮಾಡಿರುವ ಅವರ ವಿಚಾರಗಳು ಇಂದಿಗೂ ಪ್ರಸ್ತುತವೆನಿಸಿವೆ.

ಕುಲ ಜಾತಿಗಳು ನಮ್ಮ ಸಮಾಜವನ್ನು ಒಡೆದು ಬಿಟ್ಟಿದ್ದು ಸುಳ್ಳಲ್ಲ. ಜಾತಿಗಳ ಆಧಾರದ ಮೇಲೆ ಸಮಾಜವನ್ನು ಕಟ್ಟಿದ ಸನಾತನವಾದಿಗಳು ಒಂದೆಡೆಯಾದರೆ, ನಾವೆಲ್ಲ ಅವುಗಳನ್ನು ಇಂದಿಗೂ ಪೋಷಿಸಿಕೊಂಡು ಹೋಗುತ್ತಿದ್ದೇವೆ. ಅಂತೆಯೆ ಶರಣರು, ಸಂತರು, ದಾಸರು ಸಮಾಜದಲ್ಲಿ ಬೀರುಬಿಟ್ಟಿದ್ದ ಜಾತಿವ್ಯವಸ್ಥೆಯನ್ನು ತೊಡೆದುಹಾಕಲು ಹೋರಾಡಿದರು. ಸಾಮಾಜಿಕ–ಧಾರ್ಮಿಕ ಕ್ರಾಂತಿಯನ್ನುಂಟುಮಾಡಿದರು.

ಶರಣರು ಕುಲವೇನು ಆವಂದಿರ ಕುಲವೇನು ಸಕಲಜೀವಾತ್ಮರಿಗೆ ಲೇಸನ್ನು ಬಯಸುವ ಕೂಡಲಸಂಗನ ಶರಣರೇ ಕುಲಜರೆಂದು ವ್ಯಾಖ್ಯಾನಿಸಿದರು. ಅಂತೆಯೆ ಮುಂದೆ ಬಂದ ದಾಸ ಶ್ರೇಷ್ಠರಾದ ಕನಕದಾಸರು ಅಂತಹ ಕುಲದ ನೆಲೆಯನ್ನು ಅತ್ಯಂತ ಮಾರ್ಮಿಕವಾಗಿ ವ್ಯಾಖ್ಯಾನಿಸಿದ್ದಾರೆ. ಈ ಲೋಕದಲ್ಲಿ ಯಾವುದು ಮೇಲಲ್ಲ–ಕೀಳಲ್ಲ, ಪ್ರಕೃತಿಯು ಎಲ್ಲರಿಗೂ ಸಮಾನತೆಯಿಂದ ಕಂಡಿದೆ. ಎಲ್ಲವೂ ಮೈಲಿಗೆಯಿಂದಲೇ ಜೀವಿ ಜನ್ಮವನ್ನು ತಾಳುವಾಗ ಮಡಿಯ ಪ್ರಶ್ನೆ ಎಲ್ಲಿ ಬಂತು. ಎಲ್ಲರೂ ಭೂಮಿಯ ಮೇಲೆಯೇ ನಡೆಯಬೇಕು, ಬದುಕಬೇಕು, ಎಲ್ಲವನ್ನೂ ಪಡೆಯಬೇಕು ಹೊರತು ಯಾವುದನ್ನು ಬಿಟ್ಟು ಬದುಕಲಾಗುವುದಿಲ್ಲ. ಪ್ರಕೃತಿಧರ್ಮ ಎಲ್ಲವನ್ನೂ ಸಮಾನವಾಗಿಯೇ ನೀಡಿರುವಾಗ ನಮ್ಮ ನಮ್ಮಲ್ಲಿ ತರತಮಭಾವವನ್ನು ಹೊಂದುವುದು ಎಷ್ಟು ಉಚಿತವೆಂಬ ಭಾವ ಕನಕದಾಸರು.

ಜಲವೇ ಲೋಕಕ್ಕೆ ಜೀವಾಳ. ಅದರ ಮೂಲವನ್ನು ನಾವು ನೋಡುತ್ತೇವೆಯೇ. ಕನಕದಾಸರೆ ಹೇಳುವಂತೆ ಜಲ ಮೀನಿನ ಎಂಜಲು, ಹಸುವಿನ ಹಾಲು ಕರುವಿನ ಎಂಜಲು! ಇದು ಲೋಕದ ಸತ್ಯ. ಈ ಭೂಮಿಯಲ್ಲಿ ನಾವಾರೂ ಸ್ಥಿರವಲ್ಲ, ಒಂದು ದಿನ ಸಾವು ನಮ್ಮನ್ನು ಕೈಬೀಸಿ ಕರೆಯುವದರಲ್ಲಿ ಸಂದೇಹವಿಲ್ಲ. ಜಲದ ಮೇಲಿನ ಬೊಬ್ಬಳಿಯಂತೆ ಈ ಬದುಕು ಅಸ್ಥಿರ. ಆದರೂ ನಾವು ನಮ್ಮ ನಮ್ಮ ಕುಲ ಧರ್ಮಗಳಿಗೆ ಹೋರಾಡುವುದನ್ನು ಬಿಟ್ಟಿಲ್ಲ. ಪಂಪ ಹೇಳುವಂತೆ 'ಮಾನವ ಕುಲವೇ ಸತ್‌ಕುಲ' ಎಂಬ ಮನೋಭಾವ ನಮ್ಮದಾಗಬೇಕಾಗಿದೆ. ಕುಲಕುಲವೆಂದು ಹೊಡೆದಾಡುವದರಲ್ಲಿ ಯಾವ ಅರ್ಥವೂ ಇಲ್ಲವೆಂಬ ಸದಾಶಯ ದಾಸರದೂ ಆಗಿದೆ.

ಹೃದಯದ ಸಿರಿತನಕ್ಕೆ ನಾವು ಹಾತೊರೆಯಬೇಕಾಗಿದೆ. ಎಲ್ಲರಿಗೂ ಸದಿಚ್ಛೆಯನ್ನು ಮಾಡುವ ಮನೋವೃತ್ತಿಯೇ ನಿಜ ಕುಲ. ಯಾರು ದೀನದಲಿತರ ಸೇವೆಯನ್ನು ಮಾಡುತ್ತಾರೋ, ಅನಾಥರ ಸಂರಕ್ಷಣೆಯನ್ನು ಮಾಡುತ್ತಾರೋ ಅದೇ ನಿಜಧರ್ಮ. ಅದೇ ಪರಮಾತ್ಮನನ್ನು ಕಾಣುವ ಭಾವ. ಹಾಗೇ ಹೃದಯದಲ್ಲಿ ಪರಮಾತ್ಮನನ್ನು ಕಾಣುವ ಭಾವ ಮೂಡಿದಾಗ ನಿಜಕುಲದ ನೆಲೆ ಅರಿಯಲು ಸಾಧ್ಯ.

'ಹರಿಯೇ ಸರ್ವೋತ್ತಮ ಹರಿಯೇ ಸರ್ವೇಶ್ವರ
ಹರಿಮಯವೆಲ್ಲವೆನುತ ತಿಳಿದು

ಸಿರಿಕಾಗಿನೆಲೆಯಾದಿಕೇಶವರಾಯನ

ಚರಣ ಕಮಲವನು ಕೀರ್ತಿಸುವನೆ ಕುಲಜ' ಎಂಬ ದಿವ್ಯ ಸಂದೇಶವನ್ನು ಕನಕದಾಸರದು ನೀಡುತ್ತಾರೆ.

ಅಂತೆಯೆ ಪುರಂದರದಾಸರು ಕೂಡ ಕನಕದಾಸರ ಸಮಕಾಲೀನರು. ಅವರು ಕುಲದ ಕುರಿತು ಆಡುವ ಮಾತುಗಳು ಮೌಲಿಕವೆನಿಸಿವೆ.

'ಆವ ಕುಲವಾದರೇನು ಆವನಾದರೇನು ಆತ್ಮ

ಭಾವವರಿತ ಮೇಲೆ' ಎನ್ನುವ ಅವರು ಉತ್ತಮವಾದ ಆತ್ಮವೇ ಕುಲ. ಮನಸ್ಸಿಗೆ ಉತ್ತಮವಾದ ಸಂಸ್ಕಾರವನ್ನು ನೀಡಿ ಸರ್ವಸಮಾಜವನ್ನು ಸಮಾನವಾಗಿ ಕಾಣು ಭಾವ ಮೊಳೆಯಬೇಕೆಂದು ಆಶಿಸುತ್ತಾರೆ.

ಕಬ್ಬು ಡೊಂಕಾಗಿರಬಹುದು ಆದರೆ ಅದರ ಸಹಿ ಡೊಂಕಾಗಿರುವುದಿಲ್ಲ. ಹಸು ವರ್ಣದಲ್ಲಿ ಕಪ್ಪಾಗಿರಬಹುದು ಆದರೆ ಅದು ನೀಡುವುದು ಅಮೃತದ ಸುಧೆಯನ್ನೇ. ಆದ್ದರಿಂದ ಮನಸ್ಸಿನ ವಿಷಾದಿಗಳನ್ನು ಮೊದಲು ತೊರೆಯಬೇಕಾಗಿದೆ. ಹೀನ ಕರ್ಮಗಳನ್ನು ಬಿಟ್ಟು ಜ್ಞಾನವನ್ನು ಪಡೆಯುವಲ್ಲಿ ನಾವೆಲ್ಲ ಹಾತೊರೆಯಬೇಕಾಗಿದೆ.

'ಕುಲದ ಮೇಲೆ ಹೋಗಬೇಡ ಮನುಜಾ

ಕುಲವಿಲ್ಲ ಜ್ಞಾನಿಗಳಿಗೆ

ವರದ ಪುರಂದರವಿಠಲನ

ಪಾದವ ಸೇರಿ ಮುಕ್ತನಾಗೋ' ಎಂಬ ದಿವ್ಯ ಸಂದೇಶವನ್ನೇ ಪುರಂದರದಾಸರು ಕುಲದ ನೆಲೆಯಲ್ಲಿ ನೀಡಿದ್ದಾರೆ.

ಒಟ್ಟಿನಲ್ಲಿ ಇರ್ವ ದಾಸರು ಕುಲಮದಗಳಿಂದ ಹೊರಬಂದು ಸುಂದರವಾದ ಸಮಾಜವನ್ನು ನಿರ್ಮಿಸುವ ಸಂಕಲ್ಪ ನಮ್ಮದಾದಾಗ ಮಾನವ ಭವ್ಯತೆಗೆ ಏರಲು ಸಾಧ್ಯವೆಂಬ ವಾಣಿ ಅವರ ಕೀರ್ತನೆಗಳಲ್ಲಿ ಇದೆ.

# ಆಳಾಗಬಲ್ಲವನು ಆಳುವನು

ಸರ್ವಜ್ಞ

12ನೇ ಶತಮಾನದ ಶರಣರು ಸಮಾನತೆಗಾಗಿ ಕಾಯಕವನ್ನು ಒಂದು ವ್ರತವನ್ನಾಗಿ ಸ್ವೀಕರಿಸಿದರು. ಸತ್ಯ ಶುದ್ಧವಾದ ಕ್ರಿಯೆಯನ್ನು ಕಾಯಕವೆಂದು ಕರೆದರು. ಕೆಲಸ ಯಾವುದಾದರೇನು, ಪ್ರತಿಯೊಬ್ಬ ವ್ಯಕ್ತಿಯು ಒಂದೊಲ್ಲೊಂದು ಸತ್ಯ ಶುದ್ಧವಾದ ದುಡಿಮೆಯನ್ನು ಮಾಡಬೇಕು. ನಾವು ಮಾಡುವ ಕೆಲಸದಲ್ಲಿಯೇ ಭಗವಂತನನ್ನು ಕಾಣಬೇಕೆಂಬ ಸಿದ್ಧಾಂತಕ್ಕೆ ಶರಣರು ಪ್ರಾಧಾನ್ಯತೆ ನೀಡಿದರು. ಮುಂದೆ 16ನೇ ಶತಮಾನದಲ್ಲಿ ಸರ್ವಜ್ಞನೂ ಕೂಡ ತನ್ನ ವಚನಗಳ ಮೂಲಕ ಕಾಯಕದ ಪ್ರಾಮುಖ್ಯತೆಯನ್ನು ಒತ್ತಿ ಹೇಳಿದ್ದಾನೆ.

ವ್ಯಕ್ತಿ ಕ್ರಿಯಾವಂತನಾಗಬೇಕು ಹಾಗೂ ತನ್ನ ಕೊನೆ ಉಸಿರಿನವರೆಗೂ ಕಾಯಕದಲ್ಲಿ ನಿರತನಾದಾಗಲೇ ಅವನ ಬದುಕಿಗೆ ಅರ್ಥ ಬರಲು ಸಾಧ್ಯ. ಕೆಲಸವಿಲ್ಲದ ವ್ಯಕ್ತಿ ಸಮಾಜದಲ್ಲಿ ಮೌಲ್ಯವನ್ನು ಕಳೆದುಕೊಂಡಂತೆ. ಕಾಯಕವಂತನು ನಾಯಕನ ಸಮಾನ ಎಂಬ ಅಂಬೋಣ ಸರ್ವಜ್ಞನದು.

'ಕಾಯಕವು ಉಳ್ಳನಕ । ನಾಯಕನು ಎನಿಸಿಪ್ಪ।
ಕಾಯಕವು ತೀರ್ದ ಮರುದಿನವೆ ಸುಡುಗಾಡ
ನಾಯಕನು ಎನಿಪ ಸರ್ವಜ್ಞ॥

ಎನ್ನುವ ಮೂಲಕ ಕಾಯಕಕ್ಕೆ ಇರುವ ಗೌರವ ಸ್ಥಾನವನ್ನು ಸೂಚ್ಯವಾಗಿ ವಿವರಿಸುತ್ತಾನೆ. ಯಾರು ಕಷ್ಟಪಟ್ಟು ದುಡಿಯುತ್ತಾರೋ ಅವರಿಗೆ ಎಲ್ಲೆಡೆಗೂ ಗೌರವ ಆದರಗಳು ತಪ್ಪಿದಲ್ಲ. ಆಳಾಗಬೇಕು ಅರಸನಾಗಿ ಉಣ್ಣಬೇಕು ಎಂಬ ತತ್ತ್ವ ಸರ್ವಜ್ಞನದು. ಯಾರೂ ದುಡಿಮೆಯಿಂದ ದೂರಸರಿದು ಸೋಮಾರಿಯಾಗಿ ಇನ್ನೊಬ್ಬರ ಮೇಲೆ ಅವಲಂಬಿತರಾಗಿ ಬದುಕುತ್ತಾರೆಯೋ ಅವರಿಗೆ ಸುಡುಗಾಡ ನಾಯಕರಾಗಿ, ಕಡೆಯಲ್ಲಿ ಹಾಳಾಗಿ ಹೋಗುವುದರಲ್ಲಿ ಯಾವುದೇ ಸಂದೇಹವಿಲ್ಲವೆಂದು ಖಾರವಾಗಿಯೇ ಸರ್ವಜ್ಞ ವಿಡಂಬಿಸುತ್ತಾರೆ.

ಯಾವ ವ್ಯಕ್ತಿ ಹುಡುಕಿ ಕೆಲಸದಲ್ಲಿ ತೊಡುತ್ತಾನೆಯೋ ಅವನಿಗೆ ಲೋಕ ನವನೂತನವಾಗಿ ಕಾಣುತ್ತದೆ. ಕೆಲಸವನ್ನು ಹುಡುಕಿ ಪಡೆಯಬೇಕಾಗಿದೆ. ಕಾಯಕ್ಕೆ ಕಷ್ಟ ಬಂದಲಾಗಲೇ ಸುಖ ಮನೆ ಮಾಡುತ್ತದೆ. ವ್ಯಕ್ತಿ ತಾನು ಮಾಡುವ ಕೆಲಸ ತನ್ನೊಬ್ಬನನ್ನೇ ಎತ್ತಿಹಿಡಿಯುವುದಿಲ್ಲ ಇಡೀ ಸಮಾಜವನ್ನೇ ಎತ್ತಿಹಿಡಿಯುತ್ತದೆ. ಬೆಳೆಸುತ್ತದೆ. ಅಭಿವೃದ್ಧಿಗೊಳಿಸುತ್ತದೆ. ಕಾಯಕವ್ರತದ ಮೇಲೆ ಒಂದು ಸಮಾಜ ರಾಷ್ಟ್ರ ನಿರ್ಮಾಣಗೊಳ್ಳುತ್ತದೆ. ಅಂತಹ ಕಾಯಕ ಸಂಸ್ಕೃತಿ ನಮ್ಮದಾಗಬೇಕಾಗಿದೆ.

ಉದ್ಯೋಗವುಳ್ಳವನ । ಹೊದ್ದುವುದು ಸಿರಿಬಂದು
ಉದ್ಯೋಗವಿಲ್ಲದಿರುವವನು ಕರದೊಳಗೆ ।
ಇದ್ದುದೂ ಪೋಕು ಸರ್ವಜ್ಞ॥

ಸತ್ಯಶುದ್ಧವಾದ ಕೆಲಸ ಮಾಡಿದರೆ ಎತ್ತ ನೋಡಿದರತ್ತ ಲಕ್ಷ್ಮೀ ತಾನಾಗಿಪ್ಪಲೆಂದು ನಮ್ಮ ಶರಣರು ಹೇಳುತ್ತಾರೆ, ಕಾಯಕವೇ ಕೈಲಾಸ, ದುಡಿಮೆಯೇ ದುಡ್ಡಿನ ತಾಯಿ, ಕೈ ಕೆಸರಾದರೆ ಬಾಯಿ ಮೊಸರು ಎನ್ನುವ ಹಿತನುಡಿಯಂತೆ ಕಾಯಕದ ಮೇಲ್ಮೆಯನ್ನು ಅರಿಯಬೇಕಾಗಿದೆ. ದುಡಿಮೆ ಮನುಷ್ಯನ ಬದುಕನ್ನು ಸುಂದರಗೊಳಿಸುವ ಅಸ್ತ್ರ. ಅಂತಹ ದುಡಿಮೆಯಿಂದ ಮನೆ ಮನಗಳನ್ನು ಬೆಳಗಿಸುವುದಷ್ಟೇ ಅಲ್ಲ ಇಡೀ ಸಮಾಜವನ್ನೇ ಪುನರ್‌ನಿರ್ಮಾಣಮಾಡಲು ಸಾಧ್ಯ. ಕಾಯಕ ಸಂಸ್ಕೃತಿಯನ್ನು ಅಪ್ಪಿಕೊಂಡಿರುವ ಜಗತ್ತಿನ ಹಲವಾರು ರಾಷ್ಟ್ರಗಳು ಅದ್ಭುತವಾಗಿ ಬೆಳೆದುನಿಂತಿವೆ. ಜಗತ್ತಿನ ನೂರೆಂಟು ಸವಾಲುಗಳನ್ನು ಎದುರಿಸಿ ನಿಂತಿವೆ. ಅಂತಹ ದುಡಿಮೆಯ ವ್ರತವನ್ನು ನಾವಿಂದು ಹೊಂದಬೇಕಾಗಿದೆ. ಯಾರು ನಿಜ ದುಡಿಮೆಗಾರ ಇದ್ದಾರೋ ಅವರೆಂದಿಗೂ ಆಸರಿಕೆ ಬೆಸರಿಕೆ ಇಲ್ಲ.

ಅಂತೆಯೆ ಸರ್ವಜ್ಞನು ಒಂದು ಅದ್ಭುತವಾದ ಮಾತನ್ನು ಹೀಗೆ ಹೇಳುತ್ತಾನೆ,

ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆಯೇ ಮೇಲು
ಮೇಟಿಯಿಂ ರಾಟಿ ನಡೆದುದಲ್ಲದೆ ದೇಶ
ದಾಟವೆ ಕೆಡುಗು ಸರ್ವಜ್ಞ

ಎಲ್ಲ ವಿದ್ಯೆಗಳಲ್ಲಿ ಒಕ್ಕಲುತನದ ವಿದ್ಯೆಯೇ ಶ್ರೇಷ್ಠ. ರೈತ ದುಡಿದರೆ ದೇಶದ ಹೊಟ್ಟೆ ತುಂಬುತ್ತದೆ. ಅಂತಹ ಕೃಷಿ ಕೋಟಿ ವಿದ್ಯೆಗಳಿಗಿಂತಲೂ ಶ್ರೇಷ್ಠ ಎಂದು ಘಂಟಾಘೋಷವಾಗಿ ಹೇಳುತ್ತಾನೆ. ಕೃಷಿಯಿಂದ ರಾಟಿ ನಡೆದರೆ ಮಾತ್ರ ದೇಶ ಬದುಕಲು ಸಾಧ್ಯ. ಹಾಗಾಗೀ ದೇಶ ಮುನ್ನಡೆಯಬೇಕಾದರೆ ಎಲ್ಲರೂ ದುಡಿಯಲೇಬೇಕು.

ಯಾವ ದೇಶವು ಹಗಲಿರುಳು ದುಡಿಯುತ್ತದೆ. ಆ ದೇಶ ಆರ್ಥಿಕವಾಗಿ ಬಲಿಷ್ಠವಾಗುತ್ತದೆ, ಮಾತ್ರವಲ್ಲದೆ ಎಲ್ಲ ಸಮಸ್ಯೆಗಳನ್ನು ಮೆಟ್ಟಿ ಮುನ್ನಡೆಯುತ್ತದೆ. ಅಂತಹ ದುಡಿಯುವ ಸಂಸ್ಕೃತಿಯನ್ನು ಹೊಂದಬೇಕಾಗಿದೆ. ತನ್ನ ದುಡಿಮೆಯಿಂದ ನಾನೊಬ್ಬನ್ನೇ ಬದುಕುವುದಲ್ಲ, ಇಡೀ ಸಮಾಜವನ್ನೇ ಬದುಕಿಸುವ ಮಹೋನ್ನತ ನಿಲುವು ನಮ್ಮದಾಗಬೇಕಾಗಿದೆ. ಕಾಯಕ–ದಾಸೋಹ–ಪ್ರಸಾದ ಸಿದ್ಧಾಂತಗಳು ಜೀವನದ ಧ್ಯೇಯಗಳಾಗಬೇಕು. ಸರ್ವಜ್ಞನ ಒಂದೊಂದು ಮಾತಿನಲ್ಲಿಯೂ ವಿಶ್ವಸತ್ಯವೇ ಅಡಗಿದೆ. ಅದನ್ನು ಅನುಕರಣೆಯಲ್ಲಿ ತಂದಾಗ ಮಾತ್ರ ನಮ್ಮ ಜೀವನಕ್ಕೆ ಬೆಲೆ ಬರಲು ಸಾಧ್ಯ.

# ಪೆಣ್ಣು ಪೆತ್ತವರು ಪೆರ್ಚುವರು

ಸಂಚಿ ಹೊನ್ನಮ್ಮ

ಹೆಣ್ಣು-ಗಂಡುಗಳು ಸೃಷ್ಟಿಯ ಎರಡು ಕಣ್ಣುಗಳು. ಆದರೆ ಹೆಣ್ಣನ್ನು ತುಚ್ಛವಾಗಿ ನೋಡುವ, ಅಬಲೆಯೆಂದು ಹಂಗಿಸುವ ಕೆಟ್ಟ ಪದ್ಧತಿ ಇಂದಿಗೂ ನಮ್ಮ ಸಮಾಜದಲ್ಲಿ ಒಂದು ದೊಡ್ಡ ಪಿಡುಗಾಗಿಯೇ ಉಳಿದಿದೆ. ಆದರೆ ಹೆಣ್ಣು ಅಬಲೆಯಲ್ಲ. ಹುಟ್ಟಿದ ಮನೆ, ಸೇರಿದ ಮನೆಗಳೆರಡನ್ನೂ ಉದ್ಧರಿಸುವ ಚೈತನ್ಯರೂಪಿ. ಗಂಡಿಗೆ ಸರಿಸಮನಾಗಿ ಎಲ್ಲ ಜವಾಬ್ದಾರಿಗಳನ್ನು ಅವಳು ನಿರ್ವಹಿಸಬಲ್ಲಳು ಎಂಬ ವಿಚಾರದ 'ಪೆಣ್ಣು ಪೆತ್ತವರು ಪೆರ್ಚುವರು' ಎಂಬ ಸಂಚಿ ಹೊನ್ನಮ್ಮಳ 'ಹದಿಬದೆಧರ್ಮ' ಕಾವ್ಯದಲ್ಲಿ ಮನೋಜ್ಞವಾಗಿ ಮೂಡಿಬಂದಿದೆ.

17ನೇ ಶತಮಾನದಲ್ಲಿದ್ದ ಸಂಚಿ ಹೊನ್ನಮ್ಮಳು ಸ್ತ್ರೀತನವನ್ನು ಎತ್ತಿಹಿಡಿದ ದಿಟ್ಟಮಹಿಳೆಯಾಗಿದ್ದಾರೆ. ಅಕ್ಕಮಹಾದೇವಿಯ ನಂತ ಸ್ತ್ರೀವಾದಿ ವಿಚಾರಗಳನ್ನು ಸ್ಪಷ್ಟವಾಗಿ ನಿರೂಪಿಸಿದ ಮೊದಲ ಕವಿಯಿತ್ರಿ. ಪುರುಷ ಪ್ರಧಾನ ಸಮಾಜ ಮಹಿಳೆಯನ್ನು ಸಮಾನವಾಗಿ ಕಾಣಬೇಕೆಂಬ ಹೊನ್ನಮ್ಮಳ ಕಳಕಳಿ ಕಾಳಜಿಗಳು ಅಕ್ಷೇಪ್ಷಲ್ಲ.

ಪೆಣ್ಣು ಪೆತ್ತವರ ಬಳಗ ಬೆಳವುದು ಬೇಗ
ಪೆಣ್ಣು ಪೆತ್ತವರು ಪೆರ್ಚುವರು
ಪೆಣ್ಣು ಪೆತ್ತುದರಿಂದೆ ಪೆಸರೆನಿಸಿತು ಮಿಗೆ
ಬಣ್ಣವೇರಿತು ಪಾಲ್ಗಡಲು

ಹೆಣ್ಣು ಸಮಾಜದ ಕಣ್ಣು, ಅವಳಿಲ್ಲದೇ ಜಗವನ್ನು ಊಹಿಸುವುದು ಕಷ್ಟ. ಎರಡು ಕೈಗಳು ಸೇರಿದಾಗ ಚಪ್ಪಾಳೆ ಹೇಗೋ ಹಾಗೆಯೇ ಗಂಡು-ಹೆಣ್ಣುಗಳು ಇದ್ದರೆ ಜಗತ್ತು. ಈ ಸತ್ಯವನ್ನು ಅರಿಯಬೇಕಾಗಿದೆ. ಹೆಣ್ಣು ಹುಟ್ಟಿದ ಮಾತ್ರಕ್ಕೆ ಹಳಿಯುವ ಪ್ರಮೆಯ ಇಲ್ಲ. ಹೆಣ್ಣಿನಿಂದಲೇ ಈ ಜಗತ್ತು ಮತ್ತಷ್ಟು ಭವ್ಯತೆಗೆ ಏರಿದೆ. ಇದನ್ನು ಅರಿತು ನಡೆಯಬೇಕಾಗಿದೆ. ಮನದ ವಿಕಾರಗಳನ್ನು ತೊಡೆದುಹಾಕಿ ಅವಳಿಗೆ ಸಮಾನವಾದ ಸ್ಥಾನ ನೀಡಬೇಕೆಂದು ಹೊನ್ನಮ್ಮಳು ಮತ್ತೆ ಮತ್ತೆ ಹಾತೊರೆಯುತ್ತಾಳೆ.

ಶಿವ, ಬ್ರಹ್ಮ, ಜನಕ ಮಹಾರಾಜರು ಹೆಣ್ಣಿನಿಂದಲೇ ಲೋಕದಲ್ಲಿ ಬೆಳಗಿದರು. ಪಾರ್ವತಿಯಿಂದ ಶಿವ ಅರ್ಧನಾರೀಶ್ವರನಾದ, ಸರಸ್ವತಿಯಿಂದ ಬ್ರಹ್ಮ ಶ್ರೇಯಸ್ಸು ಪಡೆದ, ಸೀತಾಮಾತೆಯಿಂದ ಜನಕ ಮಹಾರಾಜನ ಕೀರ್ತಿ ಅಮರವಾಗಿ ಉಳಿಯಿತು. ಅಂತಹ ದೈವಾಂಶ ಸಂಭೂತಳಾದ ಹೆಣ್ಣನ್ನು ನಿಂದಿಸುವುದು ಖಂಡನಾರ್ಹವೆಂದು ಹೇಳುತ್ತಾಳೆ.

ಈ ಲೋಕದ ನಿಜವಾದ ಸೃಷ್ಟಿಕರ್ತೆ ಹೆಣ್ಣು, ಅವಳು ಲೋಕಪೂಜ್ಯಳು ಎಂಬ ತಾರ್ಕಿಕತೆಯನ್ನು ಸಂಚಿಯ ಹೊನ್ನಮ್ಮಳು ಸ್ಪಷ್ಟಪಡಿಸುತ್ತಾಳೆ

ಪೆಣ್ಣಲ್ಲವೆ ತಮ್ಮನೆಲ್ಲ ಪಡೆದ ತಾಯಿ
ಪೆಣ್ಣಲ್ಲವೆ ಪೊರೆದವಳು
ಪೆಣ್ಣು ಪೆಣ್ಣೆಂದೇತಕೆ ಬೀಳುಗಳೆವರು
ಕಣ್ಣು ಕಾಣದ ಗಾವಿಲರು.

ನಮ್ಮನ್ನೆಲ್ಲ ಹೆತ್ತವಳು-ಪಾಲನೆ ಪೋಷಣೆ ಮಾಡಿದವಳು ತಾಯಿ, ಅವಳು ಹೆಣ್ಣಲ್ಲವೇ!. ಅವಳನ್ನು ಕಾಣುವ ದೃಷ್ಟಿಕೋನವನ್ನು ಬದಲಾಯಿಸಿಕೊಳ್ಳಬೇಕಾಗಿದೆ. ಕುವರ ಕುವರಿ ಇರ್ವರು ಸಮಾನರು. ಅವರಿಂದ ದೇವಲೋಕ ಮರ್ತ್ಯಲೋಕಗಳು ಬೆಳಗಬೇಕಾಗಿದೆ. ಅಣ್ಣ ತಮ್ಮಂದಿರೊಂದಿಗೆ ಹುಟ್ಟಿದ ಅವಳಿಗೂ ಅಷ್ಟೇ ಸಮಾನವಾದ ಗೌರವ ಪ್ರೀತಿಯನ್ನು ನೀಡಬೇಕಾಗಿದೆ. ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ ಎಂಬ ಮಾತಿನಂತೆ ಅವಳಿಗೆ ನೀಡುವ ಅಭಿವ್ಯಕ್ತಿ ಸ್ವಾತಂತ್ರ್ಯ ಒಂದು ಸುಂದರವಾದ ಸಮಾಜ ಹಾಗೂ ದೇಶವನ್ನೇ ನಿರ್ಮಿಸುವುದರಲ್ಲಿ ಎರಡು ಮಾತಿಲ್ಲ.

ಇಂದು ಸ್ತ್ರೀ-ಪುರುಷ ಎಂಬ ಬೇಧಗಳನ್ನು ತೊರೆದು ವಿಶ್ವ ಮುನ್ನಡೆಯುತ್ತಿರುವುದರ ಫಲವಾಗಿಯೇ ಅವಳು ಅದ್ಭುತವಾದ ಸಾಧನೆಯನ್ನು ಗೈಯುತ್ತಿದ್ದಾಳೆ. ಅವಳನ್ನು ಸಮಾಜದ ಮುಖ್ಯವಾಹಿನಿಗೆ ಕರೆತರಬೇಕಾಗಿದೆ. ಒಂದು ಕಾಲದಲ್ಲಿ ಸ್ತ್ರೀಯರ ಬಗ್ಗೆ ಇದ್ದ ತಿರಸ್ಕಾರದ ದೃಷ್ಟಿಕೋನವು ಇಂದು ಬದಲಾಗುತ್ತಿದೆ. ಎಲ್ಲ ರಂಗದಲ್ಲಿಯೂ ಮುಂಚೂಣಿಯಲ್ಲಿರುವ ಅವಳು ದೇಶದ ಶಕ್ತಿಯಾಗಿದ್ದಾಳೆ. ದೇಶವನ್ನೇ ಸಮರ್ಥವಾಗಿ ಮುನ್ನಡೆಸುತ್ತಿದ್ದಾಳೆ. ಅವಳಿಗೆ ಇನ್ನಷ್ಟು ಮತ್ತಷ್ಟು ಪ್ರೋತ್ಸಾಹಿಸುವ ಮನೋಧೈರ್ಯ ತುಂಬವ ಕಾರ್ಯ ನಮ್ಮಿಂದ ಜರುಗಬೇಕಾಗಿದೆ. ತೊಟ್ಟಿಲನ್ನು ತೂಗುವ ಕೈಗಳು ದೇಶವನ್ನು ತೂಗಬಲ್ಲದು ಎಂಬ ನಾಣ್ನುಡಿ ಸೂರ್ಯನಷ್ಟೇ ಸತ್ಯವಲ್ಲವೇ. ಹೊನ್ನಮ್ಮಳ ವಿಚಾರವು ಪ್ರಸ್ತುತ ಪದ್ಯದಲ್ಲಿ ಇದನ್ನೇ ಒತ್ತಿಹೇಳುತ್ತಿದೆ.

# ದುಡ್ಡು ಕೆಟ್ಟದ್ದು ನೋಡಣ್ಣ

ಶಿಶುನಾಳ ಶರೀಫ

ದುಡ್ಡು ಕೆಟ್ಟದ್ದು ನೋಡಣ್ಣ – ದುಗ್ಗಾಣಿಗೆ
ಹೆಡ್ಡನಾಗಬೇಡೋ, ತಿಂದೀ ನೀ ಮಣ್ಣ!

ದುಡ್ಡು ಕೆಟ್ಟದ್ದೊ ಹೆಡ್ಡ ಮೂಢಾತ್ಮ
ದೊಡ್ಡ ದೊಡ್ಡವರನ್ನೇ ಹೆಗ್ಗಾಲು ಇಡಿಸಿತು.
ದುಡ್ಡು ಕೆಟ್ಟದ್ದು ನೋಡಣ್ಣ

ಹೆಣ್ಣಿನ ಪೂಜೆಗೆ ಇಳಿಸಿ–ಮಣ್ಣಿನ
ಸಂತೇಲಿ ಇಲ್ಲದ ಮರ್ಯಾದೆ ಕೊಡಿಸಿ,
ಮಿಣ್ಣನೆ ತಿಂದೀತು ಒಳಗ–ಮೆಲ್ಲನೆ
ಥಣ್ಣಗ ಮಾಡೀತು ಬೆಂಕಿಯ ಕಿಡಿಯ

ರೊಕ್ಕ ಮುಕ್ಕಿಸೀತು ಮಣ್ಣು – ಅದ
ತಕ್ಕಂತೆ ಬಳಸಲು ತೆರೆಸೀತು ಕಣ್ಣು
ಮುಕ್ಕುವವ ಚಪಲ ಏಕಿನ್ನು–ಮುಕ್ಕಿ
ಬಿಕ್ಕಳಿಸಲು ಕುಡಿಸೀತು ನೀರನ್ನು

ಆಸೆ ಬಿದ್ದು ಮನದ ಮಾರೊ
ಹೊಂಟ್ಯಾಳೊ ಹುಡುಕುತ್ತ ನೂರೆಂಟು ಕೇರಿ
ಕಾಸು ಕಾಸನ್ನೂ ಹೆಕ್ಕಿ–ಮೂಳಿ
ಶಿಶುನಾಳಧೀಶನ ಮರೆತಾಳು ಸೊಕ್ಕಿ.

ದುಡ್ಡು ಕೆಟ್ಟದ್ದು ನೋಡಣ್ಣ:

ಸಂತ ಶಿಶುನಾಳ ಶರೀಫರು ಹಾವೇರಿಯ ಶಿಗ್ಗಾಂವಿಯಲ್ಲಿ **1819** ರಂದು ಜನಿಸಿದರು. ಮುಸ್ಲಿಂ ಕುಟುಂಬದಲ್ಲಿ ಹುಟ್ಟಿದ ಇವರ ಮೂಲ ಹೆಸರು ಮಹಮ್ಮದ ಶರೀಫ. ಅಂದಿನ ಮುಲ್ಕಿ ಪರೀಕ್ಷೆ ಪಾಸು ಮಾಡಿದ ಇವರು ಕೆಲವು ಕಾಲ ಪ್ರಾಥಮಿಕ ಶಾಲೆ ಶಿಕ್ಷಕರಾಗಿ ಕೆಲಸ ಮಾಡಿದರು. ಗುರು ಗೋವಿಂದ ಭಟ್ಟರ ಅನುಗ್ರಹದಿಂದ ತತ್ವಶಾಸ್ತ್ರದ ಅಗಾಧ ಸಾಧನೆ ಮಾಡಿದರು. ಫಾತಿಮಾ ಜೊತೆ ವಿವಾಹವಾದ ಅವರಿಗೆ ಹೆಣ್ಣು ಮಗುವು ಜನಿಸಿತು. ಆದರೆ ಕೇಲವೇ ತಿಂಗಳುಗಳಲ್ಲಿ ಮಡದಿ ತೀರಿಕೊಂಡ ಮೇಲೆ ತಮ್ಮ ಮನಸ್ಸನ್ನು ಆಧ್ಯಾತ್ಮ ಜೀವನದತ್ತ ಹೊರಳಿತು. ಅಭಿಜಾತ ಕಲಾವಿದರೂ ಆಗಿದ್ದ ಶರೀಫರು ಉತ್ತರ ಕನ್ನಡ ಭಾಷೆಯಲ್ಲಿ ನೂರಾರು ತತ್ತ್ವಪದಗಳನ್ನು ರಚಿಸಿದ್ದಾರೆ.

ಸಂತ ಶಿಶುನಾಳ ಶರೀಫರ ಈ ತತ್ವಪದ ಎಲ್ಲ ಕಾಲಕ್ಕೂ ಅನ್ವಯಿಸುತ್ತದೆ. ಧರ್ಮ–ಅರ್ಥ–ಕಾಮ–ಮೋಕ್ಷ ಮನುಷ್ಯನ ಸದ್ಗತಿಗೆ ಮೆಟ್ಟಿಲುಗಳು. ಅರ್ಥಕ್ಕೆ ಎರಡನೇ ಸ್ಥಾನ. ಅದನ್ನು ಧರ್ಮಮಾರ್ಗವಾಗಿಯೇ ಪೂರೈಸಿಕೊಳ್ಳಬೇಕೆಂದು ಹೇಳಿದರೂ ಮನುಷ್ಯ ಅರ್ಥಕ್ಕೆ ತನ್ನ ಉಸಿರಿನ ಕೊನೆಯವರೆಗೂ ಮೋಹಿತನಾಗಿರುತ್ತಾರೆ. ದುಡ್ಡನ್ನು ಅವನು ಗೆಲ್ಲುವ ಬದಲಾಗಿ ಅದು ಅವನನ್ನು ಗೆದ್ದು ಕೆಡುವುತ್ತದೆ. ದುಡ್ಡೇ ಸರ್ವಸ್ವ ಎಂಬ ಮನೋಭಾವವೇ ತನ್ನ ಅಂತಃಸತ್ವವನ್ನು ಕಳೆದುಕೊಳ್ಳುವಂತೆ ಮಾಡುತ್ತದೆ ಅದನ್ನೇ ಶರೀಫರು

'ದುಗ್ಗಾಣಿಗೆ

ಹೆಡ್ಡನಾಗಬೇಡೋ, ತಿಂದೀ ನೀ ಮಣ್ಣ!' ಎಂಬ ಎಚ್ಚರಿಕೆ ಕೊಡುತ್ತಾರೆ.

ಧನದಾಹ ನಮ್ಮೆಲ್ಲರನ್ನೂ ಅಂದರನ್ನಾಗಿಸಿದೆ. ಹಣವೇ ಬದುಕೆಂಬ ಹುಚ್ಚು ಓಟಕ್ಕೆ ನಾವೆಲ್ಲ ಬೆನ್ನುಹತ್ತಿದ್ದೇವೆ. ಅದಕ್ಕಾಗಿ ಯಾವುದು ಪಾಪ–ಪುಣ್ಯ, ಯಾವುದು ಸುಖ–ದುಃಖ, ಸ್ವಾರ್ಥ–ತ್ಯಾಗ ತಿಳಿದುಕೊಳ್ಳದೇ ಹಣ ಗಳಿಸುವುದರಲ್ಲಿಯೇ ಮಗ್ನರಾಗಿದ್ದೇವೆ. ಹಣ ದೊಡ್ಡ ದೊಡ್ಡವರನ್ನೇ ಕೆಡಿಸಿದೆ, ನಾಶಮಾಡಿದೆ, ಆದರೂ ಯಾರಿಗೂ ಬುದ್ಧಿಬಂದಿಲ್ಲ. ಹೆಣ್ಣು–ಮಣ್ಣು–ಹೊನ್ನು ಇವುಗಳಿಗೆ ಮಾನವ ದಾಸನಾಗಿ ಹೋರಾಡಿದ್ದು, ಪಡೆದಿದ್ದು ಶೂನ್ಯಮಾತ್ರ. ಇವು ಜೀವನದಲ್ಲಿ ಸ್ಥಿರವಾದುವುಗಳಲ್ಲ ಎಂಬುದನ್ನು ಅರಿತಿದ್ದರೂ ಹಣದ ಭ್ರಮನಿರಸನದಲ್ಲಿ ತನ್ನನ್ನೇ ಮರೆತಿದ್ದಾನೆ. 'ಹೆಣಕ್ಕೆ ಎಷ್ಟೇ ಸಿಂಗಾರ ಮಾಡಿದರೂ ಅರ್ಥವಿಲ್ಲ' ಎಂಬಂತೆ ಬಾಹ್ಯಬದುಕಿನ ಸ್ವಾದಕ್ಕೆ ತನ್ನನ್ನೇ ಮಾರಿಕೊಂಡಿರುವುದು ವಿಪರ್ಯಾಸ. ಆ ದುಡ್ಡಿಗಾಗಿಯೇ ಮಾಡಬಾರದ ಕ್ರಿಯೆಗಳನ್ನು ಮಾಡಿ ಬದುಕನ್ನೇ ಅದಕ್ಕೆ ಪಣ ಇಡುತ್ತಿರುವುದು ಎಷ್ಟು ಸತ್ಯ. ಅದಕ್ಕೆ ಶರೀಫರು

'ಮುಕ್ಕುವವ ಚಪಲ ಏಕಿನ್ನು–ಮುಕ್ಕಿ

ಬಿಕ್ಕಳಿಸಲು ಕುಡಿಸೀತು ನೀರನ್ನು' ಎಂಬ ಎಚ್ಚರಿಕೆಯನ್ನು ನೀಡುತ್ತಾರೆ.

ಹಣ ಶಾಶ್ವತವಾದುದಲ್ಲ! ಲಕ್ಷ್ಮೀ ಅವಳು ಚಂಚಲೆ. ಇಂದು ಈಗ ನನ್ನ ಕೈಯಲ್ಲಿ ಇದ್ದವಳು ಕ್ಷಣದಲ್ಲಿ ಇರಲಾರಳು. ಅವಳನ್ನು ಎಷ್ಟು ಬೇಕೋ ಅಷ್ಟೇ ಪೂಜಿಸಿದರೆ ಫಲ ದೊರೆಯುವುದು. ಆದರೆ ನಮ್ಮ ಅತಿಯಾದ ಆಸೆ ಬದುಕನ್ನೇ ಕೂಪವನ್ನಾಗಿ ಮಾಡುತ್ತದೆ ಎಂಬುದಕ್ಕೆ ಸಾವಿರಾರು ಉದಾಹರಣೆಗಳನ್ನು ಗಮನಿಸಬಹುದು. ಇಂತಹ ಹಣದ ವ್ಯಾಮೋಹಕ್ಕೆ ಒಳಗಾಗದೆ ಪರಮಾತ್ಮನನ್ನು ಸ್ಮರಿಸುವ ಕನ್ನಿಕೆ ನಮ್ಮದಾಗಬೇಕು.

ಶರಣರು ಕೂಡ 'ಪಾಪಿಯ ಧನ ಪ್ರಾಯಶ್ಚಿತಕ್ಕಲ್ಲದೆ ಸತ್ಪಾತ್ರಕ್ಕೆ ಸಲ್ಲದಯ್ಯ' ಎಂದು ಶ್ರಮಸಂಸ್ಕೃತಿಗೆ ಕರೆನೀಡುತ್ತಾರೆ. 'ಸತ್ಯ ಶುದ್ಧ ಕಾಯಕ ಮಾಡಿದರೆ ಎತ್ತನೋಡಿದರತ್ತ ಲಕ್ಷ್ಮೀ ತಾನಾಗಿಪ್ಪಲು' ಎಂಬ ಸಂದೇಶ ಶರಣರದಾಗಿದೆ. ಧರ್ಮ ಮಾರ್ಗದ ಹಣ ಕೊನೆಯವರೆಗೂ ಉಳಿಯುತ್ತದೆ. ಅಂತಹ ಹಣ ನಮ್ಮದಾಗಬೇಕು, ಆದರೆ ಅಧರ್ಮದ ಹಣಕ್ಕಾಗಿ ಪ್ರತಿಕ್ಷಣವು ಹಪಹಪಿಸಿದರೆ ದುಃಖ ತಪ್ಪಿದ್ದಲ್ಲ.

'ಆಸೆ ಬಿದ್ದು ಮನದ ಮಾರೊ
ಹೊಂಟ್ಯಾಳೊ ಹುಡುಕುತ್ತ ನೂರೆಂಟು ಕೇರಿ
ಕಾಸು ಕಾಸನ್ನೂ ಹೆಕ್ಕಿ–ಮೂಳಿ
ಶಿಶುನಾಳಧೀಶನ ಮರೆತಾಳು ಸೊಕ್ಕಿ.

ಹಣಕ್ಕಾಗಿ ಬದುಕದೆ ಪರಮಾತ್ಮನ ಅನುಗ್ರಹವನ್ನು ಪಡೆಯಲು ಹಂಬಲಿಸಬೇಕು. ಹಣದ ಅಮಲಿನಲ್ಲಿ ದೇವರನ್ನೇ ಮರೆತರೆ ಬದುಕಿಗೆ ಅರ್ಥವಿಲ್ಲ. 'ಎಲ್ಲವನ್ನು ನೀಡುವವನು ಅವನೇ ಮರಳಿ ಪಡೆಯುವವನು ಅವನೇ' ಎಂಬ ಸತ್ಯದರ್ಶನ ಕವಿ ಶರೀಫರದು.

# ಕುರುಡು ಕಾಂಚಾಣ

ದ.ರಾ.ಬೇಂದ್ರೆ

ಕುರುಡು ಕಾಂಚಾಣ ಕುಣಿಯುತಲಿತ್ತು
ಕಾಲಿಗೆ ಬಿದ್ದವರ ತುಳಿಯುತಲಿತ್ತೋ ॥
ಕುರುಡು ಕಾಂಚಾಣ ॥ ಪಲ್ಲ ॥

'ಬಾಣಂತಿಯೆಲುಬ ಸಾ
ಬಾಣದ ಬಿಳುಪಿನಾ
ಕಾಣದ ಕಿರುಗೆಜ್ಜೆ ಇತ್ತೋ
ಸಣ್ಣ ಕಂದಮ್ಮಗಳ
ಕಣ್ಣೀನ ಕವಡಿಯ
ತಣ್ಣನ್ನ ಜೋಮಾಲೆ ಕೊರಳೊಳಗಿತ್ತೋ

ಬಡವರ ಒಡಲಿನ
ಬಡಬಾನಲದಲ್ಲಿ
ಸುಡುಸುಡು ಪಂಜು ಕೈಯೊಳಗಿತ್ತೋ
ಕಂಬನಿ ಕುಡಿಯುವ
ಹುಂಬಬಾಯಿಲೆ ಮೈ
ದುಂಬಿದಂತುಧೊ ಉಧೊ ಎನ್ನುತಲಿತ್ತೋ ।

ಕೂಲಿ ಕುಂಬಳಿಯವರ
ಪಾಲಿನ ಮೈದೊಗಲ
ಧೂಳಿಯ ಭಂಡಾರ ಹಣೆಯೊಳಗಿತ್ತೋ::
ಗುಡಿಯೊಳಗೆ ಗಣಣ, ಮಾ
ಹಡಿಯೊಳಗೆ ತನನ, ಅಂ
ಗಡಿಯೊಳಗೆ ಝಣಣಣ ನುಡಿಗೊಡುತಿತ್ತೋ !

ಹ್ಯಾಂಗಾರ ಕುಣಿಕುಣಿದು
ಮಂಗಾಟ ನಡೆದಾಗ
ಅಂಗಾತ ಬಿತ್ತೋ, ಹೆಗಲಲಿ ಎತ್ತೋ !

ಕುರುಡು ಕಾಂಚಾಣ :

ವರಕವಿ ಬೇಂದ್ರೆಯವರನ್ನು ಕನ್ನಡದ ಶಬ್ದಗಾರುಡಿಗ ಕವಿ ಎಂದೇ ಕರೆಯುತ್ತಾರೆ. ಧಾರವಾಡದ ಸಾಧನಕೇರಿಯಲ್ಲಿ ಜನಿಸಿದ ಬೇಂದ್ರೆಯವರು ಎಂ.ಎ.ಪದವೀಧರರಾಗಿ ಶಾಲಾ ಶಿಕ್ಷಕರಾಗಿ, ಕಾಲೇಜಿನ ಉಪನ್ಯಾಸಕರಾಗಿ ದುಡಿದರು. ಸುಮಾರು 20ಕ್ಕೂ ಹೆಚ್ಚು ಕವನ ಸಂಕಲನಗಳನ್ನು ನೀಡಿರುವ ಬೇಂದ್ರೆಯವರ ಉಯ್ಯಾಲೆ, ನಾಕುತಂತಿ, ಯಕ್ಷಯಕ್ಷಿ, ಗಂಗಾವತರಣ, ಸಖೀಗೀತ, ನಾದಲೀಲೆ ಬಹುಶ್ರೇಷ್ಠ ಕೃತಿಗಳಾಗಿವೆ. ಅಂತೆಯೆ ನಾಟಕ, ವಿಮರ್ಶೆ ಕೃತಿಗಳನ್ನು ರಚಿಸಿರುವ ಬೇಂದ್ರೆ ಅವರ ಸಾಹಿತ್ಯ ಕನ್ನಡದಲ್ಲಿಯೇ ಅಪರೂಪವೆನಿಸಿದೆ. ಕೇಂದ್ರ ಸಾಹಿತ್ಯ ಹಾಗೂ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾದ ಬೇಂದ್ರೆಯವರ 'ಕುರುಡು ಕಾಂಚಾಣ' ವಿಶಿಷ್ಟ ಕವನಗಳಲ್ಲಿ ಒಂದು.

ಹಣ ಸಂಕೇತಿಸುವ ಕ್ರೌರ್ಯ ಬೇಂದ್ರೆಯವರ ಶ್ರೇಷ್ಠ ಕವಿತೆಗಳಲ್ಲೊಂದಾದ 'ಕುರುಡು ಕಾಂಚಾಣ'ದಲ್ಲಿ ಅತ್ಯಂತ ಪ್ರಭಾವಿಯಾಗಿ ಸಾಕಾರಗೊಂಡಿದೆ. ಕಾವ್ಯದಲ್ಲಿ ತಾತ್ವಿಕತೆಯ ಸ್ವರೂಪ ಹೇಗಿರಬೇಕು ಎನ್ನುವದಕ್ಕೆ ಈ ಕವಿತೆಯಷ್ಟು ಒಳ್ಳೆಯ ಉದಾಹರಣೆ ಸಿಗಲಾರದು.

ಇಂದಿನ ಬಂಡವಾಳಶಾಹಿಯ ನಗ್ನನೃತ್ಯಕ್ಕೆ ಕನ್ನಡಿ ಹಿಡಿಯುವ ಕುರುಡು ಕಾಂಚಾಣ ಚತುರ್ವಿಧ ಪುರುಷಾರ್ಥಗಳಲ್ಲಿ ಅರ್ಥ(ಹಣ)ಕ್ಕೆ ಎರಡನೆಯ ಸ್ಥಾನ. ಅದನ್ನು ಧರ್ಮದಿಂದ ಸಂಪಾದನೆ ಮಾಡಬೇಕು ಎಂಬುದು ಇಲ್ಲಿಯ ಆದರ್ಶ. ಹಣದ ಹಾವಳಿ ಆಕರ್ಷಕ. ಕೊನೆಯ ಗೆಲವು ಹಣಕ್ಕೆ ಅಲ್ಲ. ಹಾವಳಿಯ ಪರಿಣಾಮವಾಗಿ ಅದು ಅಂಗಾತ ಬೀಳಲೇಬೇಕು. ಅದರ ಹೆಣವನ್ನು ಹೊರ ಬೇಕಾದವ ಮಾನವ. ಮಾನವೀಯತೆಗೆ ಇರುವ ಬೆಲೆ ಹಣಕ್ಕೆ ಇಲ್ಲ. ಆದರೂ ಹಣ ಗೊಂದಲ ನೃತ್ಯ ಮೋಹಿನಿಯಂತೆ ಆಕರ್ಷಕವಾಗಿ ಭಸ್ಮಾಸುರನ ವಧೆ ಮಾಡಿದಂತೆ ಸಂಹಾರಕಾರಕ. ಅದು ಸಾಯುತ್ತದೆ; ಇನ್ನೊಬ್ಬರನ್ನೂ ಕೊಲ್ಲುತ್ತದೆ. ಹಣದ ಕುರುಡು ಆಲಿಂಗನದಿಂದ ಅವಸಾನ ಹೊಂದದಿರಬೇಕು ಎಂಬುದು ಈ ಗೀತದ ಸಂದೇಶವಾಗಿದೆ.

ಈ ಕವಿತೆಯಲ್ಲಿ ಬರುವ ಪ್ರತಿಯೊಂದು ಪ್ರತಿಮೆಯೂ ಒಟ್ಟು ಅರ್ಥದ ಸಂಕೇತವಾಗಿ ದುಡಿಯುವುದರಿಂದ ಅದರ ಶಿಲ್ಪಕ್ಕೆ ಅಪೂರ್ವವಾದ ಶಕ್ತಿ ಬಂದಿದೆ.

'ಬಾಣಂತಿಯೆಲುಬ ಸಾ
ಬಾಣದ ಬಿಳುಪಿನಾ
ಕಾಣದ ಕಿರುಗೆಜ್ಜೆ ಇತ್ತೋ
ಸಣ್ಣ ಕಂದಮ್ಮಗಳ
ಕಣ್ಣೀನ ಕವಡಿಯ
ತಣ್ಣನ್ನ ಜೋಮಾಲೆ ಕೊರಳೊಳಗಿತ್ತೋ

ಇಂಥ ಸಾಲುಗಳಲ್ಲಿ ಮಹಾಲಕ್ಷ್ಮೀಯ ಭಕ್ತರಾದ ಗೊಂದಲಿಗರ ವೇಷಭೂಷಣಗಳು ಸಾವಿನ ಪ್ರತಿಮೆಗಳಾಗಿ ಬೆಳೆಯುವ ಕ್ರಿಯೆ ಅನ್ಯಾದೃಶಯವಾಗಿದೆ.

ಕಾಂಚಾಣದ ಕುರುಡುತನವನ್ನು ನೆನಪಿನಲ್ಲಿಟ್ಟರೆ ಅದರ 'ಹ್ಯಾಂಗಾರ ಕುಣಿ'ಯುವುದು, ಮಂಗಾಟ, ಅಂಗಾತ ಬೀಳುವುದರಲ್ಲಿ ಕೊನೆಗೊಳ್ಳುವುದರಲ್ಲಿ ಅಸಹಜತೆ ಕಾಣಲಿಕ್ಕಿಲ್ಲ. ಇಲ್ಲಿಯ ಕುಣಿತ ವಿಕೃತ ಹಾವಭಾವದಿಂದ ಕೂಡಿದೆ.

# ಕಷ್ಟಕರವಾದುದಲ್ಲ ನೀತಿಯಲ್ಲ

ಡಿ.ವಿ.ಗುಂಡಪ್ಪ

ಮಾನ್ಯ ಡಿ.ವಿ.ಜಿಯವರು ಕನ್ನಡ ನವೋದಯ ಕಾಲಘಟ್ಟದ ಅತ್ಯಂತ ಶ್ರೇಷ್ಠ ಕವಿಗಳಲ್ಲಿ ಒಬ್ಬರು. ತಮ್ಮ ಜೀವಮಾನದಲ್ಲಿ ಅನೇಕ ಕೃತಿಗಳನ್ನು ರಚಿಸಿದರು. ಅವುಗಳಲ್ಲಿ ಅತ್ಯಂದ ಅದ್ಭುತವಾದಂತಹ ಕೃತಿ 'ಮಂಕುತಿಮ್ಮನ ಕಗ್ಗ'. ಅವರು ಬಹಳಷ್ಟು ಕಷ್ಟಗಳನ್ನು ಅನುಭವಿಸಿದವರು. ಅವರು ತಮ್ಮ ಜೀವನದಲ್ಲಿ ಅಳವಡಿಸಿಕೊಂಡಿದ್ದತತ್ತ್ವಗಳಿಗೆ ಬದ್ಧರಾಗಿ ಜೀವನವನ್ನು ಇತರರಿಗೆ ಮಾದರಿಯಾಗಿ ನಡೆಸಿದಂಥವರು. ಈ ಕೃತಿಯಲ್ಲಿ ಮಾನ್ಯ ಡಿ.ವಿ.ಜಿಯವರು ಜನ ಸಾಮಾನ್ಯರಿಗೆ ಹೇಗೆ ಜೀವನವನ್ನು ನಡೆಸಬೇಕು, ಬದುಕಿನಲ್ಲಿ ಯಾವುದು ಚೆನ್ನ, ಯಾವುದು ಒಳ್ಳೆಯದು, ಎನ್ನುವುದನ್ನು ತಿಳಿಸಿಕೊಟ್ಟಿದ್ದಾರೆ. ಮುಖ್ಯವಾಗಿ, ಪ್ರತಿಯೊಂದು ಪದ್ಯವೂ, ಪ್ರತಿಯೊಂದು ಪದವೂ, ವೇದಾಂತ ಸಾರವನ್ನು ಮತ್ತು ಅವರ ಅನುಭವವನ್ನು, ತುಂಬಿ ತುಳುಕುತ್ತಿದೆ.

ದೋಷಿಯವನಿವನು ಪಾಪಿಯೆನುತ್ತ ಗಳಹದಿರು।
ಆಶೆಯೆನಿತವನು ಸಹಿಸಿದನೊ। ದಹಿಸಿದನೊ।
ವಾಸನೆಗಳವನನೆಳೆದವೋ ಬಲವೇನೊ!
ಪಾಶಬದ್ಧನು ನರನು ಮಂಕುತಿಮ್ಮ ॥

ಇವನು ದೋಷಿ ಮತ್ತು ಪಾಪಿಯೆಂದು ಅರ್ಥವಿಲ್ಲದ ಮಾತುಗಳನ್ನಾಡಬೇಡ. ಆಸೆಗಳನ್ನವನೆಷ್ಟು ಸಹಿಸಿದನೋ, ಇನ್ನೆಷ್ಟು ಆಸೆಗಳನ್ನು ಸುಟ್ಟು ಹಾಕಿದನೋ? ಅವನು ಯಾವ ಯಾವ ಸೆಳೆತಗಳಿಗೆ ಬಲಿಯಾದನೊ ಬಲ್ಲವರಾರು? ಮನುಷ್ಯನು ಸಹಜವಾಗಿ ಹಲವಾರು ಆಶಾಪಾಶಗಳಿಂದ ಬಂಧಿತನಾಗಿರುತ್ತಾನೆ. ಅವುಗಳನ್ನು ಮೀರಲು, ಬಿಡಲು ಪ್ರಯತ್ನಿಸಬೇಕು. ಆಶೆಯನ್ನು ಗೆದ್ದವನೇ ಜೀವನದಲ್ಲಿ ಸುಖಿಯಾಗಲು ಸಾಧ್ಯವೆನ್ನುತ್ತಾರೆ ಡಿ.ವಿ.ಜಿಯವರು.

ಪಾತಕಿಯೊಳಾಗ್ರಹವ ತೋರೆ ನಿರ್ಮಲನಾರು?।
ಆತುಮದ ಪರಿಕಥೆಯನರಿತರವರೆ ನಾವು?।
ಸೋತ ದುರ್ಬಲಿಗೆ ಸಲ್ಲುವುದು ನಮ್ಮನುಕಂಪೆ।
ನೀತಿ ನಿಂದೆಯೊಳಿರದು–ಮಂಕುತಿಮ್ಮ॥

ಪಾಪ ಮಾಡಿದವನಲ್ಲಿ(ಪಾತಕಿ) ಕೋಪವನ್ನು ತೋರಿಸಲು ನೀನೇನು ಪವಿತ್ರನೇನು? ಅದನ್ನು ಮೊದಲು ಪರೀಕ್ಷೆ ಮಾಡಿಕೋ. ಆತ್ಮದ ರೀತಿ ನೀತಿಗಳನ್ನು ನಾವುಗಳೆಲ್ಲಾ ಚೆನ್ನಾಗಿ ತಿಳಿದುಕೊಂಡಿದ್ದೇವೇನು? ಕೈಲಾಗದವನು(ದುರ್ಬಲ) ಸೋತರೆ ಅವನಿಗೆ ನಮ್ಮ ಸಹಾನುಭೂತಿ ಸಲ್ಲುತ್ತದೆ. ನೀತಿಯನ್ನು ಉಪದೇಶ ಮಾಡಲು, ಇನ್ನೊಬ್ಬರನ್ನು ನಾವು ನಿಂದಿಸಬೇಕಾದ ಅವಶ್ಯಕತೆಯಿಲ್ಲ. ಮೊದಲು ನಮ್ಮ ಪಾಪಕರ್ಮಗಳನ್ನು ನೋಡಿಕೊಳ್ಳಬೇಕಾಗಿದೆ. ನಮ್ಮ ತಪ್ಪಗಳನ್ನು ತಿದ್ದಿಕೊಂಡು ಇನ್ನೊಬ್ಬರ ನೋಡುವಂತಾಗಲಿ. ಲೋಕದ ಡೊಂಕವನ್ನು ತಿದ್ದುವ ಬದಲು ನಮ್ಮನ್ನು ನಾವು ಸಂತೈಸಿಕೊಳ್ಳಬೇಕಾಗಿದೆ.

ಪಾಪವೆಂಬುದದೇನು ಸುಲಭಸಾಧನೆಯಲ್ಲ।

ತಾಪದಿಂ ಬೇಯದವನ್ ಅದನೆಸಪನಲ್ಲ॥
ವಾಪಿಯಾಳವ ದಡದಿ ನಿಂತಾತನರಿವನೇಂ?
ಪಾಪಿಯೆದೆಯೊಳಕಿಳಿಯೊ–ಮಂಕುತಿಮ್ಮ॥

ಪಾಪವನ್ನು ಮಾಡುವುದು ಸುಲಭವಾದ ಕೆಲಸವೇನಲ್ಲ. ಸ್ವಲ್ಪ ಕಷ್ಟಕರವಾದದ್ದೇ ಅದು. ಎಲ್ಲರೂ ಮಾಡುವುದಕ್ಕೂ ಆಗುವುದಿಲ್ಲ. ಕಷ್ಟ ಪಟ್ಟು ಬೇಗೆಯಿಂದ ಬೇಯದವನು ಅದನ್ನು ಮಾಡಲಾಗುವುದಿಲ್ಲ. ಭಾವಿಯ(ವಾಪಿ)ದಡದಲ್ಲಿ ನಿಂತುಕೊಂಡು, ಅದರಾಳವನ್ನು ತಿಳಿಯಲಾದೀತೇನು? ಆ ಪಾಪ ಕೃತ್ಯಗಳನ್ನು ಏಕೆ ಮಾಡಿದನೆಂದು ತಿಳಿಯಬೇಕಿದ್ದರೆ, ಅವನ ಎದೆಯಾಳಕ್ಕಿಳಿದು ನೋಡು. ಅವನು ಮಾಡಿದ ಕೃತ್ಯಕ್ಕೆ ಕಾರಣಗಳು, ಆಗ ತಿಳಿಯುತ್ತದೆ. ಇದನ್ನು ತಿಳಿಯದೆ ನೀನು ಯಾವ ನಿರ್ಣಯಕ್ಕೂ ಬರಬೇಡ ಎಂದು ಕವಿ ಹೇಳುತ್ತಾರೆ.

ಜೀವಋಣಗಳ ಲೆಕ್ಕದಾದಿಯರಿಯದ ನಾವು।
ಆವುದನು ಸರಿಯೆನುವ? ತಪ್ಪಾವುದೆನುವ?॥
ಓವೊ ಬಿಡು ಕಡುಕಷ್ಟ ನೀತಿನಿರ್ಣಯದ ಹೊರೆ।
ದೈವವದ ಹೊರಲಿ ಬಿಡು–ಮಂಕುತಿಮ್ಮ॥

ಜೀವಿಗಳ ಮತ್ತು ಅವುಗಳ ಋಣಗಳ ಲೆಕ್ಕದ ಮೊದಲು ಮತ್ತು ಕೊನೆ ತಿಳಿಯದ ನಾವು, ಸರಿ ಅಥವಾ ತಪ್ಪು ಯಾವುದೆಂದು ಖಚಿತವಾಗಿ ಹೇಳಲಾರೆವು. ಈ ಬಹಳ ಕಷ್ಟಕರವಾದ ನೀತಿಯ ತೀರ್ಮಾನದ ಭಾರವನ್ನು ದೇವರಿಗೇ ಬಿಡುವುದು ಒಳಿತು. ಏಕೆಂದರೆ ಅವನೇ ತೀರ್ಪು ನೀಡಲು ಶಕ್ತ ಎಂಬ ದಿವ್ಯ ಸಂದೇಶ ಕವಿ ಡಿ.ವಿ.ಜಿ.ಯವರದು.

ಆಳನೀಳಗಳ ಕಾಣಲ್ಕಾಗಿಸದೆ ಮೊರೆವ।
ಬಾಳ ಕಡಲೊಳು ಮುಳುಗಿ ತಳದಿಂದಲೆದ್ದು॥
ಪೇಳುವರದಾರು ನ್ಯಾಯಾನ್ಯಾಯ ವಿವರಗಳ।
ಗಾಳಿಗಾಬರಿಯೆಲ್ಲ–ಮಂಕುತಿಮ್ಮ॥

ಈ ಬಾಳು ಎಂಬ ಭೋರ್ಗರೆಯುತ್ತಿರುವ ಸಮುದ್ರದ ಆಳ, ಉದ್ದಗಲಗಳನ್ನು, ಅಳೆಯಲಾಗದೆ ಅದರೊಳಗೆ ಪೂರ್ತಿಯಾಗಿ, ಮುಳುಗಿ, ಪುನಃ ಅದರ ತಳದಿಂದಲೆದ್ದು, ಇದೇ ನ್ಯಾಯ ಅಥವಾ ಅನ್ಯಾಯವೆಂಬ ವಿವರಗಳನ್ನು, ಯಾರು ಹೇಳುವುದಕ್ಕೆ ಸಾಧ್ಯ? ಇವುಗಳೆಲ್ಲಾ ಅನವಶ್ಯಕವಾದ ಗಾಬರಿಯನ್ನುಂಟು ಮಾಡುತ್ತದೆ. ಹಾಗಾಗೀ ಈ ಜೀವನವನ್ನು ಸಂಯಮದಿಂದ ಸವಿಯಬೇಕು, ಜೀವನದ ಎಲ್ಲ ಕಷ್ಟ ಸುಖಗಳನ್ನು ಸಮನಾಗಿ ನೋಡಬೇಕು. ಸಮರಸ ಜೀವನ ನಮ್ಮದಾಗಬೇಕೆಂಬ ದಿವ್ಯ ಸಂದೇಶ ಕವಿಯದಾಗಿದೆ.

# ಯಾವ ಕಾಲದ ಶಾಸ್ತ್ರವೇನು ಹೇಳಿದರೇನು?

**ಕುವೆಂಪು**

ಯಾವ ಕಾಲದ ಶಾಸ್ತ್ರವೇನು ಹೇಳಿದರೇನು?
ಎದೆಯ ದನಿಗೂ ಮಿಗಿಲು ಶಾಸ್ತ್ರವಿಹುದೇನು?
ಎಂದೋ ಮನು ಬರೆದಿಟ್ಟುದಿಂದೆಮಗೆ ಕಟ್ಟೇನು?
ನಿನ್ನೆದೆಯ ದನಿಯೆ ಋಷಿ! ಮನ ನಿನಗೆ ನೀನು!

ನೀರಡಿಸಿ ಬಂದ ಸೋದರಗೆ ನೀರನು ಕೊಡಲು
ಮನುಧರ್ಮಶಾಸ್ತ್ರವೆನಗೊರೆಯಬೇಕೇನು?
ನೊಂದವರ ಕಂಬನಿಯನೊರಸಿ ಸಂತೈಸುವೊಡೆ
ಶಾಸ್ತ್ರ ಪ್ರಮಾಣವದಕಿರಲೆ ಬೇಕೇನು?

ಪಂಚಮರ ಶಿಶುವೊಂದು ಕೆರೆಯಲ್ಲಿ ಮುಳುಗುತಿರೆ
ಡದದಲ್ಲಿ ಮೀಯುತ್ತ ನಿಂತಿರುವ ನಾನು
ಮುಟ್ಟಿದರೆ ಬ್ರಹ್ಮತ್ವ ಕೆಟ್ಟುಹೋಗುವುದೆಂದು
ಸುಮ್ಮನಿದ್ದರೆ ಶಾಸ್ತ್ರಸಮ್ಮತವದೇನು?

ಅಂತು ಮನು ತಾನು ಹೇಳಿರಲಾರನಯ್ಯಯ್ಯೊ!
ಹೇಳಿದ್ದರವನನೂ ಶಾಸ್ತ್ರದೊಳೆ ಸುತ್ತಿ,
ಸ್ವರ್ಗ ಹೋಗಲಿ, ಮತ್ತೆ ನರಕ ಬಂದರು ಬರಲಿ,
ಎದೆಯ ಧೈರ್ಯವ ಮಾಡಿ ಬಿಸುಡಾಚೆಗೆತ್ತಿ!

ಸ್ವರ್ಗ ಹೋಗುವುದಿಲ್ಲ, ನರಕ ಬರುವುದು ಇಲ್ಲ;
ಸ್ವರ್ಗ ನರಕಗಳೇನು ಶಾಸ್ತ್ರಸ್ಥವಲ್ಲ.
ಎದೆಯ ದನಿ ಧರ್ಮನಿಧಿ! ಕರ್ತವ್ಯವದುವೆ ವಿಧಿ!
ನಂಬದನು; ಅದನುಳಿದು ಋಷಿಯ ಬೇರಿಲ್ಲ!

ಹಿಂದಿನಾ ಋಷಿಗಳೂ ಮಾನವರೆ ನಮ್ಮಂತೆ,
ಅವರ ಶಾಸ್ತ್ರವು ಅವರ ಕಾಲಕ್ಕೆ ಮಾತ್ರ;
ಕಾಲಕ್ಕೆ ತಕ್ಕಂತೆ, ದೇಶಕ್ಕೆ ತಕ್ಕಂತೆ,
ನಮ್ಮ ಹೃದಯವೆ ನಮಗೆ ಶ್ರೀಧರ್ಮಸೂತ್ರ!

ಯಾವ ಕಾಲದ ಶಾಸ್ತ್ರವೇನು ಹೇಳಿದರೇನು?

ಕುಪ್ಪಳ್ಳಿ ವೆಂಕಟಪ್ಪ ಪುಟ್ಟಪ್ಪನವರು ತೀರ್ಥಹಳ್ಳಿಯಲ್ಲಿ 1904 ರಂದು ಜನಿಸಿದರು. ಪಾಂಚಜನ್ಯ, ಪ್ರೇಮ ಕಾಶ್ಮೀರ 20ಕ್ಕೂ ಹೆಚ್ಚು ಕವನ ಸಂಕಲನಗಳನ್ನು ರಚಿಸಿದ್ದಾರೆ. ಜಲಗಾರ, ಸ್ಮಶಾನ ಕುರುಕ್ಷೇತ್ರ, ಗೀತಗೋಪಾಲ, ಬೆರಳ್ಗೆ ಕೊರಳ್ ಹೀಗೆ 12 ಕ್ಕೂ ಹೆಚ್ಚು ನಾಟಕಗಳನ್ನು, ಕಾನೂರು ಸುಬ್ಬಮ್ಮ ಹೆಗ್ಗಡತಿ, ಮಲೆಗಳಲ್ಲಿ ಮದುಮಗಳು ಕಾದಂಬರಿಯನ್ನು ರಚಿಸಿದ ಕುವೆಂಪುವರು ವಿಚಾರ ಕ್ರಾಂತಿಗೆ ಆಹ್ವಾನದಂತಹ ಹಲವು ವಿಮರ್ಶಾ ಕೃತಿಗಳನ್ನು ರಚಿಸಿದ್ದಾರೆ. ಅವರ ರಾಮಾಯಣ ದರ್ಶನಂ ಮಹಾಕಾವ್ಯಕ್ಕೆ ಜ್ಞಾನಪೀಠ ಪ್ರಶಸ್ತಿ ದೊರೆತಿದೆ.

'ಯಾವ ಕಾಲದ ಶಾಸ್ತ್ರವೇನು ಹೇಳಿದರೇನು?' ರಸಋಷಿ ಕುವೆಂಪು ಅವರ ವಿಶ್ವಮಾನವ ಸಂದೇಶ ಸಾರುವ ಕವನವಿದು. ಭಾರತೀಯ ಸನಾತನ ಪರಂಪರೆ ವರ್ಣಾಶ್ರಮದ ಮೇಲೆ ಬೆಳೆದು ಬಂದಿದ್ದು ಒಂದು ದುರಂತವೇ ಸರಿ. ಜಾತಿ ಮತಗಳು ಮನುಷ್ಯನ ಕಲ್ಯಾಣವನ್ನು ಮಾಡದೆ ಬದುಕನ್ನು ಕತ್ತಲೆಯನ್ನಾಗಿಸಿದ್ದು ಒಂದು ವಿಪರ್ಯಾಸವೆನ್ನಬೇಕು. ಜಾತಿಯ ಲೆಕ್ಕಾಚಾರ ಮನುಷ್ಯ ಸಮಾಜವನ್ನು ಒಡೆದು ನಮ್ಮೆಲ್ಲರ ಹೃದಯಕ್ಕೆ ಅಗ್ನಿಸ್ಪರ್ಶ ಮಾಡಿದ್ದು ಸೂರ್ಯನಷ್ಟೇ ಸತ್ಯ.

ಶತಶತಮಾನದ ಸನಾತನ ಜಾತಿ ವ್ಯವಸ್ಥೆಯನ್ನು ಕಿತ್ತು ಹಾಕಲು ರಾಮಾನುಚಾರ್ಯರು, ಬಸವೇಶ್ವರ ಮೊದಲಾದ ಶರಣರು, ದಾಸರು, ಮೋಹನರಾಯರು, ಗಾಂಧೀಜಿ ಮೊದಲ್ಗೊಂಡು ಕಾಲಕಾಲಕ್ಕೆ ಎಲ್ಲರೂ ಹೋರಾಡಿದರು  ಇಂದಿಗೂ ಸಮಾಜದಲ್ಲಿ ಸಮಾನತೆಯನ್ನು ಮೂಡಿಸಲಾಗಿಲ್ಲ. ಜಾತಿಯ ಕದಂಬಬಾಹುಗಳು ಇಡೀ ದೇಶವನ್ನು ಮತ್ತೂ ಗಟ್ಟಿಯಾಗಿ ಆವರಿಸಿಕೊಂಡಿರುವುದು ಸಮಾಜದ ಭೀಕರತೆಗೆ ನಿದರ್ಶನ.

ಮನುಷ್ಯ ಮನುಷ್ಯನ ನಡುವಿನ ಪ್ರೀತಿ, ಸಹಬಾಳ್ವೆಯ ಸಂಬಂಧಗಳು ಜಾತಿಯ ಲೆಕ್ಕಾಚಾರದಲ್ಲಿ ಮುನ್ನಡೆಯುತ್ತಿರುವುದು ನಮ್ಮ ಬದುಕಿಗೆ ಹಿಡಿದ ಕನ್ನಡಿಯಾಗಿದೆ. ಅಂತೆಯೆ ಕುವೆಂಪು ಅವರು ಪ್ರಸ್ತುತ ಪದ್ಯದಲ್ಲಿ ಜಾತಿಗಳ ಆಚೆ ಬದುಕನ್ನು ಕಟ್ಟಿಕೊಳ್ಳಲು ಕರೆನೀಡುತ್ತಾರೆ.

ಸನಾತನ ಸಂಸ್ಕೃತಿಯಲ್ಲಿ ಮೂಡಿ ಬಂದಿರುವ ಶಾಸ್ತ್ರ, ಪುರಾಣ, ವೇದ ಗ್ರಂಥಗಳಲ್ಲಿಯೂ ಮನುಷ್ಯನನ್ನು ಒಡೆದು ಆಳುವ ವಿಚಾರಗಳನ್ನು ಪ್ರಸ್ತಾಪಿಸಿಲ್ಲ. ಎಲ್ಲ ಶಾಸ್ತ್ರಗಳು, ಗ್ರಂಥಗಳು ಮನುಷ್ಯನ ಹೃದಯಕ್ಕೆ ಪ್ರೀತಿ ಸಹಬಾಳ್ವೆಯನ್ನೇ ಧಾರೆ ಎರೆದಿವೆ. ಎದೆಯ ಧ್ವನಿಗೂ ಮಿಗಿಲಾದ ಶಾಸ್ತ್ರ ಈ ಲೋಕದಲ್ಲಿಯೇ ಇಲ್ಲ. ಹೃದಯಕ್ಕೆ ಅಂತಃಕರಣದ ಭಾಷೆಯನ್ನೇ ಧರ್ಮಶಾಸ್ತ್ರ ಗ್ರಂಥಗಳು ನೀಡಿವೆ. ಶಾಸ್ತ್ರಗಳನ್ನು ಸರಿಯಾಗಿ ನೋಡದ ನಾವು ಎಲ್ಲ ಕಟ್ಟಳೆಗಳನ್ನು ಶಾಸ್ತ್ರಕ್ಕೆ ಆರೋಪಿಸಿ ಸಮಾಜವನ್ನು ಜಾತಿಯ ನೆಲೆಯಲ್ಲಿ ಆಳಿದ್ದು ದುರಂತ.

ಕುವೆಂಪು ಅವರು ಇಂತಹ ಜಾತಿಯಿಂದ ನಾವೆಲ್ಲರೂ ಹೊರಗೆ ಬರಲು ಕರೆ ನೀಡುತ್ತಾರೆ. 'ನಿನ್ನೆದೆಯ ದನಿಯೆ ಋಷಿ! ಮನ ನಿನಗೆ ನೀನು!' ಎನ್ನುವು ಮೂಲಕ ಹೃದಯದ ಭಾಷೆಯನ್ನು ವ್ಯಾಖ್ಯಾನಿಸುತ್ತಾರೆ.

ಮನು ಧರ್ಮಶಾಸ್ತ್ರ ನೀರಡಿಸಿ ಬಂದವರಿಗೆ ಜಾತಿ ನೋಡಿ ನೀರು ಕೊಡಬೇಕೆಂದು ಶಾಸನವನ್ನು ಬರೆದಿಲ್ಲ. ಆದರೆ ನಮ್ಮ ಮನಸ್ಸನ್ನು ಜಾತಿಗಳ ತಾಕಲಾಟದಲ್ಲಿ ಬಂಧನಕ್ಕೆ ಒಳಪಡಿಸಿದ್ದೇವೆ ಅಷ್ಟೇ. ಯಾರು ನೊಂದವರ ಕಂಬನಿಯನ್ನು ಒರೆಸುತ್ತಾರೋ, ಯಾರು ದೀನ ದಲಿತರ ಸೇವೆಯನ್ನು ಮಾಡುತ್ತಾರೋ, ಅನಾಥರನ್ನು ಪೊರೆಯುತ್ತಾರೋ ಅಲ್ಲಿ ಭಗವಂತನ ಅಸ್ತಿತ್ವವುಂಟು. ಅದೇ ಸ್ಪೃಶ್ಯ. ಆ ಪಥದಲ್ಲಿ ಸಾಗದೇ ಇರುವುದು ಅಸ್ಪೃಶ್ಯ.

ಮಡಿ–ಮೈಲಿಗೆ, ಮೇಲು–ಕೀಳು ಎಲ್ಲಿಯವರೆಗೆ ನಮ್ಮನ್ನು ಆವರಿಸಿಕೊಂಡಿರುತ್ತದೆಯೋ ಅಲ್ಲಿಯವರೆಗೆ ಮಾನವ ಸಮಾಜವನ್ನು ಮೇಲೆತ್ತಲಾಗುವುದಿಲ್ಲ. ಇದನ್ನು ಕವಿ ಬಹುತೀಕ್ಷ್ಣವಾಗಿ ಪ್ರತಿಕ್ರಿಯೆಸುತ್ತಾರೆ,

ಪಂಚಮರ ಶಿಶುವೊಂದು ಕೆರೆಯಲ್ಲಿ ಮುಳುಗುತಿರೆ
ದಡದಲ್ಲಿ ಮೀಯುತ್ತ ನಿಂತಿರುವ ನಾನು
ಮುಟ್ಟಿದರೆ ಬ್ರಹ್ಮತ್ವ ಕೆಟ್ಟುಹೋಗುವುದೆಂದು
ಸುಮ್ಮನಿದ್ದರೆ ಶಾಸ್ತ್ರಸಮ್ಮತವದೇನು?

ಎಂದು ಹೇಳುವ ಕವಿ ಜಾತಿಯ ಆಷಾಡಿಭೂತನವನ್ನು ತೊಡೆದು ಹಾಕಲು ಆಶಿಸುತ್ತಾರೆ, ಧರ್ಮ ಎಂಬುದು ಯಾವುದೇ ಕಟ್ಟುಪಾಡುಗಳನ್ನು ಹಾಕುವುದಿಲ್ಲ. 'ಸ್ವರ್ಗ ಹೋಗಲಿ, ಮತ್ತು ನರಕ ಬಂದರು ಬರಲಿ, ಎದೆಯ ಧೈರ್ಯವ ಮಾಡಿ ಬಿಸುಡಾಚೆಗೆತ್ತಿ!' ಎನ್ನುವ ಕವಿ ಮನಸ್ಸಿಗೆ ಧೈರ್ಯದ ನಿಲವುಗಳನ್ನು ತುಂಬುತ್ತಾರೆ.

ಪ್ರಸ್ತುತ ಜಗತ್ತಿನಲ್ಲಿ ಬದುಕುತ್ತಿರುವ ನಾವು ಜಾತಿಮತಗಳನ್ನು ತೂರಿ ಹೃದಯವಂತರಾಗಬೇಕಾಗಿದೆ. ಯಾವುದೋ ಕಾಲದಲ್ಲಿ ಹೇಳಿದ ಮಾತು, ಹಾಕಿದ ಕಟ್ಟುಪಾಡುಗಳು ಮೂಢನಂಬಿಕೆಗಳು, ಸ್ಪೃಶ್ಯ–ಅಸ್ಪೃಶ್ಯತೆಗಳನ್ನು ಬಿಟ್ಟು ಹೊರಬರಬೇಕಾಗಿದೆ. 'ಕಾಲಕ್ಕೆ ತಕ್ಕಂತೆ, ದೇಶಕ್ಕೆ ತಕ್ಕಂತೆ, ನಮ್ಮ ಹೃದಯವೆ ನಮಗೆ ಶ್ರೀಧರ್ಮಸೂತ್ರ!' ಎಂದು ಕವಿ ಹಂಬಲಿಸುವಂತೆ ಮಾನವ ಮಹಾಮಾನವನಾಗಬೇಕಾಗಿದೆ. ಭವ್ಯಮಾನವನಾಗಬೇಕಾಗಿದೆ. ಅಂದಾಗ ಮಾತ್ರ ಸಮಾಜಕ್ಕೆ ಅರ್ಥಬರಲು ಸಾಧ್ಯ.

ಅಣ್ಣ ಬಸವಣ್ಣನವರು ಹೇಳುವಂತೆ ಸಕಲ ಜೀವಾತ್ಮರಿಗೆ ಲೇಸನ್ನು ಬಯಸುವ ಶರಣರೇ ಕುಲಜರೆಂದು ಹೇಳುವ ನುಡಿ ನಮ್ಮ ಬದುಕಿಗೆ ಹತ್ತಿರವಾಗಬೇಕಾಗಿದೆ. ನಾವು ಹೃದಯವಂತರಾದರೆ ಮಾತ್ರ ನವಸಮಾಜ ಕಟ್ಟಲು ಸಾಧ್ಯವೆಂಬ ಆಶಯ ಕವಿ ಕುವೆಂಪು ಅವರದು.

# 9. ಮೂರನೆ ಸಲಹೆ

ಕೆ.ಎಸ್.ನರಸಿಂಹಸ್ವಾಮಿ

ಕನ್ನಡದ ನವೋದಯ ಸಾಹಿತ್ಯದ  ಶ್ರೇಷ್ಠ ಕವಿಗಳಲ್ಲಿ ಕೆ.ಎಸ್.ನರಸಿಂಹಸ್ವಾಮಿ ಒಬ್ಬರು. ಅವರು 'ಮೈಸೂರು ಮಲ್ಲಿಗೆ'ಯ ಕವಿ ಎಂದೇ ಜನಜನಿತರಾಗಿದ್ದರು. 'ಮೂರನೆ ಸಲಹೆ' ಅವರ ಶ್ರೇಷ್ಠ ಕವನಗಳಲ್ಲಿ ಒಂದು.

ಕಥನ ಕವನದ ಸ್ವರೂಪದಲ್ಲಿರುವ ಪದ್ಯವು 'ಕೋರ್ಟ್‌ನ ಮೆಟ್ಟಿಲೇರಿದ ವ್ಯಾಜ್ಯದ ತೀರ್ಪು ಬಂದ ಕೂಡಲೇ ಸಮಸ್ಯೆ ಬಗೆಹರಿದಂತೆ' ಎಂಬುದು ಸಾಧಾರಣವಾದ ನಂಬಿಕೆ. ಆದರೆ ವ್ಯಾಜ್ಯ ತೀರಿದ ಮಾತ್ರಕ್ಕೆ ಎಲ್ಲವೂ ಸುಖಕರವಾಗಬೇಕೆಂದೇನಿಲ್ಲ. ಅದು ಇನ್ನಷ್ಟು ಕಷ್ಟ ಪರಂಪರೆಗಳನ್ನು ಸೃಷ್ಟಿಸಲೂಬಹುದೆಂಬ ಸಂದೇಶ ಕವನದ್ದು.

ಅಲ್ಲಮಪ್ರಭುದೇವರು ಒಂದು ವಚನದಲ್ಲಿ ಹೀಗೆ ಹೇಳುತ್ತಾರೆ, 'ಹೆಣ್ಣಿಗಾಗಿ ಸತ್ತದು ಕೋಟ್ಯಾನು ಕೋಟಿ, ಮಣ್ಣಿಗಾಗಿ ಸತ್ತದು ಕೋಟ್ಯಾನು ಕೋಟಿ, ಹೊನ್ನಿಗಾಗಿ ಸತ್ತದು ಕೋಟ್ಯಾನು ಕೋಟಿ, ನಿನಗಾಗಿ ಸತ್ತವರೊಬ್ಬರನ್ನು ಕಾಣೆ ಗುಹೇಶ್ವರಾ' ಎಲ್ಲರೂ ಹೆಣ್ಣು-ಮಣ್ಣು-ಹೊನ್ನಿಗಾಗಿಯೇ ಬಡಿದಾಡಿ ಜೀವನದ ಪಯಣವನ್ನು ಪೂರೈಸುತ್ತಾರೆ. ಇದು ಕೊನೆ ಇಲ್ಲದ ಪಯಣ ಎಂಬುದನ್ನು ಗಮನಿಸಬೇಕು.

ಆಸ್ತಿಯ ವ್ಯಾಜ್ಯಗಳು ಕೋರ್ಟಿನಲ್ಲಿ ವರ್ಷಾನುಗಟ್ಟಲೇ ನಡೆಯುತ್ತವೆ ಕೊನೆಗೆ ಗೆದ್ದವನು ಸುಖಕರವಾಗಿ ಇರುತ್ತಾನೆಯೇ ಇಲ್ಲ. ವ್ಯಾಜ್ಯ(ಕೇಸು)ಮುಗಿದ ಮೇಲೂ ಒಂದಿಲ್ಲಾ ಒಂದು ಸಮಸ್ಯೆಗಳು ಆವರಿಸಿಕೊಳ್ಳುವುದರಲ್ಲಿ ಸಂದೇಹವಿಲ್ಲ. ಅದನ್ನೇ ಕವಿ ಹಾಸ್ಯಮಯವಾಗಿ ಪದ್ಯದಲ್ಲಿ ನಿವೇದಿಸುತ್ತಾರೆ.

ಹಲವಾರು ವರ್ಷ ಕೋರ್ಟ್‌ನಲ್ಲಿ ನಡೆದ ಮನೆಯ (ಕೇಸ್)ವ್ಯಾಜ್ಯದಲ್ಲಿ, ಕೇಸನ್ನು ಏನೋ ಜಯಸಿದ್ದಾಯಿತು, ಆದರೆ ಗೆದ್ದ ಮೇಲೆಯೇ ಒಂದರ ಹಿಂದೊಂದು ಸಂಕಟಗಳು ಪ್ರಾರಂಭವಾಗಿದ್ದು ಎಂಬುದನ್ನು ಹೇಳುವ ಕವಿ ಗೆದ್ದವರ ವ್ಯಥೆಯನ್ನು ಬಿಡಿಸಿಡುತ್ತಾರೆ.

ಹಳೆಯೂರಿನ ಮನೆಯ ಕೇಸು ಗೆದ್ದ ಖುಷಿಯಲ್ಲಿ ಆ ಮನೆಯಲ್ಲಿ ಇರಲು ಹೆಂಡತಿ ಮಕ್ಕಳನ್ನು ಕರೆದುಕೊಂಡು ಹೋದರೆ ಮನೆಯ ಸ್ಥಿತಿ, ಅದೋಸ್ಥಿತಿಯಾಗಿತ್ತು. ಯಾವುದೋ ಕಾಲದ ಹಳೆ ಮನೆ ನೋಡಲು ಶಿಥಿಲಾವಸ್ಥೆಯಲ್ಲಿತ್ತು. ಅದನ್ನು ನೋಡಿಯೇ ಕವಿಯ ಕನ್ನಡಕವು ಬೆವರಿತ್ತು ಎಂದರೆ ಮನೆಯ ದುಸ್ಥಿತಿಗೆ ಕನ್ನಡಿ

ಹಿಡದಂತಾಗಿತ್ತು. ಮನೆಯ ಕಂದಾಯ(ಟ್ಯಾಕ್ಸ್) ಬಾಕಿ ಉಳಿದಿತ್ತು, ಇಲ್ಲಿ ಸದ್ಯ ಬೇಡವೆಂದು, ಬಾಡಿಗೆಯನ್ನು ಅರಸಿ ಮಲಗಿದರೂ ನಿದ್ದೆಯೂ ಬರಲಿಲ್ಲ. ಒಂದೇ ಒಂದು ಚಿಂತೆ 'ಮನೆಯ ರಿಪೇರಿ'. ವ್ಯಾಜ್ಯದಲ್ಲಿ ಗೆದ್ದ ಮನೆಯನ್ನು ಉಳಿಸಿಕೊಳ್ಳಬೇಕೆಂಬ ಅಭಿಮಾನವೇ ಇದೇ ಆದರೆ ಅದಕ್ಕೆ ಬೇಕು ಹಣ ಹಾಗೂ ಅನುಭವ. ಅವೆರೆಡೂ ನನ್ನಲ್ಲಿ ಇಲ್ಲವೆನ್ನುತ್ತಾರೆ ಕವಿ. ಕೋರ್ಟ್‌ನಲ್ಲಿ ಈ ಮನೆ ಪಡೆಯಲು ದಾವೆ ಹೂಡಿ, ಸಾಕಷ್ಟು ಸಾಲವನ್ನು ಮಾಡಿ ಸಾಕಾಗಿರುವಾಗ ಮನೆಯ ದುರಸ್ಥಿ ಅಯ್ಯೋ ಎನ್ನುತ್ತಾರೆ.

ಹೋಗಲಿ ಇನ್ನೊಬ್ಬರ ಸಲಹೆಯನ್ನು ಕೇಳಿದರೆ ಅವರು ಹೇಳುತ್ತಾರೆ, 'ರಿಪೇರಿಗಿಂತ ಹೊಸ ಮನೆ ಕಟ್ಟುವುದೇ ಒಳಿತೆಂದು.' ಮತ್ತೊಬ್ಬರೋ 'ಹೊಸಮನೆ  ಹಳೆಯದರ ಒಂದು ಕಂಬಕ್ಕೆ ಸಮನಲ್ಲ' ಎನ್ನುವರು. ಒಬ್ಬೊಬ್ಬರದು ಒಂದೊಂದು ಅದ್ಭುತ ಸಲಹೆ. ಅದಕ್ಕೆ ಲೇಖಕರು ಒಂದು ನಿರ್ಧಾರಕ್ಕೆ ಬರುತ್ತಾರೆ.

> 'ಹಳೆಯ ಮನೆಯ ರಿಪೇರಿಯೂ ಬೇಡ, ಹೊಸಮನೆಯ
>
> ಕಟ್ಟಿಸುವುದೂ ಬೇಡ; ಬಾಡಿಗೆಯ ಮನೆಯಲ್ಲೇ
>
> ಮುಂಬರಿಯಬಹುದೆಂದು ಮೂರನೆಯ ಸಲಹೆ.'

ನಮ್ಮೆಲ್ಲರ ಬದುಕೇ ಹಾಗೇ. ಅದು ತ್ರಿಶಂಕು ಸ್ಥಿತಿಯಲ್ಲೇ ಸಾಗುತ್ತದೆ. ಒಂದು ಗಾದೆಮಾತು ಇದೆ 'ಊದೋದು ಕೊಟ್ಟ ಬಾರಸೋದ ತಂದ್ಹರಂತ', 'ಒಂದು ಮಾಡಲು ಹೋಗಿ ಮತ್ತೊಂದು ಮಾಡಿದರ್ರು' ಎಂಬ ನುಡಿಗಳು ಸುಳ್ಳಲ್ಲ.

ಕವಿ ಹೇಳುವಂತೆ ಜೀವನದಲ್ಲಿ ಹಣ ಮತ್ತು ಅನುಭವ ಒಟ್ಟೊಟ್ಟಿಗೆ ಕೆಲಸ ಮಾಡಿದರೆ ಮಾತ್ರ ಬದುಕು ನೆಮ್ಮದಿಯಾಗುವುದು. ಹಣ ಇಲ್ಲದಿದ್ದರೂ ಪರವಾಗಿಲ್ಲ ಅನುಭವ ಇರಲೇಬೇಕು. ಇಲ್ಲದಿದ್ದರೆ ಯಾರದೋ ಒತ್ತಾಯಕ್ಕೆ ನಮ್ಮ ಬದುಕನ್ನೇ ನಾವು ಬಲಿಕೊಡುವ ನೆಲೆಗೆ ಬಂದು ನಿಲ್ಲುತ್ತೇವೆ. ಅಂದರೆ ಜೀವನವು ನಾವು ಊಹಿಸಿದಂತೆ ಇರುವುದಿಲ್ಲ. ಯಾವುದು ಸುಖವೆನ್ನುತ್ತೇವೆಯೋ ಅದರ ಹಿಂದೆ ಕಷ್ಟಗಳ ಬೆಟ್ಟವೇ ಮನೆಮಾಡಿರುತ್ತದೆ. ಅದನ್ನು ಎದುರಿಸುವ ಮನೋಸ್ಥಿತಿಯನ್ನು ಹೊಂದುವುದು ಅಗತ್ಯ.

# 10. ವಿಚಾರಣೆ

ಜಿ.ಎಸ್.ಶಿವರುದ್ರಪ್ಪ

ಕರ್ನಾಟಕದ ಮೂರನೇ ರಾಷ್ಟ್ರಕವಿಗಳು ಡಾ.ಜಿ.ಎಸ್.ಶಿವರುದ್ರಪ್ಪನವರು. ಕವಿಗಳಾಗಿ, ವಿಮರ್ಶಕರಾಗಿ, ಪ್ರಾಧ್ಯಾಪಕರಾಗಿ ಕನ್ನಡ ಸಾಹಿತ್ಯಕ್ಕೆ ಅಪಾರವಾದ ಕೊಡುಗೆಯನ್ನು ನೀಡಿದ ಶ್ರೇಷ್ಠ ಸಾಹಿತಿಗಳು. ಅವರ 'ವಿಚಾರಣೆ' ಕವನ ಬದುಕಿನ ಸತ್ಯಗಳನ್ನು ಇಲ್ಲಿ ಸಾಕ್ಷಾತ್ಕರಿಸಿ ಕೊಡುತ್ತದೆ.

ಪರಿಸ್ಥಿತಿಯ ಒತ್ತಡಕ್ಕೆ ಒಳಗಾಗಿ ವ್ಯಕ್ತಿಯೊಬ್ಬನು ಅಪರಾಧವನ್ನು ಮಾಡಿರಬಹುದು. ನ್ಯಾಯ ತೀರ್ಮಾನ ವ್ಯವಸ್ಥೆಯ ಲೋಪಗಳ ಲಾಭ ಪಡೆದು ಶಿಕ್ಷೆಯಿಂದ ತಾತ್ಕಾಲಿಕವಾಗಿ ಪಾರಾಗಿರಲೂಬಹುದು. ಆದರೆ ಆತ್ಮಸಾಕ್ಷಿ ಅವನನ್ನು ಚುಚ್ಚುತ್ತಲೇ ಇರುತ್ತದೆ. 'ಕಡೆಯ ದಿನ ವಿಚಾರಣೆ'ಯಲ್ಲಿ ಮಾಡಿದ ಪಾಪಗಳನ್ನು ಪ್ರಾಂಜಲವಾಗಿ ಒಪ್ಪಿಕೊಂಡು ಮನವನ್ನು ಹಗುರಮಾಡಿಕೊಳ್ಳವುದು ಉತ್ತಮರ ಲಕ್ಷಣ ಎಂಬ ಸಂದೇಶವನ್ನು ಪ್ರಸ್ತುತ ಪದ್ಯ ನೀಡುತ್ತಿದೆ.

ನಮ್ಮ ಅಂತರಂಗ ಬಹಿರಂಗಗಳು ಶುದ್ಧವಾದಾಗ ಬದುಕಿನ ಸತ್ಯವು ಮನವರಿಕೆಯಾಗುತ್ತದೆ. ಮನುಷ್ಯನಿಗೆ ಆತ್ಮಸಾಕ್ಷಿ ಎಂಬುದು ಇರಲೇಬೇಕೆಂಬ ಧ್ವನಿಯು ಕಾವ್ಯ ಉದ್ದಕ್ಕೂ ಕೇಳಿಬರುತ್ತದೆ.

ಕವಿ ಪದ್ಯದ ಆರಂಭದಲ್ಲಿಯೇ ವಿಚಾರಣೆಗೆ ಒಳಪಡುವ ಅಪರಾಧಿಯನ್ನು ನಾಯ್ಯಾಧೀಶ ಹೇಳುವ ಪರಿ ವಿಭಿನ್ನ–

ಬಾ, ಪಾಪೀ ಬಾ; ಕೈಕಟ್ಟಿ ನಿಂತುಕೋ  
ಕಟಕಟೆಯೊಳಗೆ–  
ಬೊಗಳು ಇದುವರೆಗು ಮಾಡಿದೆಲ್ಲವನು ಬಾಯ್ಬಿಟ್ಟು;  
ಇಲ್ಲಿ ಗೆಲುವುದು ದಿಟವೆ, ಸಟೆ ಅಲ್ಲ,  
ನೆನಪಿರಲಿ ನಿನಗೆ.

ನಾವೆಲ್ಲರೂ ಬದುಕಿನ ನ್ಯಾಯಾಲಯದ ಕಟಕಟೆಯಲ್ಲಿ ನಿಂತವರೆ, ಬದುಕುವುದಕೋಸ್ಕರ ಏನೆಲ್ಲ ಅಪರಾಧಗಳನ್ನು ಮಾಡುತ್ತಿದ್ದೇವೆ. ಅದನ್ನು ಒಪ್ಪಿಕೊಳ್ಳುವ ಮನಸ್ಥಿತಿ ನಮ್ಮಲ್ಲಿ ಇಲ್ಲ. ತಪ್ಪುಗಳನ್ನು ಮುಚ್ಚಿಕೊಳ್ಳಲು ಮತ್ತೊಂದು ತಪ್ಪನ್ನು ಮಾಡುತ್ತಿದ್ದೇವೆ. ಆದರೆ ಸತ್ಯಕ್ಕೆ ಕೊನೆಯ ಜಯ ಎಂಬ ಜ್ಞಾನ ಅರಿವು ನಮಗಿಲ್ಲ. ಸತ್ಯವನ್ನು ಮರೆಮಾಚಲು ಸಾಧ್ಯವೇ! ಇಲ್ಲ.

ಧರ್ಮ ಧರ್ಮವೆಂದು ಹಾತೊರೆಯುವ ನಾವುಗಳು, ಆ ಧರ್ಮ ಗ್ರಂಥಗಳ ತಿರುಳನ್ನು ಅರಿತಿಲ್ಲ. ನಮ್ಮ ಧರ್ಮಗಳು ನಮಗೆ ಸತ್ಯವನ್ನೇ ಹೇಳಿವೆ. ಅದರ ಧರ್ಮಪ್ರಜ್ಞೆಯು ನಮಗಿಲ್ಲ. ಅದರ ಮೇಲೆ ಪ್ರಮಾಣ ಮಾಡಿಯಾದರೂ ಸತ್ಯವನ್ನೇ ಹೇಳೋಣವೆಂದರೂ ಸಾಧ್ಯವಾಗುತ್ತಿಲ್ಲ, ಏಕೆ? ಎಂಬ ಪ್ರಶ್ನೆ ಕವಿಯದು.

ನಮ್ಮ ಅಂತರಂಗವನ್ನು ಶೋಧಿಸಿ, ಆತ್ಮಸಾಕ್ಷಿಗೆ ಶರಣಾಗಿ ನಮ್ಮ ಸ್ವಯಂ ಅಪರಾಧಗಳನ್ನು ಒಪ್ಪಿಕೊಳ್ಳುವ ಮನೋಭಾವ ನಮ್ಮಲ್ಲಿ ಏಕೆ ಮೂಡಿಬರುತ್ತಿಲ್ಲ. ಇಂದು ಏನೋ ಒಂದು ಸುಳ್ಳು ಹೇಳಿ ತಪ್ಪಿಸಿಕೊಳ್ಳಬಹುದು,

ಆದರೆ ನಾಳೆ ಆ ದೇವರು ಸುಮ್ಮನಿರುವನೇ, ಇಲ್ಲ ಆತ ನಮ್ಮೆಲ್ಲ ಅಪರಾಧಗಳ ಲೆಕ್ಕಪತ್ರವನ್ನು ಬರೆದಿಟ್ಟಿದ್ದಾನಲ್ಲ. ಅವನಿಂದ ತಪ್ಪಿಸಿಕೊಳ್ಳಲು ಸಾಧ್ಯವೇ? ಅದನ್ನೇ ಕವಿ ಹೀಗೆ ಹೇಳುತ್ತಾರೆ–

ನೆನಪಿಲ್ಲವೇ ನಿನಗೆ? ಬರೆದಿಟ್ಟಿದಾನೆ
ಎಲ್ಲವನು ಈ ಗೂಢಚಾರ ;
ಬೇರಿಂದ ತುದಿಯೆಲೆತನಕ ಗೊತ್ತಿದೆ ನಮಗೆ
ನಿನ್ನ ಅವತಾರ !

ಇಡೀ ನಮ್ಮ ಬದುಕಿನುದ್ದಕ್ಕೂ ನಾವು ಅಪರಾಧಗಳ ಮೇಲೆ ಅಪರಾಧವನ್ನು ಮಾಡುತ್ತಲ್ಲೇ ಬಂದಿದ್ದೇವೆ ಅವುಗಳನ್ನು ಒಪ್ಪುವ ಮನೋಭಾವ ಬೆಳೆಸಿಕೊಂಡಿಲ್ಲವಷ್ಟೇ. ನಮ್ಮ ಬದುಕಿನ 'ಒಳಗೂ ಹೊರಗೂ ಸಾಮ್ಯವಿಲ್ಲದೆಯೆ ಮಿಡುಕಾಡಿದ್ದು' ಸುಳ್ಳಲ್ಲ. ಬದುಕಲು ಒಂದೊಂದು ರೀತಿಯ ಮುಖವಾಡವನ್ನು ನಾವೆಲ್ಲ ತೊಟ್ಟಿರುವುದು ಸೂರ್ಯನಷ್ಟೇ ಸತ್ಯ. ಅವರಿವರು ಬಯಲಿಗೆಳೆದಾರೆಂಬ ಭಯ, ಆತಂಕದಲಿ ಎಲ್ಲವನ್ನೂ ಮುಚ್ಚಿಟ್ಟು ಬದುಕುವಂತಾಗಿರುವುದು ವಿಪರ್ಯಾಸ. ಅಂತಹ ಮುಖವಾಡವನ್ನು ಕಳೆದು, ನಿಜಬದುಕಿನ ಸತ್ಯವನ್ನು ಹೊರಹಾಕುವ ಮನೋಭಾವವನ್ನು ಬೆಳೆಸಿಕೊಳ್ಳಬೇಕಾಗಿದೆ ಅಷ್ಟೇ.

ನಾನು ಎಲ್ಲಿಯೇ ತಲೆಮರೆಸಿಕೊಂಡರೂ ಪ್ರಯೋಜನವಿಲ್ಲ. ಹೊರಗಿನ ಲೋಕಕ್ಕೆ ನೀನು ಮರೆಯಾಗಿರಬಹುದು, ಆದರೆ ದೇವರ ಕಣ್ಣಿನಿಂದ ತಪ್ಪಿಸಿಕೊಳ್ಳಲು ಸಾಧ್ಯವೇ, ಇಲ್ಲ. ನಿನ್ನ ಬದುಕಿನ ಎಲ್ಲ ವೇದನೆಗಳನ್ನು ಹೇಳಲೇಬೇಕು, ಮೈಮನಗಳನ್ನು ಹಗುರು ಮಾಡಿಕೊಳ್ಳಲೇಬೇಕು. ಸುತ್ತಲೂ ಮುತ್ತಿದ ಪ್ರಶ್ನೆಗಳಿಗೆ ಉತ್ತರಿಸಲೇಬೇಕು. ಎಲ್ಲಿಯವರೆಗೆ ಸತ್ಯವನ್ನು ಬಿಚ್ಚಿಡುವ ಕೆಲಸ ಮಾಡುವುದಿಲ್ಲವೋ ಅಲ್ಲಿಯವರೆಗೆ ಬದುಕಿಗೆ ನೆಮ್ಮದಿಯೇ ಇಲ್ಲವೆನ್ನುತ್ತಾನೆ ಕವಿ.

ಜಗದ ನ್ಯಾಯಾಧೀಶನ ಮುಂದೆ ನಾವೆಲ್ಲರೂ ವಿಚಾರಣೆಗೆ ಒಳಪಡಲೇಬೇಕು. ಅದರಲ್ಲಿ ಯಾವ ಮುಚ್ಚುಮರೆಯಿಲ್ಲ. ನಮ್ಮ ಅಂತರಂಗದಲ್ಲಿ ಗುಪ್ತವಾದ, ಸೂಪ್ತವಾದ ಸತ್ಯವನ್ನು ಹೊರಚೆಲ್ಲಲೇಬೇಕು. ನಮ್ಮನ್ನು ನಾವು ವಿಮರ್ಶಿಸಿಕೊಂಡರೆ, ಆತ್ಮಾವಲೋಕನ ಮಾಡಿಕೊಂಡರೆ ಅದೇ ಸುಂದರ ಬದುಕು. ಸುಂದರ ಜಗತ್ತು. ನಾವಾಗಿಯೇ ಎಲ್ಲವನ್ನೂ ಒಪ್ಪಿಕೊಂಡಾಗಲೇ ಬದುಕಿನ ಆನಂದ ಇಮ್ಮಡಿಯಾಗುವುದು. ಯಾರು ಹೀಗೆ ಒಪ್ಪಿಕೊಂಡು ಬದುಕುತ್ತಿದ್ದಾರಲ್ಲ, ಅವರಿಗೆ ಯಾವುದೇ ಭಯವಿಲ್ಲ, ಆತಂಕವಿಲ್ಲ, ನೋವಿಲ್ಲ, ಸಂಕಟವಿಲ್ಲ, ಮನದಲ್ಲಿ ತಳಮಳ ತಲ್ಲಣಗಳಿಲ್ಲ. ಕವಿ ಹೇಳುವಂತೆ ನಾವೆಲ್ಲರೂ ಈ ಭೂಮಿಯಲ್ಲಿ ವಿಚಾರಣೆಗೆ ಒಳಗಾಗುವವರೇ ಮೇಲೊಬ್ಬ ನ್ಯಾಯಾಧೀಶನ ಆದೇಶಕ್ಕೆ ತಲೆಬಾಗಲೇ ಬೇಕಾಗಿದೆ.

ನಮ್ಮನ್ನು ನಾವು ಆ ಭಗವಂತನಿಗೆ ಒಪ್ಪಿಸಿಕೊಳ್ಳುವ ಶುಭಘಳಿಗೆಗೆ ಹೆಜ್ಜೆಹಾಕಬೇಕಾಗಿದೆ. ನಮ್ಮನ್ನು ನಾವು ಸತ್ಯಕ್ಕೆ ಒಪ್ಪಿಸಿಕೊಂಡಾಗಲೇ ನಮ್ಮ ಬದುಕಿಗೆ ಅರ್ಥ. ಬಸವಣ್ಣನವರು ಹೇಳುವಂತೆ 'ನ್ಯಾಯನಿಷ್ಠುರಿ, ದಾಕ್ಷಿಣ್ಯಪರ ನಾನಲ್ಲ, ಲೋಕವಿರೋಧಿಗಳಿಗೆ ಶರಣನಾರಿಗಂಜುವನಲ್ಲ' ಎಂಬಂತೆ ನಮ್ಮ ಆತ್ಮಸಾಕ್ಷಿಗೆ ವಿರೋಧವಾಗದ ಹಾಗೆ ಬದುಕಬೇಕಾಗಿದೆ.

# 11. ಹಕ್ಕು

## ಕೆ.ಎಸ್.ನಿಸಾರ್ ಅಹಮದ್

ನಾಡೋಜ ನಿಸಾರ್ ಅಹಮದ್ ಅವರನ್ನು ನಿತ್ಯೋತ್ಸವದ ಕವಿ ಎಂದೇ ಕರೆಯಲಾಗುತ್ತದೆ. ಕವನ, ವಿಮರ್ಶೆ, ಸಂಶೋಧನೆ ಹೀಗೆ ಕನ್ನಡ ಸಾಹಿತ್ಯ ಹಲವಾರು ನೆಲೆಗಳಲ್ಲಿ ಕಾರ್ಯನಿರ್ವಹಿಸಿದವರು ನಿಸಾರ್ಅಹಮದ್ ಅವರು.

'ಹಕ್ಕು' ಅವರ ವಿಶಿಷ್ಟ ಕವನಗಳಲ್ಲಿ ಒಂದಾಗಿದೆ. ಹಕ್ಕು ಸ್ಥಾಪನೆ ಮನುಷ್ಯನ ಸ್ವಭಾವದಲ್ಲಿ ಒಂದು. ಆದರೆ ಅದರ ವ್ಯಾಪ್ತಿ ಎಷ್ಟೇ? ನಮ್ಮದು ಎಂದುಕೊಂಡಿದ್ದೆಲ್ಲವೂ ನಿಜವಾಗಿಯೂ ನಮ್ಮದೇ? ಹಕ್ಕಿನ ವ್ಯಾಪ್ತಿ ಮತ್ತು ಮಿತಿಗಳನ್ನು ಅರಿತಾಗ ಜೀವನ ಸುಗಮ. ಇಲ್ಲದಿದ್ದಲ್ಲಿ ಅನವಶ್ಯಕ ಕ್ಲೇಶ ನಮ್ಮನ್ನು ಕಾಡುತ್ತದೆ ಎಂಬುದು ಕವನದ ಸಂದೇಶ.

ನನ್ನ ಕಾಂಪೌಂಡಲ್ಲಿ ನಾನು ಬೆಳೆಸಿದ ತೆಂಗು
ನೋಡುನೋಡುತ್ತಿದ್ದಂತೆ ಎತ್ತರ ಬೆಳೆದದ್ದು ಗೊತ್ತಿದ್ದರೂ
ಬಿರುಬಿಸಿಲಿನಲ್ಲೊಮ್ಮೆ ಮನೆಗೆ ಬರುವಾಗ್ಗೆ
ರಸ್ತೆಗೂ ಅದು ನೆರಳ ಚೆಲ್ಲಿದ ಅರಿವಾದದ್ದು
ಆ ನೆರಳಲ್ಲಿ ನಿಂತ ಯಾರದೋ ಕಾರು ಕಂಡಾಗಲೇ.
ಅರೆ, ಎಂದು ಒಂದು ಕ್ಷಣ ಆಶ್ಚರ್ಯ ಪಟ್ಟೆ,
ಆಲೋಚಿಸಿದೆ;
ನೆರಳು ನನ್ನ ಮರದ್ದು, ನಿಲ್ಲಿಸಬೇಡಯ್ಯ ಕಾರು
ಅಂದರೆ ತಪ್ಪೆ?
ಅದರ ನೆರಳಲ್ಲಿ ನಿಂತಿದ್ದರಿಂದ ಆ ಕಾರು ನನ್ನದೆಂದರೆ ತಪ್ಪೆ?
ದಬಾಯಿಸಿದರೆ ಅವ ಹೀಗೆ : ಬೆಪ್ಪೆ,
ತೆಂಗು ನಿನ್ನದಿರಬಹುದು, ಅದರ ನೆರಳು ನಿನ್ನದ?
ದಿನ ಬೆಳಗಾದರೆ ಗರಿಗಳಲ್ಲಿ ಅರಳುವ ಹಕ್ಕಿ ನಿನ್ನದ ?
ಅದರ ಕಿಚಪಿಚ, ಅಲೆಯುವ ಹವೆ, ಹೊಳೆಯುವ ಕಿರಣ,
ತೂಗುವ ಚಂದ್ರ – ನಿನ್ನದ?
ಇದು ಸಾರ್ವಜನಿಕ ರಸ್ತೆ – ನಿಲ್ಲಿಸಲು,
ಅಲ್ಲಿ ಚೆಲ್ಲಿದ ನೆರಳೂ ನನ್ನದೆನ್ನಲು ಹಕ್ಕುಂಟು.
ಅಲ್ಲದೆ, ನೆರಳ ನೆಪದಿಂದ ವಾಹನ ನಿಲ್ಲುತ್ತೆ,
ಹಾಗಾಗಿ ಸಂಚಾರಕ್ಕೆ ಅಡಚಣೆ, ಕತ್ತರಿಸು
ಮರವನೆಂದರೆ ಎಲ್ಲಿದೆ ನನ್ನಲ್ಲಿ ಜವಾಬು?
ಕ್ಷಣ, ದಿಗಿಲಾಗಿ ಕಾರಲ್ಲಿ ಯಾರೂ ಇಲ್ಲದ್ದು ಖುಷಿಯಾಗಿ
ನೆರಳ ನೋಡದೆ
ಬರೀ ಕಾರಿನಂದವ ಮೆಚ್ಚುತ್ತ ಸರಸರ ಒಳಗೆ ನಡೆದೆ.

ಕವಿ ಇಡೀ ಪದ್ಯದುದ್ದಕ್ಕೂ ಮನುಷ್ಯನ ಆಶೆತನ, ನಾನು ನನ್ನದೆಂಬ ಅಹಂಕಾರ, ಎಲ್ಲವೂ ನನ್ನದೇ ಆಗಬೇಕೆಂಬ ಒತ್ತಾಯ ದರ್ಪತನಗಳನ್ನು ಅತ್ಯಂತ ಮನೋಜ್ಞವಾಗಿ ವಿಶ್ಲೇಷಿಸುತ್ತಾರೆ. ಕವಿ ಬೆಳೆಸಿದ ತೆಂಗಿನ ಸಸಿ, ಬೆಳೆದು ಹೆಮ್ಮರವಾಗಿದೆ ನೆರಳನ್ನು ರಸ್ತೆ ಆಚೆಗೆ ಚೆಲ್ಲಿದೆ. ಆ ನೆರಳಿನಲ್ಲಿ ನಿಂತ ಯಾರದೋ ಕಾರು ಆಶ್ರಯ ಪಡೆದದ್ದು ತಪ್ಪಲ್ಲ, ಆದರೆ ನೆರಳಿನ ಪ್ರತಿಫಲವಾಗಿ ಬಯಸುವುದು ಎಷ್ಟು ಸತ್ಯ ಎಂಬ ಜಿಜ್ಞಾಸೆ ಕವಿಯದು.

ನಾವು ಬದುಕಿನಲ್ಲಿ ಎಲ್ಲವೂ ನಮ್ಮದೇ ಆಗಬೇಕೆಂಬ ಹಂಬಲವನ್ನೇ ವ್ಯಕ್ತಪಡಿಸುತ್ತೇವೆ. ಅದು ಎಷ್ಟು ಸತ್ಯ ಎಂಬ ಅರಿವು ನಮಗಿರುವುದಿಲ್ಲ. ನಮ್ಮ ಜೀವನವು ಲೆಕ್ಕ ಹಾಕುವುದರಲ್ಲಿಯೇ ಸಾಗುತ್ತದೆ ವಿನಃ ಇದ್ದುದರಲ್ಲಿಯೇ ಸಂತೃಪ್ತಿಯನ್ನು ಹೊಂದಬೇಕೆಂಬ ಆಶಾಭಾವ ಮೊಳೆಕೆ ಒಡೆಯುವುದಿಲ್ಲ.

ಎಲ್ಲದರ ಮೇಲೆಯೂ, ಎಲ್ಲರ ಮೇಲೆಯೂ ಹಕ್ಕು ಚಲಾಯಿಸುವುದರಲ್ಲಿಯೇ ವ್ಯರ್ಥವಾಗಿ ಜೀವನವನ್ನು ಸಾಗಿಸುತ್ತೇವೆ. ನಮ್ಮ ಆಚೆಗೆ ಒಂದು ಜಗತ್ತು ಹೇಗಿದೆ ಎಂಬ ತರ್ಕ ನಮಗಿರುವುದಿಲ್ಲ. ನಮ್ಮ ವರ್ತುಲದಲ್ಲಿಯೇ ನಾವು ವಿಚಾರಿಸಿದರೆ ಜೀವನವನ್ನು ಮುನ್ನಡೆಸುವುದು ಕಷ್ಟ. ಮರವೇನೋ ಬೆಳೆಸಿದ್ದೇವೆ, ಅದರ ಫಲಗಳೆಲ್ಲ ನನಗೆ ಬರಲಿ ಎಂಬುದು ಹುಂಬುತನ, ಮಾತ್ರವಲ್ಲದೇ ಎಷ್ಟೋ ಸಂದರ್ಭಗಳಲ್ಲಿ ಅದು ಭಂಡತನವು ಎನಿಸುವುದು. ಇಂತಹ ಸಂಕುಚಿತ ಮನೋಸ್ಥಿತಿಯಿಂದ ನಾವೆಲ್ಲರೂ ಹೊರಬರಬೇಕಾಗಿದೆ.

ಎಲ್ಲಿ ವಿಶಾಲವಾದ ಮನೋಭಾವವಿದೆ, ಹೃದಯವಂತಿಕೆ ಮನೆಮಾಡಿದೆ ಅಲ್ಲಿ ನೆಮ್ಮದಿ ಹಾಗೂ ಶಾಂತಿ ನೆಲೆಸುವುದರಲ್ಲಿ ಸಂದೇಹವಿಲ್ಲ. ಇಲ್ಲದಿದ್ದರೆ ಎಲ್ಲವೂ ನನಗೆ ಸಲ್ಲಬೇಕೆಂಬ ಹಕ್ಕನ್ನು ಚಲಾಯಿಸಿದರೆ ಮಾನಸಿಕ ಕ್ಷೋಬೆ ಅಷ್ಟಿಷ್ಟಲ್ಲ. ಇಂತಹ ಮನೋವ್ಯಾಪಾರದಿಂದ ಹೊರಬರುವುದು ಅಗತ್ಯ ಹಾಗೂ ಅನಿವಾರ್ಯ.

ಕವಿ ನಿಸಾರ್ ಅಹಮದ್ ಅವರು ಕೊನೆಗೆ ಹೇಳುವಂತೆ

’ಕಾರಲ್ಲಿ ಯಾರೂ ಇಲ್ಲದ್ದು ಖುಷಿಯಾಗಿ
ನೆರಳ ನೋಡದೆ
ಬರೀ ಕಾರಿನಂದವ ಮೆಚ್ಚುತ್ತ ಸರಸರ ಒಳಗೆ ನಡೆದೆ’

ನಾವು ಯಾವುದಕ್ಕೂ ಆಸೆ ಪಡದೆ, ಮತ್ತೊಂದು ಇನ್ನೊಂದನ್ನು ಅಪೇಕ್ಷಿಸದೇ ಜೀವನದ ಸೌಂದರ್ಯವನ್ನು ಹೀರಬೇಕಾಗಿದೆ. ಎಲ್ಲ ಜಗದ ಸೌಂದರ್ಯವನ್ನು ಪ್ರೀತಿಸುತ್ತೇವೆಯೋ, ಆನಂದಿಸುತ್ತೇವೆಯೋ ಅಲ್ಲಿ ಮಾತ್ರ ಜೀವನ ಸತ್ಯ ಅಡಗಿದೆ. ಬಯಸುವುದು ತಪ್ಪಲ್ಲ, ಆದರೆ ಅದರ ಮೇಲೆ ಜವಾರಿ ಮಾಡುವುದು ಬದುಕಿನ ದುರಂತ. ಯಾವುದಕ್ಕೂ ಅಂಟಿಕೊಳ್ಳದೇ, ವ್ಯಗ್ರವಾಗದೇ ಇರುವುದು ನಿಜ ಜೀವದಾನಂದ. ಅದರ ಇತಿ ಮಿತಿಗಳನ್ನು ಅರಿತು ಜೀವನವನ್ನು ರೂಪಿಸಿಕೊಳ್ಳೋಣವೆಂದು ಕವಿ ದಿವ್ಯ ಸಂದೇಶವನ್ನೇ ನೀಡುತ್ತಾರೆ.

# ಸಾವಿರಾರು ನದಿಗಳು

ಡಾ.ಸಿದ್ದಲಿಂಗಯ್ಯ

ನೆನ್ನೆ ದಿನ
ನನ್ನ ಜನ
ಬೆಟ್ಟದಂತೆ ಬಂದರು.

ಕಪ್ಪುಮುಖ ಬೆಳ್ಳಿಗಡ್ಡ ಉರಿಯುತಿರುವ ಕಣ್ಣುಗಳು
ಹಗಲು ರಾತ್ರಿಗಳನು ಸೀಳಿ ನಿದ್ದೆಯನ್ನು ಒದ್ದರು
ಕಂಬಳಿಗಳು ಕೊರಗಿದವು ಎದ್ದೇಳುವ ರೊಚ್ಚಿಗೆ
ಭೂಕಂಪನವಾಯಿತು ಅವರು ಕುಣಿದ ಹುಚ್ಚಿಗೆ
ಇರುವೆಯಂತೆ ಹರಿವಸಾಲು ಹುಲಿಸಿಂಹದ ದನಿಗಳು
ಧಿಕ್ಕಾರ ಧಿಕ್ಕಾರ ಅಸಮಾನತೆಗೆ
ಎಂದೆಂದಿಗು ಧಿಕ್ಕಾರ ಶ್ರೀಮಂತರ ಸೊಕ್ಕಿಗೆ
ಲಕ್ಷಾಂತರ ನಾಗರುಗಳು ಹುತ್ತಬಿಟ್ಟು ಬಂದಂತೆ
ಊರತುಂಬ ಹರಿದರು
ಪಾತಾಳಕೆ ಇಳಿದರು
ಆಕಾಶಕೆ ನೆಗೆದರು.

ಬೀದಿಯಲ್ಲಿ ಗಲ್ಲಿಯಲ್ಲಿ
ಬೇಲಿಮಳೆಯ ಮರೆಗಳಲ್ಲಿ
ಯಜಮಾನರ ಹಟ್ಟಿಯಲ್ಲಿ ಧಣಿಕೂರುವ ಪಟ್ಟದಲ್ಲಿ
ಎಲ್ಲೆಲ್ಲೂ ನನ್ನ ಜನ ನೀರಿನಂತೆ ನಿಂತರು.
ಇವರು ಬಾಯಿ ಬಿಟ್ಟೊಡನೆ
ಅವರ ಬಾಯಿ ಕಟ್ಟಿತು
ಇವರ ಕಂಠ ಕೇಳಿದೊಡನೆ
ಅವರ ಧ್ವನಿ ಇಂಗಿತು
ಕ್ರಾಂತಿಯ ಬಿರುಗಾಳಿಯಲ್ಲಿ ಕೈಬೀಸಿದ ನನ್ನ ಜನ
ಛಡಿಯ ಏಟು ಹೊಡೆದವರ
ಕುತ್ತಿಗೆಗಳ ಹಿಡಿದರು.

ಪೋಲಿಸರ ದೊಣ್ಣೆಗಳು ಏಜೆಂಟರ ಕತ್ತಿಗಳು

ವೇದಶಾಸ್ತ್ರ ಪುರಾಣ ಬಂದೂಕದ ಗುಡಾಣ
ತರಗೆಲೆಸಕಡ್ಡಿಯಾಗಿ
ತೇಲಿತೇಲಿ ಹರಿದವು
ಹೋರಾಟದ ಸಾಗರಕ್ಕೆ
ಸಾವಿರಾರು ನದಿಗಳು.

ಸಾವಿರಾರು ನದಿಗಳು:

ಡಾ.ಸಿದ್ದಲಿಂಗಯ್ಯನವರು ಕನ್ನಡ ದಲಿತ–ಬಂಡಾಯದ ಸಾಹಿತ್ಯ ಶ್ರೇಷ್ಠ ಕವಿಗಳಲ್ಲಿ ಒಬ್ಬರು. ಬೆಂಗಳೂರು ಗ್ರಾಮಂತರ ಜಿಲ್ಲೆ ಮಾಗಲಿ ತಾಲೂಕಿನಲ್ಲಿ ಜನಿಸಿದರು. ವಿದ್ಯಾರ್ಥಿ ದೆಸೆಯಲ್ಲಿ ಕನ್ನಡ ಕವನಗಳನ್ನು ರಚಿಸಲು ಪ್ರಾರಂಭಿಸಿದ ಇವರು ಮುಂದೆ ಶ್ರೇಷ್ಠ ಕವಿಗಳಾದದ್ದು ವಿಶೇಷ. ಹೊಲೆ ಮಾದಿಗರ ಹಾಡು, ಸಾವಿರಾರು ನದಿಗಳು, ಕಪ್ಪುಕಾಡಿನ ಹಾಡು ಅವರು ಪ್ರಮುಖ ಕವನ ಸಂಕಲನಗಳು, ಏಕಲವ್ಯ, ಪಂಚಮ ಅವರ ವಿಶೇಷ ನಾಟಕಗಳು. ಹಲವು ವಿಮರ್ಶಾ ಕೃತಿಗಳನ್ನು ರಚಿಸಿದ್ದಾರೆ. ಊರುಕೇರಿ ಅವರ ಆತ್ಮಕಥನ.

ಕವಿ ಡಾ.ಸಿದ್ದಲಿಂಗಯ್ಯನವರು ಪ್ರಸ್ತುತ ಪದ್ಯದಲ್ಲಿ ಒಂದು ವ್ಯವಸ್ಥೆಯ ವಿರುದ್ಧ ಆಕ್ರೋಶದ ನುಡಿಗಳನ್ನು ಹೊರಹೊಮ್ಮಿಸುತ್ತಿದ್ದಾರೆ. ಶತಶತಮಾನಗಳಿಂದ ಶೋಷಣೆಗೆ ಒಳಗಾದ ಜನರ ದನಿಯಾಗಿ ನಿಲ್ಲುವ ಪ್ರಯತ್ನ ಪ್ರಸ್ತುತ ಪದ್ಯದಲ್ಲಿ ನಡೆದಿದೆ. ಸಾಮಾಜಿಕ– ಧಾರ್ಮಿಕ–ಸಾಂಸ್ಕೃತಿಕ ಸ್ವಾತಂತ್ರ್ಯಗಳನ್ನು ಕಸಿದುಕೊಳ್ಳುವ ಮೂಲಕ ಶೋಷಣೆಯನ್ನು ಮಾಡಿದ ಮೇಲ್ವರ್ಗದ ಮೇಲೆ ಕವಿ ಹೆಜ್ಜೆ ಹೆಜ್ಜೆಗೂ ಆಕ್ರೋಶವನ್ನು ವ್ಯಕ್ತಪಡಿಸುವುದರ ಮೂಲಕ ಒಂದು ಎಚ್ಚರಿಕೆಯ ಸಂದೇಶವನ್ನು ರವಾನಿಸುತ್ತಿದ್ದಾರೆ.

ಒಂದು ಕಾಲದಲ್ಲಿ ದಲಿತರು ಮೇಲ್ವರ್ಗದವರ ದಬ್ಬಾಳಿಕೆ, ಯಜಮಾನಿಕೆ, ದರ್ಪಕ್ಕೆ ತಮ್ಮ ಸರ್ವಸ್ವವನ್ನೂ ಕಳೆದುಕೊಂಡಿದ್ದು ಅಷ್ಟೇ ಸತ್ಯ. ದಯೆ, ಕರುಣೆ, ಮಾನವೀಯತೆಯನ್ನೂ ಮರೆತು ಅವರ ಮೇಲೆ ದೌರ್ಜನ್ಯವನ್ನು ಎಸಗಿದ್ದು ಮಾತ್ರವಲ್ಲದೆ ಸಮಾಜದಿಂದಲೇ ಬಹಿಷ್ಕೃತರನ್ನಾಗಿ ಮಾಡಲಾಯಿತು. ಅವರಿಗೆ ಯಾವುದೇ ಸ್ವಾತಂತ್ರ್ಯವನ್ನು ನೀಡಿದೆ, ಊರ ಹೊರಗೆ ಬದುಕುವಂತೆ, ಕೆರೆ, ಭಾವಿಗಳನ್ನು, ದೇವಾಲಯಗಳನ್ನು ಮುಟ್ಟದಂತೆ ದಿಗ್ಬಂಧನಗಳನ್ನು ಹಾಕಿದ್ದು ಮಾನವ ಇತಿಹಾಸದಲ್ಲಿಯೇ ದುರಂತದ ಸಂಗತಿ. ಆದರೆ ಇಂದು ಕಾಲ ಬದಲಾಗಿದೆ. ಶತಮಾನಗಳಿಂದ ಅನುಭವಿಸಿದ ಜಾತಿಯ ಶೋಷಣೆಯ ವಿರುದ್ಧ ಹೋರಾಡುವ ಮನೋಭಾವವನ್ನು ನಾವು ಪಡೆದುಕೊಂಡಿದ್ದೇವೆ. ನಮ್ಮ ಸಾಂಘಿಕ ಶಕ್ತಿಯ ಮುಂದೆ ಯಾವ ವ್ಯವಸ್ಥೆಯು ನಿಲ್ಲಲಾರದೆಂಬ ಆಶಯವನ್ನು ಕವಿ ಸಿದ್ದಲಿಂಗಯ್ಯನವರು ವ್ಯಕ್ತಪಡಿಸುತ್ತಾರೆ.

ಇಲ್ಲಿಯವರೆಗೆ ನಾವು ಅಜ್ಞಾನದ ರೂಹದಲ್ಲಿ ನಮ್ಮತನಗಳನ್ನು ಮರೆತುಬಿಟ್ಟಿದ್ದೇವು. ಈಗ ಹಾಗಲ್ಲ ಬೌದ್ಧಿಕ ಪ್ರಜ್ಞೆ, ಸಾಮಾಜಿಕ ಸಮಾನತೆಯನ್ನು ಪಡೆಯುವ ಹಕ್ಕು ನಮಗಿದೆ. ಭೂಮಿಯಲ್ಲಿ ಅವರಿಗೆ ಎಷ್ಟು ಬದುಕುವ ಹಕ್ಕು ಇದೆಯೋ ಅಷ್ಟೇ ನಮ್ಮಲ್ಲಿಯೂ ಅಂತರ್ಗತವಾಗಿದೆ ಎನ್ನುವ ಕವಿ

ನೆನ್ನೆ ದಿನ
ನನ್ನ ಜನ

ಬೆಟ್ಟದಂತೆ ಬಂದರು.' ಎನ್ನುವದರೊಂದಿಗೆ ತನ್ನ ಜನ ಎಂದರೆ – ಶೋಷಿತರೆಲ್ಲರೂ ಇಂದು ಒಂದಾಗಿದ್ದಾರೆ. ಅವರು ಒಂದೆರಡಲ್ಲ ಬೆಟ್ಟದ ರೂಪವನ್ನು ಪಡೆದಿದ್ದಾರೆ. ಬೆಟ್ಟವನ್ನು ಎದುರಿಸುವ ಸಾಮರ್ಥ್ಯ ಯಾರಿಗೂ ಇಲ್ಲ. ಅವರ ಕಣ್ಣುಗಳು ಇಂದು ಜ್ವಾಲೆಯನ್ನು ಉಗುಳುತ್ತಿವೆ, ಗಾಢವಾದ ನಿದ್ರೆಯಿಂದ ಎಚ್ಚೆತ್ತು ಹಗಲು ರಾತ್ರಿಗಳನ್ನು ಒಂದಾಗಿಸುವ ಆಕ್ರೋಶ ಹೊರಹೊಮ್ಮಿದೆ. 'ಅವರು ಕುಣಿದ ಹುಚ್ಚಿಗೆ ಭೂಕಂಪನವಾಗಿದೆ' ಎನ್ನುವಲ್ಲಿ ಕವಿ ತನ್ನ ಜನರ ಆಕ್ರೋಶದ ಪರಿಣಾಮಗಳನ್ನು ಬಿಡಿಸಿಟ್ಟಿದ್ದಾರೆ. 'ಇರುವೆಯಂತೆ ಹರಿವ ಸಾಲು ಹುಲಿ ಸಿಂಹದ ದನಿಗಳು' ಎಂಬಲ್ಲಿ ತನ್ನ ಜನರ ಸಾಂಘಿಕತೆ ಮತ್ತು ಆರ್ಭಟ ಎರಡನ್ನು ಒಟ್ಟೊಟ್ಟಿಗೆ ಮನವರಿಕೆ ಮಾಡಿಕೊಡುತ್ತಿದ್ದಾರೆ.

ಮಾನವ ಮಾನವನನ್ನು ಪ್ರೀತಿಸುವ–ಗೌರವಿಸುವ ಮನೋಭಾವವನ್ನು ತೊರೆದು ಎಲ್ಲಿ ಆಳುವ ಸಂಸ್ಕೃತಿಯನ್ನು ಅನುಷ್ಠಾನಗೊಳಿಸುತ್ತಾನೋ ಅಲ್ಲಿ ಒಂದು ದಿನ ಪ್ರತಿಭಟನೆ ತಪ್ಪಿದ್ದಲ್ಲ. ಅಂತೆಯೆ ಕವಿ

'ಧಿಕ್ಕಾರ ಧಿಕ್ಕಾರ ಅಸಮಾನತೆಗೆ
ಎಂದೆಂದಿಗು ಧಿಕ್ಕಾರ ಶ್ರೀಮಂತರ ಸೊಕ್ಕಿಗೆ
ಲಕ್ಷಾಂತರ ನಾಗರುಗಳು ಹುತ್ತಬಿಟ್ಟು ಬಂದಂತೆ' ಎನ್ನುವ ಮೂಲಕ ಎಚ್ಚರಿಕೆಯನ್ನು ನೀಡುತ್ತಾರೆ.

'ಯಜಮಾನರ ಹಟ್ಟಿಯಲ್ಲಿ ಧಣಿಕೂರುವ ಪಟ್ಟದಲ್ಲಿ
ಎಲ್ಲೆಲ್ಲೂ ನನ್ನ ಜನ ನೀರಿನಂತೆ ನಿಂತರು.' ಎನ್ನುವಲ್ಲಿ ಕವಿ ನೀರಿನಂತೆ ಸಮಾನತೆ ಹೊಂದಲು ಹಾತೊರೆಯುತ್ತಾರೆ.

ಯಜಮಾನಿಕೆಯ ಸಂಸ್ಕೃತಿಯನ್ನು ತೊರೆದು ಸಹಬಾಳ್ವೆಯ ಬದುಕಿಗೆ ನಾಂದಿ ಹಾಡಿದರೆ ಮಾತ್ರ ಸಮಾಜಕಲ್ಯಾಣದ ಎಂಬ ಸಂದೇಶ ಒಂದೆಡೆಯಾದರೆ, ಶೋಷಣೆಗೆ ಶೋಷಣೆಯೇ ಅಸ್ತ್ರ, ಒಂದರ್ಥದಲ್ಲಿ ಮುಯ್ಯಿಗೆ ಮುಯ್ಯಿ ಎಂಬ ಧ್ವನಿ ಕಾವ್ಯದುದ್ದಕ್ಕೂ ಹೊರಹೊಮ್ಮುತ್ತದೆ. ವೇದ ಶಾಸ್ತ್ರ ಪುರಾಣ ಎಲ್ಲವನ್ನು ನಾವು ಅರ್ಥೈಸಿಕೊಳ್ಳದೇ ಸಮಾಜವನ್ನು ಒಡೆದು ಆಳುವ ನೀತಿಯನ್ನು ಕವಿ ಪ್ರತಿಭಟಿಸಿದರೆ, ಈಗ ನಾವು ಮೊದಲಿನಂತಲ್ಲ ನಮ್ಮ ಹೋರಾಟ ಸಾವಿರಾರು ನದಿಗಳ ಸಮಾನವಾಗಿ ಬೆಳೆದಿದೆ. ಅದನ್ನು ಎದುರಿಸುವ ಶಕ್ತಿ ಸಾಮರ್ಥ್ಯ ಯಾರಿಗೂ ಇಲ್ಲ. ಈಗಲಾದರೂ ನಮ್ಮನ್ನು ಮನುಷ್ಯರನ್ನಾಗಿ ನೋಡಿ. ನಮ್ಮನ್ನೂ ಸಮಾಜದ ಅಂಗವಾಗಿ ಸ್ವೀಕರಿಸಿ ನವಸಮಾಜವನ್ನು ಕಟ್ಟಲು ಜೊತೆಯಾಗಿ. ಸಮಾಜವು ಸಮಾನತೆಯ ನೆಲೆಯಲ್ಲಿ ಪುನರ್‌ನಿರ್ಮಾಣಗೊಳ್ಳುವ ಕಾಲ ಸನಿಹವಾಗಬೇಕಾಗಿದೆ ಎಂಬ ಸಂದೇಶವನ್ನು ಕವಿ ನೀಡುತ್ತಾರೆ.

# ನ್ಯಾಯಾಧೀಶ

ಮೂಲ: ರವೀಂದ್ರನಾಥ ಟ್ಯಾಗೋರ

ಅನು: ಅಹೋಬಲ ಶಂಕರ

ಮಧ್ಯಮ ವಯಸ್ಸಿನ ಕ್ಷೀರದಾ ಎಂಬ ಹೆಣ್ಣು ಮಗಳ ಧಾರುಣ ನೋವಿನ ಚಿತ್ರಣವೇ 'ನ್ಯಾಯಾಧೀಶ' ಕಥೆಯಾಗಿದೆ.

ಬಾಲ್ಯವಿವಾಹದ ಬೇಗುದಿಯಲ್ಲಿ ಹಲವಾರು ಏರುಪೇರನ್ನು ಎದುರಿಸಿದ ಕ್ಷೀರದಾ, ಜೀವನಕ್ಕೆ ಗಂಡನ ಆಶ್ರಯ ದೊರೆಯದೇ ತನ್ನ ಬದುಕನ್ನೇ ಕೊನೆಯಾಗಿಸಿಕೊಳ್ಳುವ ಸ್ಥಿತಿಗೆ ಬರುತ್ತಾಳೆ. ಮುಂದೆ ಬಂದ ಯಾವ ಪುರುಷನು ಅವಳೊಂದಿಗೆ ಜೀವನವನನ್ನು ನಡೆಸಲಾರದೆ ಅವಳ ಎಲ್ಲ ಒಡುವೆ, ಹಣವನ್ನು ದೋಚಿ ಬಳಸಿದ ಕಾಗದವನ್ನು ಎಸೆಯುವಂತೆ ಎಸೆಯುತ್ತಾರೆ. ಇದ್ದ ಒಂದು ಪುಟ್ಟ ಮಗುವಿಗೂ ಹಾಲು ಉಣಿಸಲು ಅವಳಿಗೆ ಸಾಧ್ಯವಾಗುವುದಿಲ್ಲ. ಮಗುವಿನ ಹಸಿವಿನ ಆಕ್ರಂದನವನ್ನು ನೋಡಲಾಗುವುದಿಲ್ಲ. ಈ ಸಮಾಜದಲ್ಲಿ ಹೆಣ್ಣನ್ನು ಎಲ್ಲರೂ ಒಂದಿಲ್ಲಾ ಒಂದು ವಿಧದಲ್ಲಿ ಬಳಸಿಕೊಳ್ಳುವರೇ ಎಂದು ರೋಷಿ ಹೋಗುತ್ತಾಳೆ ಕ್ಷಿರದಾ. ಕೊನೆಗೆ ಮಗುವಿನೊಂದಿಗೆ ಬಾವಿಯಲ್ಲಿ ಹಾರಿ ಆತ್ಮಹತ್ಯೆಗೆ ಪ್ರಯತ್ನಿಸುತ್ತಾಳೆ. ಆದರೆ ಅಕ್ಕಪಕ್ಕ ಜನರು ಶಬ್ದವನ್ನು ಕೇಳಿ ಓಡಿಬಂದು ಕ್ಷೀರದಾಳ ಪ್ರಾಣವನ್ನು ಉಳಿಸುತ್ತಾರೆ. ಆದರೆ ಅಷ್ಟರಲ್ಲಾಗಲೇ ಮಗುವಿನ ಪ್ರಾಣಪಕ್ಷಿ ಹಾರಿಹೋಗಿರುತ್ತದೆ. ಮಗುವಿನ ಸಾವಿನ ಆಪಾದನೆಯ ಮೇಲೆ ಕ್ಷೀರದಾಳನ್ನು ಮ್ಯಾಜಿಸ್ಟ್ರೇಟರ ಮುಂದೆ ಹಾಜರು ಪಡಿಸಲಾಗುತ್ತದೆ.

ಸೆಷನ್ ಜಡ್ಜ್ ಮೋಹಿತ ಮೋಹನನು ಐಸಿಎಸ್ ಹುದ್ದೆಯವನು. ವಿಚಾರಣೆಯಾಗಿ ಆತನ ಕಠಿಣ ತೀರ್ಮಾಣ ಫಲವಾಗಿ ಕ್ಷೀರದಾಳಿಗೆ ಫಾಸೀ ಶಿಕ್ಷೆ ವಿಧಿಸಲ್ಪಡುತ್ತದೆ. ಆ ಬಡಪಾಯಿ ಹೆಂಗಸನ್ನು ಉಳಿಸಲು ಕೆಲವರು ವಕೀಲರು ಬೇಕಾದಷ್ಟು ಪ್ರಯತ್ನ ಮಾಡುತ್ತಾರೆ, ಎಲ್ಲಾ ವ್ಯರ್ಥವಾಯಿತು. ಜಡ್ಜ್ ಸಾಹೇಬರು 'ಅವಳು ಎಳ್ಳಷ್ಟೂ ದಯೆಗೆ ಪಾತ್ರಳಲ್ಲ'ವೆಂದು ಹಟ ತೊಡುತ್ತಾರೆ. ಅದಕ್ಕೆ ಕಾರಣ ಹೆಣ್ಣು ಜಾತಿಯ ಮೇಲೆಯೇ ಅವರಿಗೆ ಆಂತರಿಕ ಅವಿಶ್ವಾಸ ಹುಟ್ಟಿತ್ತು. ಅವರ ಅಭಿಪ್ರಾಯದಲ್ಲಿ ಹೆಂಗಸರು ಕುಲಭ್ರಷ್ಟರಾಗಿರುವುದೇ ಕಾರಣವಾಗಿತ್ತು. 'ಕಾನೂನನ್ನು ಸ್ವಲ್ಪ ಸಡಿಲ ಬಿಟ್ಟಿತೆಂದರೆ ಸಾಕು, ಸಮಾಜದ ಪಂಜರದಲ್ಲಿ ಕುಲನಾರಿಯೊಬ್ಬಳೂ ಉಳಿಯುವುದಿಲ್ಲ' ಎಂಬ ಭಾವನೆ ಅವರದಾಗಿತ್ತು. ಇಂತಹ ಕಠೋರವಾದ ಶಿಕ್ಷೆಯನ್ನು ನೀಡಿದರೆ ಮಾತ್ರ ಹೆಣ್ಣು ಅಪರಾಧದಿಂದ ಹೊರಗೆ ಬರಲು ಸಾಧ್ಯವೆಂಬ ಭಾವನೆ ಅವರದಾಗಿತ್ತು.

ಆದರೆ ಮೋಹಿತನ ಪೂರ್ವಾಪರ ಇತಿಹಾಸವನ್ನು ನೋಡಿದಾಗ ಆತನೇನೂ ಚಾರಿತ್ರ್ಯವಂತನಾಗಿರಲಿಲ್ಲ. ಕಾಲೇಜು ಕಲಿಯುವ ಸಂದರ್ಭದಲ್ಲಿ ಶೋಕಿಲಾಲನಾಗಿದ್ದ, ಹಲವು ವೆಸನಗಳ ದಾಸನಾಗಿದ್ದ. ಪುಟ್ಟ ವಿಧವೆಯಾಗಿದ್ದ ಕ್ಷೀರದಾ, ತನ್ನ ತಂದೆ ತಾಯಿ ತಮ್ಮಂದಿರೊಂದಿಗೆ ಜೀವನವನ್ನು ನಡೆಸುವಾಗ ಮೋಹಿತನ ಸೌಂದರ್ಯಕ್ಕೆ ಸೋತು, ಅವನನ್ನೆನೋ ಮನದಲ್ಲಿ ಬಯಸಿರುತ್ತಾಳೆ. ಒಂದು ದಿನ ಮೋಹಿತನನ್ನು ಸಂಧಿಸಿದಾಗ ಬಲವಂತವಾಗಿ ಆತನಿಂದ ಬಿಡಿಸಿಕೊಳ್ಳಲಾರದೆ ವ್ಯಥೆಪಡುತ್ತಾಳೆ. ಆ ಕ್ಷಣದಿಂದ ಮನೆಯವರಿಂದ ದೂರಸರಿಯಬೇಕಾದ ಸ್ಥಿತಿಗೆ ಒಳಗಾಗುತ್ತಾಳೆ.

ಮುಂದಿನದೆಲ್ಲವೂ ಅವಳ ಬದುಕಿನಲ್ಲಿ ದುಃಖ, ಶೋಷಣೆ ಬಿಟ್ಟರೆ ಏನೂ ಇರುವುದಿಲ್ಲ. ಅವಳ ಬದುಕು ಸೂತ್ರ ಹರಿದ ಗಾಳಿಪಟದಂತೆ ಆಗುತ್ತದೆ. ವಿಧಿ ಬಹಳ ಕ್ರೂರವಾಗಿ ಅವಳೊಂದಿಗೆ ಆಟವನ್ನು ಆಡುತ್ತದೆ. ಬದುಕಿನಿಂದ ದೂರ ಸರಿಯಲು ಕ್ಷೀರದಾ ಹೋರಾಡುವಂತಾಗುತ್ತದೆ. ಅವಳಿಗೆ ಕೊನೆಗೆ ಹೊಳೆದದ್ದು ಒಂದೇ ಅದು ಆತ್ಮಹತ್ಯೆ. ಅದೊಂದೇ ಪರಿಹಾರವೆಂಬ ಮಾರ್ಗ.

ಅಬಲೆ ಹಾಗೂ ಅನಾಥ ಸ್ಥಿತಿಯಲ್ಲಿದ್ದ ಕ್ಷೀರದಾ ನಾಳಿನ ಇನ್ನೂ ಭೀಕರ ದಿನಗಳನ್ನು ಅರಿತು ಭಾವಿ ಹಾರುತ್ತಾಳೆ. ಸೆಷನ್ ಜಡ್ಜ್ ಆಗಿದ್ದ ಮೋಹಿತನ ದೃಷ್ಟಿಯಲ್ಲಿ ಕ್ರೂರ ಹಾಗೂ ಕುಲಹೀನ ಮಹಿಳೆಯಾಗಿ ಕಾಣುತ್ತಾಳೆ. ಘೋರವಾದ ಶಿಕ್ಷೆಗೆ ಒಳಗಾಗಬೇಕಾಗುತ್ತದೆ. ಇದು ಮೋಹಿತನಿಗೂ ಗೊತ್ತಿಲ್ಲ, ಕ್ಷೀರದಾ ಒಂದು ಕಾಲದಲ್ಲಿ ನನ್ನ ಬಲವಂತಕ್ಕೆ ಬಲಿಯಾದವಳು ಎಂದು.

ಇಂತಹ ಮೋಹಿತ ಒಂದು ದಿನ ಜೈಲಿಗೆ ತೆರಳಿ ನಾನು ಶಿಕ್ಷೆ ನೀಡಿದ ಅಪರಾಧಿ ಮನಸು ಬದಲಾಗಿದೆಯೇ, ಪಾಪದ ಪ್ರಾಯಃಶ್ಚಿತ್‌ವಾಗಿದೆಯೇ ಎಂದು ಪರೀಕ್ಷಿಸಲು ಹೋದಾಗ, ಅಲ್ಲಿ ದೊಡ್ಡ ಜಗಳವೇ ನಡೆದಿರುತ್ತದೆ. ಕಾವಲುಗಾರನೊಂದಿಗೆ ಕ್ಷೀರದಾ ಉಗ್ರವಾಗಿ ಪ್ರತಿಭಟಿಸುತ್ತಿರುತ್ತಾಳೆ. ಅದನ್ನು ನೋಡಿ ಜಡ್ಜ್ ಮೋಹಿತ್ ಮನಸ್ಸಿನಲ್ಲಿ 'ಏನಪ್ಪಾ ಹೆಂಗಸರು ಸಾವು ಸನ್ನಿಹಿತವಾಗಿರುವಾಗಲೂ ಜಗಳವಾಡುವುದನ್ನು ಬಿಡರು. ಇವರು ಬಹುಶಃ ಯಮನೂರಿಗೆ ಹೋದರೂ ಯಮದೂತರೊಂದಿಗೆ ಜಗಳವಾಡದೆ ಬಿಡರು' ಎಂದು ವ್ಯಂಗ್ಯವಾಗಿ ವಿವೇಚಿಸುತ್ತಾನೆ. ಈ ಕುರಿತು ವಿಚಾರಿಸಿದಾಗ ಕ್ಷೀರದಾ ಹೇಳುತ್ತಾಳೆ, 'ದೇವರು, ತಮ್ಮ ಪಾದಕ್ಕೆ ಬಿದ್ದೆನು, ಈ ಮನುಷ್ಯನಿಗೆ ಹೇಳಿ, ತನ್ನ ಉಂಗುರ ವಾಪಸ ಕೊಡು ಎಂತ ಹೇಳಿ' ಎಂದು ಕೇಳಿಕೊಳ್ಳುತ್ತಾಳೆ. ಕಾವಲುಗಾರದಿಂದ ಮೋಹಿತ ಉಂಗುರವನ್ನು ಪಡೆದುಕೊಂಡು ನೋಡಿದಾಗಲೇ ತಿಳಿಯುತ್ತದೆ. ಇಪ್ಪತ್ತನಾಲ್ಕು ವರ್ಷಗಳ ಹಿಂದೆ ನಾನು ನೀಡಿದ ಉಂಗುರವೆಂದು. ಉಂಗುರದ ಮೇಲೆ ತನ್ನ ಇನ್ನೊಂದು ಹೆಸರು 'ವಿನೋದಚಂದ್ರ' ಎಂಬ ಹೆಸರು. ಆ ಉಂಗುರವನ್ನು ನೀಡಿದ್ದು ಇದೇ ಕ್ಷೀರದಾಗೆ ಎಂಬ ಸತ್ಯವು ಅರಿವಿಗೆ ಬರುತ್ತದೆ. ನ್ಯಾಯಾಧೀಶನ ಆತ್ಮಸಾಕ್ಷಿಯೇ ಅಪರಾಧಿ ಸ್ಥಾನದಲ್ಲಿ ನಿಲ್ಲುತ್ತದೆ. ತನ್ನೊಳಗೆ ಪಶ್ಚಾತಾಪ ಪಟ್ಟುಕೊಳ್ಳುತ್ತಾನೆ. ಆದರೆ ಕಾಲ ಮಿಂಚಿ ಹೋಗಿರುತ್ತದೆ.

ಕವಿ, ಕಥೆಗಾರ ರವೀಂದ್ರನಾಥ ಟ್ಯಾಗೋರ ಅವರು ಈ ಪ್ರಸಂಗದ ಮೂಲಕ ಜಗತ್ತಿನ ಮಹಿಳೆಯರ ಆರ್ತನಾದವನ್ನು ತಿಳಿಸುತ್ತಾರೆ. ಮಹಿಳೆಯ ಮೇಲಿನ ದೌರ್ಜನ್ಯಕ್ಕೆ ಸಮಾಜವೇ ಕಾರಣ. ನಮ್ಮ ಗೊಡ್ಡು ಸಂಪ್ರದಾಯಗಳ ಫಲವಾಗಿಯೇ ಕ್ಷೀರದಾ ಅಂತಹ ಲಕ್ಷಾಂತರ ಮಹಿಳೆಯರು ಬಾಲ್ಯವಿವಾಹದ ನರಕದಲ್ಲಿ ಜೀವನವನ್ನೇ ಬಲಿಕೊಟ್ಟಿದ್ದಾರೆ. ಪುರುಷಪ್ರಧಾನ ಸಮಾಜದ ಕ್ರೌರ್ಯಕ್ಕೆ ಅದೇಷ್ಟೋ ಮಹಿಳೆಯರು ಬಲಿಯಾಗಿದ್ದಾರೆ ಎಂಬ ಜಿಜ್ಞಾಸೆ ಕಥೆಯಲ್ಲಿ ಮೂಡಿನಿಲ್ಲುತ್ತದೆ.

ಯಾರೂ ಸಾತ್ವಿಕರಲ್ಲ. ನ್ಯಾಯಾಧೀಶನಾಗಬೇಕಾದರೆ ಚಾರಿತ್ರ್ಯವೂ ಮುಖ್ಯ. ಚಾರಿತ್ರ್ಯ ಹೀನನಾದವನು ಯಾವ ನ್ಯಾಯವನ್ನು ನೀಡಲು ಸಾಧ್ಯ. ತಮ್ಮ ಮನಸ್ಸಿನ ಆತ್ಮಸಾಕ್ಷಿಯಾಗಿ 'ನಾನು ಪವಿತ್ರನು, ಅಂತರಂಗ ಬಹಿರಂಗದಲ್ಲಿ ಶುದ್ಧನು' ಎಂಬ ಸತ್ಯದ ಅರಿವು ಇದ್ದವನು ಮಾತ್ರ ನ್ಯಾಯ ನೀಡಲು ಸಾಧ್ಯ. ತನ್ನದೊಂದೇ ದೃಷ್ಟಿಯಲ್ಲಿ ಲೋಕದ ಮಹಿಳೆಯರನ್ನು ನೋಡುವ ಭಾವ ಎಷ್ಟರ ಮಟ್ಟಿಗೆ ಒಳಿತು. ನ್ಯಾಯ ಪುರುಷ-ಮಹಿಳೆ ಎಂಬ ಪಕ್ಷಪಾತವಾಗಿರಬಾರದು, ಅದು ಸಮಾನತೆಯ ರೂಪವಾಗಿರಬೇಕು. ಸತ್ಯವು ಮಾತ್ರ ನ್ಯಾಯದ ನಿಜ ತಕ್ಕಡಿ. ಅದರಲ್ಲಿ ಒಂದು ಗುಂಜಿ ಕಡಿಮೆಯೂ ಅಲ್ಲ, ಹೆಚ್ಚೂ ಅಲ್ಲ ಎಂಬ ಸಂದೇಶ ಕಥೆ ಒಂದೆಡೆ ನೀಡಿದರೆ, ಹೆಣ್ಣನ್ನು ನೋಡುವ ದೃಷ್ಟಿಕೋನವನ್ನು ಸಮಾಜದ ಪ್ರತಿಯೊಬ್ಬನೂ ಬದಲಾಯಿಸಿಕೊಳ್ಳಬೇಕು. ನಾವು ಇರುವ ಹುದ್ದೆಗೆ ನ್ಯಾಯ ಒದಗಿಸಬೇಕೆಂಬ ಆಶಾವಾದವನ್ನು ಪ್ರಸ್ತುತ ಗದ್ಯ ಅತ್ಯಂತ ಮಾರ್ಮಿಕವಾಗಿ ನಿರೂಪಿಸುತ್ತದೆ.

# 14. ಎರಡು ನೆನಪುಗಳು

ನವರತ್ನ ರಾಮರಾವ್

ಪ್ರಸ್ತುತ ಗದ್ಯದಲ್ಲಿ ನವರತ್ನ ರಾಮರಾವ್ ಅವರು ಎರಡು ಪ್ರಸಂಗಗಳನ್ನು ನೆನಪಿಸಿಕೊಳ್ಳುತ್ತಾರೆ. ಎರಡೂ ನೆನಪುಗಳು ಕೌಟುಂಬಿಕ ಜೀವನಕ್ಕೆ ಸಂಬಂಧಿಸಿದವು. ಸ್ವಾತಂತ್ರ್ಯಪೂರ್ವದಲ್ಲಿ ಅಮಲ್ದಾರರು ಗ್ರಾಮಗಳಲ್ಲಿಯ ವ್ಯಾಜ್ಯಗಳನ್ನು, ಕೌಟುಂಬಿಕ ಕಲಹಗಳನ್ನು ಬಗೆಹರಿಸುವ ಪ್ರಸಂಗಗಳನ್ನು ಸಾರವತ್ತಾಗಿ ಹೇಳಿದ್ದಾರೆ.

ಇಂದು ಕೌಟುಂಬಿಕ ಜೀವನದಲ್ಲಿ ಕಲಹಗಳು, ಮನಸ್ತಾಪಗಳು ತಾರಕಕ್ಕೆ ಏರಿವೆ. ದಾಂಪತ್ಯದ ಒಂದು ಸಣ್ಣ ಜಗಳ ಕೂಡ ಕೋರ್ಟ್‌ನ ಮೆಟ್ಟಿಲೇರಿ, ಸುಖಾಂತ್ಯಗೊಳ್ಳದೇ ಇರುವುದನ್ನು ಕಾಣುತ್ತೇವೆ. ಆದರೆ ಒಂದು ಕಾಲದಲ್ಲಿ ಗ್ರಾಮದ ಕಂದಾಯವನ್ನು ನೋಡಿಕೊಳ್ಳುತ್ತಿದ್ದ ಅಮಲ್ದಾರರು, ತಮ್ಮ ವಿಶೇಷ ಅಧಿಕಾರದಿಂದ ನ್ಯಾಯಾಧೀಶರಾಗಿ(ಮೆಜೆಸ್ಟ್ರೇಟ್) ಕರ್ತವ್ಯವನ್ನು ನಿರ್ವಹಿಸುತ್ತಿದ್ದರು, ಸಮಸ್ಯೆಗೆ ಸಮಧಾನವನ್ನು ಹುಡುಕುತ್ತಿದ್ದರು. ಇಲ್ಲಿ ಎರಡು ಕೌಟುಂಬಿಕ ಪ್ರಸಂಗಗಳು ಇಂತಹವೇ ಆಗಿರುವುದು ವಿಶೇಷ.

ಮೊದಲ ಪ್ರಸಂಗದಲ್ಲಿ ಮೇಲೂರ ಎಂಬ ಗ್ರಾಮದ ಅನುಕೂಲಸ್ಥ ರೈತನೊಬ್ಬ ತನ್ನ ಮಗಳನ್ನು ಒಬ್ಬ ಬಡ ರೈತನಿಗೆ ಕೊಟ್ಟು ಮದುವೆ ಮಾಡಿರುತ್ತಾನೆ, ಆದರೆ ಒಂದು ದಿನ ಮಗಳ ಮೇಲೆ ಅಳಿಯ ದನದ ಹಾಗೆ ಹೊಡೆದು ಬಾಸುಂಡೆ ಬರುವಂತೆ ಮಾಡಿದ. ಮಗಳು ತಂದೆ ಮನೆಗೆ ಬಂದು ನಡೆದ ಘಟನೆಯನ್ನು ತಿಳಿಸುತ್ತಾಳೆ. ತಂದೆ ಆ ಕ್ಷಣದಲ್ಲಿ ಅಮಲ್ದಾರರಿಗೆ ಫಿರ್ಯಾದು(ಕಂಪ್ಲೇಟ್) ನೀಡುತ್ತಾನೆ. ಅಮಲ್ದಾರರು ಅವಳ ಗಂಡನನ್ನು ಕರೆದು ವಿಚಾರಣೆಗೆ ಒಳಪಡಿಸುತ್ತಾರೆ. 'ನೀನು ಮನುಷ್ಯನೋ ದನವೋ, ನಿನ್ನ ನಂಬಿ ಕೈಹಿಡಿದು ಬಂದ ಹೆಣ್ಣು ಮಗಳನ್ನು ಹೀಗೆ ಹೊಡೆಯೋದೆ? ನೀನು ಅಕ್ಕ ತಂಗಿಯರ ನಡುವೆ ಹುಟ್ಟಿದವನಲ್ಲವೇನೊ?' ಎಂದು ಗದರಿಸುತ್ತಾರೆ. ಆಗ ಆ ರೈತ ಹೇಳುತ್ತಾನೆ– 'ಬುದ್ಧಿ, ನನಗೆ ಏನು ಶಿಕ್ಷೆ ಮಾಡ್ತೀರೋ ಮಾಡಿ, ಕೋಪದಿಂದ ಹೊಡೆದು ಬಿಟ್ಟೆ. ಏಕೆ ಬಿಸಿ ಮುದ್ದೆ ಮಾಡಿಲ್ಲ, ಯಾಕೆ ನೀರು ತಂದಿಲ್ಲ ಅಂದೆ. ಈ ಮಾತಿಗೆ ಅವಳು ನಾ ನೀನಿಟ್ಟ ಆಳಾ? ನೀ ದೊರೆ ಮಗನಾ– ಎಂದು ಪ್ರತ್ಯುತ್ತರ ನೀಡಿ ಅಪಮಾನಿಸಿದಳು' ' ಅವಳನ್ನು ಹೊಡೆಬೇಕು ಎಂದು ಹೊಡಿಲಿಲ್ಲ, ಬಿಸಿಲಲ್ಲಿ ದುಡಿದು, ಬೆಂಡಾಗಿ ನೀರು ಕಂಡೇನೆ ಎಂದು ಬಂದರೆ ಅವಳಿಂದ ಒಂದು ಒಳ್ಳೇ ಮಾತು ಇಲ್ಲ' ಎಂದು ದುಃಖಿತನಾಗುತ್ತಾನೆ.

ಎರಡು ಕಡೆ ವಾದ ಪ್ರತಿವಾದವನ್ನು ಕೇಳಿದ ಅಮಲ್ದಾರರು 'ಸರಿ, ಕೈಹಿಡಿದ ಹೆಂಡತಿಯನ್ನು ದನವನ್ನು ಹೊಡೆದ ಹಾಗೆ ಹೊಡೆಯೋದು ತಪ್ಪು ನಿನಗೆ ಸಜ ಹಾಕುತ್ತೇನೆ' ಎಂದು ಲಾಕಪ್ಪಿಗೆ ಕಳಿಸಲು ಮುಂದಾಗುತ್ತಾರೆ. ಈ ಶಬ್ದವನ್ನು ಕೇಳಿದ್ದೇ ತಡ ರೈತನ ಹೆಂಡತಿ ತಬ್ಬಿಬ್ಬಾಗುತ್ತಾಳೆ. 'ಅಯ್ಯೋ, ಬೇಡ ಬುದ್ದಿ ನನ್ನ ಬಾಳು ಮುರೀಬೇಡಿ, ನನ್ನದು ತಪ್ಪಿದೆ' ಎಂದು ಗೋಗರೆಯುತ್ತಾಳೆ. ಇದನ್ನು ಆಳಿಸಿದ ಅಮಲ್ದಾರರು ಸರಿ, ಇನ್ನು ಮುಂದೆ ನಿನ್ನ ಹೆಂಡತಿಯನ್ನು ಸರಿಯಾಗಿ ನೋಡಿಕೊಳ್ಳುತ್ತೇನೆಂದು ಮುಚ್ಚಳಿಕೆ ಬರೆಸಿಕೊಡು ಎಂದು ನ್ಯಾಯವನ್ನು ಬಗೆ ಹರಿಸುತ್ತಾರೆ. ಅವಳಿಗೆ ಗಂಡನನ್ನು ನೋಡಿಕೊಳ್ಳಬೇಕಾದ ಜವಾಬ್ದಾರಿಯನ್ನು ನೆನಪಿಸಿಕೊಟ್ಟು, ಬುದ್ಧಿಮಾತು

ಹೇಳುತ್ತಾರೆ. ಇದಾಗಿ ಒಂದು ವರ್ಷದ ನಂತರ ದಂಪತಿಗಳು ತಮ್ಮ ವರ್ಷದ ಮಗುವಿನೊಂದಿಗೆ ಅದೇ ಅಮಲ್ದಾರರನ್ನು ಭೇಟಿಯಾಗಿ ತಮ್ಮ ಸುಖ ದಾಂಪತ್ಯವನ್ನು ರುಜುವಾತು ಮಾಡುತ್ತಾರೆ.

ಇನ್ನೊಂದು ಪ್ರಸಂಗದಲ್ಲಿ : ಅಮಲ್ದಾರರು ಕುದುರೆ ಏರಿ ಹೋಗುತ್ತಿದ್ದಾಗ ಒಬ್ಬ ಯುವಕ ಬಂದು ನನ್ನ ಮನೆ ಉಳಿಸಿ ಎಂದು ಅಂಗಲಾಚುತ್ತಾನೆ. ಅವನ ಕಷ್ಟವೇನೆಂದು ವಿಚಾರಿಸಿದಾಗ 'ಬುದ್ಧಿ ನನ್ನ ಮನೆ ಮುರಿಯಿತು, ಸಾಲಾ ಮಾಡಿ ಮದುವೆ ಮಾಡಿಕೊಂಡೆ, ಹೆಂಡತಿ ವಸ್ತು ಒಡುವೆ ಎಲ್ಲವನೂ ತೆಗೆದುಕೊಂಡು ಓಡಿಹೋಗಿದ್ದಾಳೆ. ನೀವು ಬದುಕಿಸಿದರೆ ಉಂಟು ಇಲ್ಲವಾದರೆ ನೀರಿಗೆ ಬಿದ್ದು ಸಾಯುತ್ತೇನೆ' ಎಂದು ಬಿಕ್ಕಿ ಬಿಕ್ಕಿ ಅಳುತ್ತಾನೆ.

ಆಗ ಅಮಲ್ದಾರರು ಪೋಲಿಸ್‌ನಲ್ಲಿ ಫಿರ್ಯಾದು ಕೊಡಲು ಹೇಳಿದಾಗ ಯುವಕ ಹೇಳುತ್ತಾನೆ, 'ಬುದ್ಧಿ ಅವರನ್ನು ನಾನೇ ಪತ್ತೆ ಮಾಡಿದ್ದೇನೆ. ಅವರು ಊರು ಈಚೆ ಹೊಳೆಕೆರೆಯಲ್ಲಿನ ಗೋಸಾಯಿ ಮಂಟಪದಲ್ಲಿದ್ದಾರೆ. ಅವರನ್ನು ತೋರಿಸಿಕೊಡುವೆ. ಹಿಡತರಿಸಿ ನನ್ನ ಸಂಸಾರ ಉಳಿಸಬೇಕೆಂದು' ಹೇಳುತ್ತಾನೆ. ಅದರಂತೆ ಪೋಲಿಸ್‌ರ ಸಹಾಯದಿಂದ ಇಬ್ಬರನ್ನು ಹಿಡಿಸಿ ವಿಚಾರಣೆಗೆ ತರುತ್ತಾರೆ. ಇಪ್ಪತ್ತರ ಪ್ರಾಯದ ಅಂದವಾದ ಮೈ ಕಟ್ಟಿನ ತರುಣಿ. ದುಷ್ಟ ಸ್ವಭಾವದವಳು ಇಲ್ಲದಿದ್ದರು, ಮುಖದ ಮೇಲೆ ನಿರಾಶಾವಾದ ಕವಿದಿರುತ್ತದೆ. ಅವಳನ್ನು ಪುಸಲಾಯಿಸಿ ಕರೆದುಕೊಂಡು ಹೋದ ಮರಿಶೆಟ್ಟಿ ಸುಮಾರು 45ರ ಪ್ರಾಯದವನು.

ವಿಚಾರಣೆ ಪ್ರಾರಂಭವಾಗುತ್ತದೆ. ಆ ತರುಣಿ ಹೇಳುತ್ತಾಳೆ 'ಅಯ್ಯೋ ಏನು ಗಂಡ ಹೇಳಲಿ! ಎರಡು ಹೊತ್ತು ಕಂಡವರ ಮನೆ ಜೀತಕ್ಕೆ ದುಡಿಯೋನು. ಮಾತಿಲ್ಲ, ಕತೆ ಇಲ್ಲ– ಮನೆಯಲ್ಲಿ ಏನು ಸುಖವಿಲ್ಲ' ಎಂದು ಅಲವತ್ತು ಕೊಳ್ಳುತ್ತಾಳೆ. ಆಗ ಅಮಲ್ದಾರರು 'ಅಳಬೇಡ ಮಗು; ಹೋಗಲಿ ಚಿನ್ನ, ಬೆಳ್ಳಿ, ಬಟ್ಟೆಯೆಲ್ಲ ಸುಳ್ಳು. ಕೈಹಿಡಿದ ಗಂಡ ಬಡವ ಅಂತ ಮನೆ ಮುರಿದು ಓಡಿ ಹೋಗುವುದು ಸರಿಯಲ್ಲ' ಅವನು ನಿನಗೆ ಲಾಯಕ್ಕಾದ ಗಂಡನಲ್ಲ ಅಂತೀಯಲ್ಲ, ಈ ಮುದಿ ನಿನ್ನನ್ನು ಜೋಪಾನವಾಗಿ ನೋಡಿಕೊಳ್ಳುವನೇ' ಎಂದು ಬುದ್ಧಿವಾದ ಹೇಳುತ್ತಾರೆ. ಪರಶೆಟ್ಟಿಯನ್ನು ತರಾಟೆಗೆ ತೆಗೆದುಕೊಂಡಾಗ ಅವನು ತನ್ನ ತಪ್ಪನ್ನು ಒಪ್ಪಿಕೊಳ್ಳುತ್ತಾನೆ. ಪರಶೆಟ್ಟಿಗೆ ನೂರು ರೂ.ಗಳ ಜುಲ್ಮಾನೆ ಹಾಕುತ್ತಾರೆ. ಬಡ ಯುವ ರೈತನಿಗೆ ಅಮಲ್ದಾರರು ಐದು ಎಕರೆ ಭೂಮಿಯನ್ನು ಕೊಡಿಸಿಕೊಡುತ್ತಾರೆ. ಅವರ ಇಬ್ಬರ ಬದುಕಿನಲ್ಲಿ ಎದ್ದಿದ್ದ ಸಿರಿತನದ ಅಸಮಾನತೆಯನ್ನು ತೊಡೆದುಹಾಕುತ್ತಾರೆ.

ಅಮಲ್ದಾರರು ಈ ಎರಡು ಪ್ರಸಂಗದಲ್ಲಿ ಸುಖಜೀವನದ ಸತ್ಯವನ್ನೇ ಬಿಚ್ಚಿಟ್ಟಿದ್ದಾರೆ. ದಾಂಪತ್ಯ ಜೀವನವೆನ್ನುವುದು ಒಂದೆರಡು ದಿನಗಳಲ್ಲಿ ಕೊನೆಗೊಳ್ಳುವಂತಹದಲ್ಲ. ಅದು ಜೀವನದ ಕೊನೆಯ ಉಸಿರಿನವರೆಗೂ ಉಳಿಯುವಂತಹದು. 'ಸತಿ ಪತಿಗಳ ಒಂದಾದ ಭಕ್ತಿ ಶಿವನಿಗೂ ಪ್ರೀತಿ' ಎಂಬ ಉಕ್ತಿಯಂತೆ 'ರಸವೇ ಜನನ, ವಿರಸ ಮರಣ, ಸಮರಸವೇ ಜೀವನ' ಎಂಬ ಸತ್ಯವನ್ನೇ ಹೇಳುತ್ತಾರೆ. ದಾಂಪತ್ಯದಲ್ಲಿ ಕಷ್ಟಗಳು ಸಹಜ, ಅವುಗಳನ್ನು ಎದುರಿಸಿ ಒಬ್ಬರಿಗೊಬ್ಬರು ಅರ್ಥೈಸಿಕೊಂಡು ಜೀವನವನ್ನು ನಡೆಸಬೇಕೆ ಹೊರತು, ಸುಖವನ್ನಷ್ಟೇ ಹುಡುಕಿಕೊಂಡು ಹೋಗುವುದಲ್ಲ.

ಗಂಡು–ಹೆಣ್ಣಿನಲ್ಲಿ ದೌರ್ಬಲ್ಯಗಳು ಸಹಜ. ಅವುಗಳನ್ನು ಒಬ್ಬರಿಗೊಬ್ಬರು ತಾಳ್ಮೆಯಿಂದ ಪರಿಹರಿಸಿಕೊಳ್ಳಬೇಕು. ಇಲ್ಲದೆ ಹೋದರೆ ಸುಖ ಸಂಸಾರ ಕನಸಾಗಿ ಉಳಿಯುತ್ತದೆ.

'ಧರ್ಮೇಚ ಅರ್ಥೇಚ ಕಾಮೇಚ ಮೋಕ್ಷ ಚರಾಮಿ' ಎಂಬುದು ನಮ್ಮ ಪರಂಪರೆಯ ತಿರುಳು. ಇದು ಗಂಡಹೆಂಡಿರಲ್ಲಿ ಅನ್ಯೋನ್ಯ ಸಾಂಗತ್ಯದಿಂದ ಮಾತ್ರ ಯಶಸ್ಸುಗೊಳ್ಳುತ್ತದೆ. ಇಬ್ಬರಲ್ಲಿ ಒಬ್ಬರು ತಿಳುವಳಿಕೆಯಿಂದ ಇದ್ದರೂ ಜೀವನಕ್ಕೆ ಬಾಧೆ ಇಲ್ಲ. ಇಬ್ಬರು ವಿರಸಕ್ಕೆ ನಿಂತರೆ, ಸಂಸಾರದ ನೌಕೆ ಮುಳುಗುವುದರಲ್ಲಿ ಎರಡುಮಾತಿಲ್ಲ.

ಎರಡು ಮನಸ್ಸುಗಳನ್ನು ಕೂಡಿಸಿ, ತಿಳುವಳಿಕೆ ಹೇಳುವ ಅಮಲ್ದಾರಂತಹ ವ್ಯಕ್ತಿಗಳು ಇಂದು ಕಾಣಸಿಗುವುದಿಲ್ಲ. ಇಂದು ಲಕ್ಷಾಂತರ ದಾಂಪತ್ಯದ ಕೇಸ್‌ಗಳು ಕೌಟುಂಬಿಕ ನ್ಯಾಯಾಲಯದಲ್ಲಿ ಸುಖಾಂತ್ಯವನ್ನು ಕಾಣದೇ ವಿಘಟನೆಗೊಳ್ಳುತ್ತಿರುವುದನ್ನು ಕಾಣುತ್ತಿದ್ದೇವೆ. ಅವೆಲ್ಲವುಗಳಲ್ಲಿ ಸಾಮಾನ್ಯವಾಗಿ ಫಿರ್ಯಾದೆ ಬಂದಿರುವುದು ಸಣ್ಣಪುಟ್ಟ ಜಗಳಗಳೇ. ಒಂದು ಕಾಲದಲ್ಲಿ ಹಿರಿಯರು, ಗ್ರಾಮಸ್ಥರು ಸಾವಿರಾರು ಒಡೆಯುವ ದಂಪತಿಗಳ ಮನಸ್ಸುಗಳನ್ನು ಕೂಡಿಸಿ, ಬದುಕಿನ ಬಂಡೆಯನ್ನು ಮುನ್ನಡೆಸುತ್ತಿದ್ದರು. ಇಂದು ಹಾಗಿಲ್ಲ. ಕೋರ್ಟುಗಳು ಕೂಡ ಕೌಟುಂಬಿಕ ಸಮಸ್ಯೆಗಳನ್ನು ಪರಿಹರಿ, ದಂಪತಿಗಳನ್ನು ಕೂಡಿಸುವಲ್ಲಿ ವಿಫಲಗೊಂಡಿವೆ.

ಮೊದಲು ನಾವು ನಮ್ಮ ಸಂಗಾತಿಯ ಮನಸ್ಸನ್ನು ಅರಿಯಬೇಕು. ಒಂದು ಪ್ರೀತಿಯ ಮಾತು ನಡುವಿನ ಅಂತರವನ್ನು ಕಡಿಮೆಗೊಳಿಸುತ್ತದೆ. ಹಣ, ಅಂತಸ್ತು, ಶೋಕಿ ಬದುಕು ಶಾಶ್ವತವಾದುದಲ್ಲ. ಅದೆಲ್ಲಕ್ಕೂ ಮಿಗಿಲಾದ ಪ್ರೀತಿ ವಿಶ್ವಾಸಗಳೇ ದಾಂಪತ್ಯದ ತಿರುಳು. 'ನಾನು ಬಡವಿ ಆತ ಬಡವ, ಒಲುಮೆ ನಮ್ಮ ಬದುಕು' ಎಂಬ ಸತ್ಯವನ್ನು ಅರಿಯಬೇಕಾಗಿದೆ.

# 15. ಜ್ಯೋಗ್ಯೋರ ಅಂಜಪ್ಪನ ಕೋಳಿಕತೆ

## ಮಾಸ್ತಿ ವೆಂಕಟೇಶ ಅಯ್ಯಂಗಾರ

ಕನ್ನಡದ ಹೆಸರಾಂತ ಕತೆಗಾರ ಮಾಸ್ತಿ ವೆಂಕಟೇಶ ಅಯ್ಯಂಗಾರರು ಕನ್ನಡ ಕಥಾಜನಕರೆಂದೇ ಗುರುತಿಸಿಕೊಂಡವರು. ಅವರ ನೂರಾರು ಕತೆಗಳಲ್ಲಿ ಜ್ಯೋಗ್ಯೋರ ಅಂಜಪ್ಪನ ಕೋಳಿಕತೆ ನ್ಯಾಯನಿರ್ಣಯದ ವಿಶಿಷ್ಟತೆಯನ್ನು ಸಾರುವ ಕತೆಗಳಲ್ಲಿ ಒಂದಾಗಿದೆ. ವ್ಯಕ್ತಿ ಶ್ರದ್ಧೆ ನಿಷ್ಠೆ ತನ್ನ ಪ್ರಾಮಾಣಿಕತೆಯಿಂದ ನ್ಯಾಯವನ್ನು ಗೆಲ್ಲಲುವಂತಾಗಬೇಕು. ನಿಜವಾದ ಅಪರಾಧಿಯನ್ನು ಗುರುತಿಸಬೇಕು. ಅದನ್ನು ಬಿಟ್ಟು ಒಬ್ಬ ನಿರಪರಾಧಿ ಬಲಿಯಾಗಬಾರದೆಂಬ ಸಂದೇಶವನ್ನು ಕತೆಯಲ್ಲಿ ಮಾಸ್ತಿಯವರು ನೀಡುತ್ತಾರೆ.

ಊರಿನಲ್ಲಿ ಅತೀ ಹಳಬ ಅಂಜಪ್ಪ. ಸಿಪಾಯಿದಂಗೆಯ ಕಾಲಕ್ಕೆ ಅಂಜಪ್ಪ ಹುಡುಗನಂತೆ. ಹಾಗಾಗೀ ಆ ಊರಿನಲ್ಲಿ ಪ್ರತಿಯೊಂದು ಘಟನೆ, ಸಂಗತಿ, ಸನ್ನಿವೇಶವನ್ನು ಅತ್ಯಂತ ನೆನಪಿನಿಂದ ಹೇಳುವ ಹಳೆಯ ಕೊಂಡಿ. ಅಂಜಪ್ಪ ಹೇಳಿದ್ದೇ ಸತ್ಯ. ಏಕೆಂದರೆ ಅವನು ಕೇಳುವ ಘಟನೆಗಳನ್ನು ಯಾರೂ ನೋಡಿಲ್ಲ, ಕೇಳಿಲ್ಲ. ಹಾಗಾಗೀ ಅವನು ಸತ್ಯದ ತಲೆಯಮೇಲೆ ಬಡಿದಂತೆ ಹೇಳುತ್ತಾನೆಂಬ ನಂಬಿಕೆ. ಅವನು ಊರೂರು ಅಲೆದು ಜೀವನ ಸಾಗಿಸುವ ಜೋಗಿ. ಅವನ ನಾಲಿಗೆಯಲ್ಲಿ ನೂರಾರು ಪದಗಳು. ಅಂಜಪ್ಪನಷ್ಟು ಬುದ್ಧಿವಂತರನ್ನು ತಿಳುವಳಿಕೆಯವರನ್ನು ಸುತ್ತರಲ್ಲಿ ಗುರುತಿಸುವುದು ಕಷ್ಟ. ಆ ಊರಿನಲ್ಲಿ ಹೊಸದಾಗಿ ತಾಲೂಕಿನ ಬೆಂಚು ಮ್ಯಾಜೀಸ್ಟ್ರೇಟ ಆಗಿ ಆಯ್ಕೆಯಾದವರು ರಂಗಪ್ಪ. ವಯಸ್ಸಿನಲ್ಲಿ ಚಿಕ್ಕವನಾದ ಅವನಿಗೆ ಒಂದಷ್ಟು ಕಿವಿ ಮಾತು ಹೇಳಲು ಬಂದ ಅಂಜಪ್ಪ 'ಯಾರು ಸತ್ಯವಂತರು, ಯಾರು ಕಳ್ಳರು' ಎಂಬುದನ್ನು ಸರಿಯಾಗಿ ಅರಿತು ನ್ಯಾಯವನ್ನು ನೀಡಬೇಕೆಂದು ತನ್ನ ಜೀವನದಲ್ಲಿ ಜರುಗಿದ ಒಂದು ನ್ಯಾಯದ ವೃತ್ತಾಂತವನ್ನೇ ಹೇಳುತ್ತಾನೆ.

ಹೀಗೆ ಒಂದು ಕಾಳಾಪುರವೆಂಬ ಊರಿಗೆ ಅಂಜಪ್ಪ ಹೋದಾಗ ಆಕಸ್ಮಿಕವಾಗಿ ಒಬ್ಬ ಮದುವೆಯಾದ ಹೆಣ್ಣಿನ ದೃಷ್ಟಿಗೆ ಬೀಳುತ್ತಾನೆ. ಯೌವನದಲ್ಲಿ ಸುಂದರ ಅಂಗಸೌಷ್ಠವವನ್ನು ಹೊಂದಿದ್ದ ಅಂಜಪ್ಪನನ್ನು ಯಾರೇ ನೋಡಲಿ ಅವನಿಂದ ಪದಗಳನ್ನು ಕೇಳುವ ಬಯಕೆ. ಅಂತೆಯೆ ಆ ಊರಿನ ಒಬ್ಬ ಹೆಣ್ಣುಮಗಳು ಹಲವು ದಿನಗಳಿಂದ ಅಂಜಪ್ಪನಿಗೆ ಮಾರುಹೋಗಿ ಅವನಿಂದ ಪದಗಳನ್ನು ಕೇಳಿ ಸಂತೋಷ ಪಡುತ್ತಾಳೆ. ಪ್ರತಿಯಾಗಿ ಅವನಿಗೆ ಏನಾದರೂ ಕೊಡೋಣವೆಂದು ಯೋಚಿಸಿದವಳೇ ಒಂದು ಕೋಳಿಯನ್ನು ಅವನ ಜೋಳಿಗೆಗೆ ಹಾಕಿ ಲಗುಬಗೆಯಿಂದ ಕಳಿಸುತ್ತಾಳೆ. ದೂರ ಸಾಗಿದ ಅಂಜಪ್ಪ ಆಯಾಸವಾಗಿ ಗಿಡದ ಕೆಳಗೆ ಕುಳಿತಾಗ ಅಲ್ಲಿಗೆ ಬಂದ ಅದೇ ಊರಿನವ, ಲೋಕಾರೂಢಿಯಿಂದ ಮಾತನಾಡುತ್ತ ಒತ್ತಾಯಪೂರ್ವಕವಾಗಿ ಅವನ ಚೀಲದಲ್ಲಿದ್ದ ಕೋಳಿಯನ್ನು ನೋಡುತ್ತಾನೆ. ಆ ಹೆಣ್ಣುಮಗಳ ಅತ್ತೆ ಕೋಳಿ ಕಣ್ಮರೆಯಾಗಿರುವುದನ್ನು ನೋಡಿ ಊರಲ್ಲಿ ರಂಪಾಟ ಮಾಡುತ್ತಾಳೆ. ಈ ಮೊದಲೇ ನೋಡಿದ್ದ ವ್ಯಕ್ತಿ ಕೋಳಿ, ಅಂಜಪ್ಪನ ಹತ್ತಿರ ಜೋಳಿಗೆಯಲ್ಲಿ ಇರುವುದನ್ನು ಹೇಳುತ್ತಾನೆ. ಮುದುಕಿ ಹಾಗೂ ಕುಟುಂಬದವರು ತಳಾರನ ಮೂಲಕ ಹುಡುಕಿ ಅಂಜಪ್ಪನನ್ನು ಮಾಲು ಸಮೇತ ಹಿಡಿದು ಊರ ಗೌಡರಲ್ಲಿ ವಿಚಾರಣೆಗೆ ಒಳಪಡಿಸುತ್ತಾರೆ. ಏನೂ ತಪ್ಪಿಲ್ಲದ ಅಂಜಪ್ಪ ಅನಿವಾರ್ಯವಾಗಿ ಮಾನವನ್ನು ಕಳೆದುಕೊಂಡು ಜುಲ್ಮಾನೆಯನ್ನು ಕಟ್ಟುವ ಪರಿಸ್ಥಿತಿ ನಿರ್ಮಾಣಗೊಳ್ಳುತ್ತದೆ. ಆ ಹುಡುಗಿಯೂ ಪ್ರೀತಿಯಿಂದ ಕೊಟ್ಟ ಕೋಳಿ ಸಂಗತಿಯನ್ನು ಅವಳೇ ನೀಡಿದ್ದಾಳೆ ಎಂದರೆ ಅವಳ ಜೀವನಕ್ಕೆ ಅಪಾಯ ಎಂಬ ವಿಚಾರ ಅರಿತ ಅಂಜಪ್ಪ ತನ್ನದಲ್ಲದ ತಪ್ಪನ್ನು ತನ್ನ ತಲೆಯ ಮೇಲೆಯೇ ಹಾಕಿಕೊಳ್ಳುತ್ತಾನೆ.

ಮಾಸ್ತಿಯವರು ಅಂಜಪ್ಪನ ಪಾತ್ರದ ಮೂಲಕ ಒಂದು ನ್ಯಾಯವನ್ನು ಹಲವು ನೆಲೆಗಳಲ್ಲಿ ನೋಡುವ ಪ್ರಯತ್ನ ಮಾಡುತ್ತಾರೆ. ನಾವು ಪ್ರಾಮಾಣಿಕರಾಗಿದ್ದರೂ ವ್ಯವಸ್ಥೆ ನೆಲೆಯಲ್ಲಿ ನಾವು ಅಪರಾಧಿ ಸ್ಥಾನದಲ್ಲಿ ನಿಲ್ಲುವ ಬಗೆಯನ್ನು ವಿಡಂಬಿಸುತ್ತಾರೆ. ಕೋಳಿಯನ್ನು ಕದಿಯದೇ ಇದ್ದರೂ ಅಂಜಪ್ಪ ಅಪರಾಧಿಯಾಗುವ ಬಗ್ಗೆ ನಮ್ಮ ನ್ಯಾಯ ವ್ಯವಸ್ಥೆಗೆ ಹಿಡಿದ ಕನ್ನಡಿಯಾಗಿದೆ. ಇದರಲ್ಲಿ ಅಂಜಪ್ಪನದು ತಪ್ಪಿದೆ. ಆದರೆ ಸತ್ಯದ ಮೇಲೆ ಅಸತ್ಯದ ವಿಜಯವಾಗಬಾರದೆಂಬ ನಿಲುವು ಒಂದೆಡೆ ಮೂಡಿನಿಲ್ಲುತ್ತದೆ.

ರಂಗಪ್ಪನಂತ ನೂರಾರು ಮ್ಯಾಜಿಸ್ಟ್ರೇಟುಗಳು ಸತ್ಯವನ್ನು ಎತ್ತಿಹಿಡಿಯುವ ಕಾರ್ಯ ಮಾಡಬೇಕು. ಅಂತೆಯೇ ಧರ್ಮಸಂಕಟಕ್ಕೆ ನಾವು ನಮ್ಮತನಗಳನ್ನು ಕಳೆದುಕೊಳ್ಳದೇ ನಿಷ್ಠುರರಾಗಿರಬೇಕೆಂಬ ಸಂದೇಶವನ್ನು ಕತೆಗಾರ ಸೂಕ್ಷ್ಮವಾಗಿ ನೀಡುತ್ತಾರೆ. ಧರ್ಮಸಂಕಟಕ್ಕೆ ದೇವರು ಸಾಕ್ಷಿ ಹೇಳಬೇಕೆಂಬ ಮಾತು ಕತೆಯಲ್ಲಿ ಧ್ವನಿಪೂರ್ಣವಾಗಿ ಮೂಡಿನಿಲ್ಲುತ್ತದೆ. ನ್ಯಾಯ–ಸತ್ಯ–ಧರ್ಮಗಳ ಒಂದು ಸೂಕ್ಷ್ಮವಾದ ಸಂವೇದನೆಯನ್ನು ಅಂಜಪ್ಪ ತನ್ನ ಬದುಕಿನಿಂದ ನಿರೂಪಿಸುವ ಬಗೆ ನ್ಯಾಯಿಕ ವ್ಯವಸ್ಥೆಗೆ ಒಂದು ಜ್ವಲಂತ ನಿದರ್ಶನವಾಗಿದೆ.

## 16. ಒಂದು ಉಪಾಯ

### ಕೋ.ಚನ್ನಬಸಪ್ಪ

ನ್ಯಾಯಾಧೀಶ ಹಾಗೂ ನ್ಯಾಯವಾದಿ ಭ್ರಷ್ಟರಾಗದೆ ನ್ಯಾಯವನ್ನು ಎತ್ತಿಹಿಡಿಯುವ ದೇವತೆಗಳಾಗಬೇಕೆಂಬ ಆಶಯ ಪ್ರಸ್ತುತ ಗದ್ಯದಲ್ಲಿ ಮೂಡಿಬಂದಿದೆ. ಎಲ್ಲರೂ ನ್ಯಾಯಾಲಯದ ಮೇಲೆ ವಿಶ್ವಾಸವಿಟ್ಟು ಕೋರ್ಟ್‌ನ ಮೆಟ್ಟಿಲೇರುತ್ತಾರೆ. ಆದರೆ ಆ ವ್ಯವಸ್ಥೆಯೇ ನಿಷ್ಪಕ್ಷಪಾತವಾಗಿ ನ್ಯಾಯವನ್ನು ನೀಡದೇ ಹೋದರೆ ಉಳಿಗಾಲವಿಲ್ಲವೆಂಬ ಸಂದೇಶವು ಇಲ್ಲಿದೆ. ಒಬ್ಬ ನ್ಯಾಯವಾದಿಯ ಜೀವನದ ಒಂದು ವೃತ್ತಾಂತವನ್ನು ಇಲ್ಲಿ ಹೃದಯಸ್ಪರ್ಶಿಯಾಗಿ ಕೋ.ಚನ್ನಬಸಪ್ಪನವರು ನಿರೂಪಿಸುತ್ತಾರೆ.

ಸ್ವಾತಂತ್ರ್ಯಪೂರ್ವದ ಒಂದು ನ್ಯಾಯ ವ್ಯವಸ್ಥೆಯನ್ನು ಇಲ್ಲಿ ಅನಾವರಣಗೊಳಿಸುವ ಲೇಖಕರು ಬಳ್ಳಾರಿ ಜಿಲ್ಲೆ ಜಗಳೂರಿನಲ್ಲಿ ಸರಾಯಿ ನಿಷೇಧ ಕಾನೂನು ಜಾರಿಗೆ ತರಲಾಗಿರುತ್ತದೆ. ಇಂತಹ ಸಂದರ್ಭದಲ್ಲಿ ಎಂಟು ಗ್ಯಾಲನ್ ಸರಾಯಿಯನ್ನು ಅಕ್ರಮವಾಗಿ ಎತ್ತಿನ ಬಂಡೆಯಲ್ಲಿ ಹುಸೇನಿ ಎಂಬ ವ್ಯಕ್ತಿ ಸಾಗಿಸುತ್ತಿದ್ದ ಸಂದರ್ಭದಲ್ಲಿ, ಅದರ ಪಕ್ಕಾ ಸೂಚನೆಯ ಮೇರೆಗೆ ಪೋಲಿಸರು ಜಪ್ತಿ ಮಾಡುತ್ತಾರೆ, ಈ ಸುದ್ಧಿಯನ್ನು ತಿಳಿದ ಆ ಊರಿನ ಪ್ರತಿಷ್ಠಿತ ವ್ಯಕ್ತಿ, ಹುಸೇನಿ ನನ್ನ ಆಪ್ತವ್ಯಕ್ತಿಯಾಗಿದ್ದು, ಅವನಿಗೆ ಏನಾದರೂ ಶಿಕ್ಷೆಯಾದರೆ ನನ್ನ ಮರ್ಯಾದೆಗೆ ಧಕ್ಕೆಯಾಗುವುದೆಂದು ಭಾವಿಸುತ್ತಾನೆ. ಈ ಕೇಸ್‌ನ್ನು ಮುಚ್ಚಿಹಾಕಲು ಖ್ಯಾತ ವಕೀಲರನ್ನು ಭೇಟಿಯಾಗುತ್ತಾನೆ, ಅಂಗಲಾಚುತ್ತಾನೆ. ಎಷ್ಟೇ ದುಡ್ಡು ಬಂದರೂ ಅದನ್ನು ನೀಡಲು ಸಿದ್ಧನಾಗುತ್ತಾನೆ. ಅದಕ್ಕೆ ಒಪ್ಪಿದ ವಕೀಲ ತನ್ನ ಜೂನಿಯರ್ ವಕೀಲನಿಗೆ ಆ ವಕಾಲತ್ತು ವಹಿಸಲು ಸೂಚಿಸುತ್ತಾನೆ. ಇನ್ನೂ ವಾದವನ್ನು ಮಾಡಿರದ ಹಾಗೂ ಅನನುಭವಿ ಯುವ ನ್ಯಾಯವಾದಿ ನ್ಯಾಯಾಧೀಶರಿಂದ ವಿಶೇಷ ಅಧಿಕಾರ ಪಡೆದು ವಾದಿಸುತ್ತಾನೆ. ಹುಸೇನಿ ಹಾಗೂ ಎತ್ತುಗಳಿಗೆ ಜಾಮೀನು ನೀಡಿ ಬಿಡಿಸಿಕೊಳ್ಳುತ್ತಾನೆ.

ಕೆಲವು ತಿಂಗಳುಗಳ ನಂತರ ಕೇಸ್ ಪ್ರಾರಂಭವಾಗುತ್ತದೆ. ಹುಸೇನಿಯ ಸರಾಯಿ ಜಪ್ತು ಮಾಡಿದ ಸ್ಥಳದಲ್ಲಿ ವ್ಯಕ್ತಿಯನ್ನು ಸಾಕ್ಷಿಯಾಗಿ ಪಡೆದಿದ್ದ ಪೋಲಿಸರು ಅವನಿಂದ ಸಾಕ್ಷಿಯನ್ನು ನುಡಿಸುತ್ತಾರೆ. ಆದರೆ ಯುವ ನ್ಯಾಯವಾದಿ ಸರಾಯಿ ಗ್ಯಾಲನ್‌ಗಳಲ್ಲಿ ಸರಾಯಿಯೇ ಇರಲಿಲ್ಲ, ಅಲ್ಲಿ ಇದ್ದದ್ದು ಕೇವಲ ನೀರು ಎಂಬುದನ್ನು 'ಸರಾಯಿಯನ್ನು ನೀರೆಂದೇ' ಸಾಬೀತು ಪಡಿಸುತ್ತಾನೆ. ನಿಜವಾದ ಸಾಕ್ಷ್ಯಾಧಾರಗಳು ಇಲ್ಲದ ಕಾರಣಕ್ಕೆ ಹುಸೇನಿಯನ್ನು ನ್ಯಾಯಾಧೀಶರು ಸಂಶಯದ ಸೌಲಭ್ಯವನ್ನು ಕೊಟ್ಟು ಅಪರಾಧಿ ಹುಸೇನಿಯನ್ನು ಬಿಡುಗಡೆಗೊಳಿಸುತ್ತಾರೆ. ಆದರೆ ಇದು ಸಣ್ಣ ಕೇಸಾಗಿದ್ದರೂ ತಾಲೂಕಿನಲ್ಲಿ ಬಹುದೊಡ್ಡ ಸುದ್ದಿಯಾಗುತ್ತದೆ.ಸರ್ಕಲ್ ಇನ್ಸ್‌ಪೆಕ್ಟರ್ ಈ ಕೇಸ್‌ನ ವಿಚಾರವಾಗಿ ನ್ಯಾಯಾಧೀಶರನ್ನು ಒಮ್ಮೆ ಕೇಳಿದಾಗ 'ಈಗ ನಾನು ನ್ಯಾಯದೇವತೆಯ ಪೀಠದಲ್ಲಿ ಕುಳಿತಿದ್ದೇನೆ. ದೇವರು ಬುದ್ಧಿ ಕೊಟ್ಟಂತೆ ತೀರ್ಪು ಕೊಡುತ್ತೇನೆ. ದೈವದ್ರೋಹ, ನ್ಯಾಯದ್ರೋಹ ಮಾತ್ರ ಮಾಡಲಾರೆ. ಕೇಸಿನ ಸುದ್ದಿ ಎತ್ತಬೇಡ' ಎಂದು ಖಡಾಖಂಡಿತ ಹೇಳುತ್ತಾರೆ.

ಒಮ್ಮೆ ಒಬ್ಬಾತ ಒಬ್ಬ ನ್ಯಾಯಾಧೀಶರಿಗೆ ಅಕ್ರಮ ಸಂಭಾವನೆ ಪಡೆದರು ಎಂದು ಹೇಳಿದಾಗ 'ಬೇರೆ ಇಲಾಖೆಯವರು ತಿನ್ನುವುದಿಲ್ಲವೆ?' ಎಂದು ಕೇಳಿದನಂತೆ. ಅದಕ್ಕೆ ಆ ಹಳ್ಳಿಯ ಅವಿದ್ಯಾವಂತ ಮುದುಕ ಹೀಗೆ ಉತ್ತರ ಕೊಟ್ಟ.

'ಬೇರೆಯವರು ಅನ್ಯಾಯ ಮಾಡುತ್ತಾರೆ, ಮಾಡಬಾರದ್ದು ಮಾಡ್ತಾರೆ ಅಂತೆ ಈ ಧರ್ಮಪ್ರಭುಗಳ ಮುಂದೆ ಬರ್ತೀವಿ ದೇವ್ರು. ಈ ಧರ್ಮಪ್ರಭುಗಳೇ ಹಿಂಗಾದರೆ ಯಾರತ್ರ ಹೋಗ್ಬೇಕು? ಹಡದವ್ವ ವಿಷ ಇಕ್ಕಿದ್ರೆ ಮಕ್ಕಳು ಹ್ಯಂಗ್ ಉಳಿದಾವು? ಎಲ್ಲಿ ಯಾರೇ ತಿಂದ್ರೂ ಧರ್ಮಪ್ರಭುಗಳು ಮಾತ್ರ ತಿನ್ಬಾರದು' ಎಂದು ಆತ ಗಲ್ಲ ಗಲ್ಲ ಬಡಿದುಕೊಂಡು ಕಣ್ಣೀರು ತಂದ. ಇದು ಜನ ನ್ಯಾಯಾಂಗದಿಂದ ನಿರೀಕ್ಷಿಸುವ ನಡತೆ. ಇದು ದಿನೇ ದಿನೇ ಕುಸಿಯುತ್ತಿರುವುದು ಬಹು ದುಃಖದ ಸಂಗತಿ ಎಂದು ಲೇಖಕರು ಅತ್ಯಂತ ವಿನಮ್ರವಾಗಿ, ವಿಷಾದದಿಂದ ಹೇಳುತ್ತಾರೆ.

ಹಣ ಹಾಗೂ ಅಧಿಕಾರದ ಬಲದಿಂದ ನ್ಯಾಯವನ್ನು ಖರೀಸುವುದು ಎಷ್ಟು ಉಚಿತ. ಅದು ನ್ಯಾಯಾಂಗ ವ್ಯವಸ್ಥೆಯ ಮೇಲಿನ ನಂಬಿಕೆಯನ್ನು ತೊಡೆದುಹಾಕುತ್ತದೆ. ನ್ಯಾಯಾಧೀಶನೇ ದೇವರು. ದೇವರೆ ಅಡ್ಡದಾರಿಯನ್ನು ಹಿಡಿದರೆ ನ್ಯಾಯವನ್ನು ರಕ್ಷಿಸುವವರು ಯಾರು?. ಇಂದು ಸಮಾಜದಲ್ಲಿ ಅನ್ಯಾಯವು ತಾರಕ್ಕೇರಿದೆ. ನ್ಯಾಯವು ತನ್ನ ಪಾವಿತ್ರ್ಯವನ್ನು ಕಳೆದುಕೊಳ್ಳುತ್ತಿದೆ.

ಅದನ್ನು ಸಂರಕ್ಷಿಸುವುದು ಹಾಗೂ ನ್ಯಾಯವನ್ನು ಎತ್ತಿಹಿಡಿಯುವುದು ನ್ಯಾಯಾಂಗ ವ್ಯವಸ್ಥೆಯ ಮೂಲಧ್ಯೇಯವಾಗಬೇಕು. ಸಂವಿಧಾನವನ್ನು ಎತ್ತಿಹಿಡಿಯುವುದೇ ನ್ಯಾಯದೇವತೆಯ ಕೆಲಸ. ಕೇವಲ ಮಾತಿನಲ್ಲಿ ಹೇಳಿ ಕೃತಿಯಲ್ಲಿ ತಾರದೇ ಹೋದರೆ ಜನಸಾಮಾನ್ಯನಿಗೂ ನ್ಯಾಯಾಧೀಶನಿಗೂ ಯಾವ ವ್ಯತ್ಯಾಸವೂ ಇಲ್ಲ. ಒಬ್ಬ ನಿರಪರಾಧಿಗೆ ಅನ್ಯಾಯವಾಗಬಾರದದಂದೇ ನ್ಯಾಯಾಂಗಕ್ಕೆ ವಿಶೇಷವಾದ ಅಧಿಕಾರವಿದೆ. ಸುಳ್ಳನ್ನು ಸತ್ಯವನ್ನಾಗಿ, ಸತ್ಯವನ್ನು ಸುಳ್ಳನ್ನಾಗಿ ಪರಿವರ್ತಿಸಿದರೆ ಅದಕ್ಕೆ ಬೆಲೆಯಿಲ್ಲ. ನ್ಯಾಯವಾದಿ ನ್ಯಾಯದ ಪರವಾಗಿರಬೇಕು, ನ್ಯಾಯಾಧೀಶ ನ್ಯಾಯಕ್ಕೆ ಜಯನೀಡಬೇಕೆಂಬ ಸತ್ಯದರ್ಶನ ಇಲ್ಲಿಯ ಸಂದೇಶ.

## 3. ಕನ್ನಡದಲ್ಲಿ ಕಾನೂನು ಸಾಹಿತ್ಯ ನಡೆದು ಬಂದ ದಾರಿ

ಡಾ.ಪಿ.ಈಶ್ವರ ಭಟ್

- ಕನ್ನಡದಲ್ಲಿ ಲಭ್ಯವಿರುವ ಕಾನೂನೂ ಸಾಹಿತ್ಯವನ್ನು ಕಾನೂನು ಕನ್ನಡವೆಂದು ಕರೆಯಬಹುದು. ಕಾನೂನು ಎಂದರೆ ಸಮಾಜದ ಹಿತರಕ್ಷಣೆಗೆ ಪ್ರಜೆಗಳು ಒಪ್ಪಿಕೊಳ್ಳಲಾದ ನಿಯಮಗಳೇ ಕಾನೂನು. ಎಲ್ಲ ಕಾನೂನುಗಳನ್ನು ಸಮನ್ವಯಿಸಿ ಅವುಗಳ ಉಗಮ, ಅರ್ಥೈಸುವಿಕೆ ಮತ್ತು ಅನುಷ್ಠಾನ ಮಾಡುವ ಸಾಂಸ್ಥಿಕ ವ್ಯವಸ್ಥೆಗೆ ಕಾನೂನು ವ್ಯವಸ್ಥೆ ಎಂದು ಕರೆಯಬಹುದು.
- ಭಾರತೀಯ ಪ್ರಾಚೀನ ಕಾನೂನು ಪ್ರಮುಖವಾಗಿ ಸಮಾಜದ ರೂಢಿ ಮತ್ತು ಸಂಪ್ರದಾಯಗಳ ಆಧಾರದಲ್ಲಿ ಸ್ವೀಕರಿಸಲ್ಪಟ್ಟಿತ್ತು. ಮನುಸ್ಮೃತಿ ವಿಜ್ಞಾನೇಶ್ವರ ಮಿತಾಕ್ಷರ, ಚಾಣಕ್ಯನ ಅರ್ಥಶಾಸ್ತ್ರಗಳು ಅಂದಿನ ಕಾಲದ ಕಾನೂನು ಮತ್ತು ಕಟ್ಟಳೆಗಳನ್ನು ನಿರೂಪಿಸುತ್ತವೆ.
- ಕನ್ನಡದ ಹಲ್ಮಿಡಿ ಶಾಸನ, ಬಾದಾಮಿ ಶಾಸನ, ಮಾವಳಿ ಶಾಸನ, ಪಂಪನ ಗಂಗಾಧರಂ ಶಾಸನಗಳು ಅಂದು ರಾಜಾಜ್ಞೆಗಳಾಗಿ ಮೂಡಿಬಂದಿವೆ. ಇಲ್ಲಿ ಹಲವು ಶಾಸನಗಳು ದಾನವನ್ನು ಪ್ರಸ್ತಾಪಿಸಿದ್ದರೂ ಒಂದು ಕಾಲದ ನೀತಿ ನಿಯಮಗಳನ್ನು ಒತ್ತಿ ಹೇಳುತ್ತೇವೆ.
- ಕನ್ನಡ ಪ್ರದೇಶವನ್ನು ಆಳಿದ ಶಾತವಾಹನರು, ಚಾಳುಕ್ಯರು, ಹೊಯ್ಸಳರು, ರಾಷ್ಟ್ರಕೂಟದ ಅರಸರು, ವಿಜಯನಗರದ ರಾಜರು ಶಾಸನಗಳ ಮೂಲಕ ನೂರಾರು ವಿಧದ ತೆರಿಗೆಗಳು, ದಂಡನೆಗಳು, ನೀತಿ ನಿಯಮಗಳ ಬಗ್ಗೆ ಹೇಳುವ ಸಂಗತಿಗಳು ಕೂಡ ಕನ್ನಡದ ನೆಲೆದಲ್ಲಿ ಕಾನೂನು ವ್ಯವಸ್ಥೆಗೆ ಹಿಡಿದ ಕನ್ನಡಿಯಾಗಿದೆ.
- 10ನೇ ಶತಮಾನದ ಪಂಪ, ರನ್ನ, ಪೊನ್ನರ ಕೃತಿಗಳಲ್ಲಿಯೂ, 12ನೇ ಶತಮಾನದ ಶರಣರ ವಚನಗಳಲ್ಲಿ, 15ನೇ ಶತಮಾನದ ದಾಸರ ಕೀರ್ತನೆಗಳಲ್ಲಿಯೂ  ಕಾನೂನು ಸಾಹಿತ್ಯ ಹಾಸುಹೊಕ್ಕಾಗಿರುವುದನ್ನು ಗಮನಿಸಬೇಕು.
- 1368ರಲ್ಲಿ ಶ್ರವಣಬೆಳಗೊಳದಲ್ಲಿ ವಿಜಯನಗರದ ಬುಕ್ಕರಾಯನು ಬರೆಯಿಸಿದ ಶಾಸನವು ಜೈನರಿಗೂ ಹಾಗೂ ವೈಷ್ಣವರಿಗೂ ಆದ ಸಂಘರ್ಷವನ್ನು ಹಾಗೂ ಪರಿಹಾರವನ್ನು ತಿಳಿಸುವ ಶಾಸನವಾಗಿದೆ. ಇದನ್ನು ಬುಕ್ಕರಾಯನ ಧರ್ಮಶಾಸನವೆಂದೇ ಕರೆಯಲಾಗಿದೆ. ಅಂದರೆ ಕನ್ನಡದಲ್ಲಿ ಕಾನೂನು ಸಾಹಿತ್ಯಕ್ಕೆ ಸಾವಿರ ವರ್ಷಗಳ ಇತಿಹಾಸವಿದೆ ಎಂಬುದಕ್ಕೆ ಹಲವಾರು ಉದಾಹರಣೆಗಳನ್ನು ನೀಡಬಹುದು.
- ಬ್ರಿಟಿಷ್ ಕಾಲದಲ್ಲಿ ಸಂಸ್ಕೃತ ಹಾಗೂ ಇಂಗ್ಲೀಷ್‌ದಲ್ಲಿದ್ದ ಹಲವಾರು ಕಾನೂನು ಗ್ರಂಥಗಳನ್ನು ಕನ್ನಡಕ್ಕೆ ತರ್ಜುಮೆಗೊಳಿಸಿ ಕನ್ನಡ ಕಾನೂನು ಸಾಹಿತ್ಯವನ್ನು ಬಲಪಡಿಸಿದ್ದನ್ನು ಗಮನಿಸಬಹುದು. ರಾಬರ್ಟ್ ಕೋಲ್ 1863ರಲ್ಲಿ ಕನ್ನಡದಲ್ಲಿ ಭಾಷಾಂತರಗೊಂಡ 'ಮಹಮ್ಮದೀಯ ಲಾ' ಪುಸ್ತಕಕ್ಕೆ ಮುನ್ನುಡಿಯನ್ನು ಬರೆದಿದ್ದಾನೆ.

- 1869ರಲ್ಲಿ ರೆವೆರೆಂಡ್ ಜೆ.ಗ್ಯಾರೆಟ್ ಮೇಲುಸ್ತುವಾರಿಯಲ್ಲಿ 'ಸಿವಿಲ್ ನಡವಳಿತದ ನಿಬಂಧನೆಗಳು(ಪುಟ 208) ಮತ್ತು 'ರಿಜಿಷ್ಟ್ರೇಷನ್ ಸಂಗ್ರಹ' (ಪುಟ 221) ಎರಡು ಪುಸ್ತಕಗಳು ಸರಕಾರದ ವತಿಯಿಂದ ಕನ್ನಡದಲ್ಲಿ ಭಾಷಾಂತರಗೊಂಡಿವೆ.
- ಮದ್ರಾಸ್ ಉಚ್ಚನ್ಯಾಯಾಲಯದ ವಕೀಲರಾಗಿದ್ದ ಆರ್. ವೆಂಕಟಸುಬ್ಬರಾವ್ ಅರು 1891ರಲ್ಲಿ ಕನ್ನಡಕ್ಕೆ ಭಾಷಾಂತರಿಸಿ ಪ್ರಕಟಿಸಿದ 'ಇಂಡಿಯನ್ ಪೀನಲ್ ಕೋಡ್' ಮಹತ್ವದ ಕೃತಿ. 1896ರಲ್ಲಿ ವಿಜಯಪುರದ ಹಣಮಂತ ವೆಂಕಟೇಶ ಚಿನ್ನಮುಳಗುಂದ ಎಂಬವರು 'ಹಿಂದೂ ಧರ್ಮಶಾಸ್ತ್ರವು' ಎಂಬ 525ಪುಟಗಳ ಗ್ರಂಥವನ್ನು ಕನ್ನಡದಲ್ಲಿ ಬರೆದಿದ್ದಾರೆ.
- 1904ರಲ್ಲಿ ಬೆಂಗಳೂರಿನ ಬಿ.ನರಸಿಂಗರಾವ್ ಅವರು ಬರೆದು ಪ್ರಕಟಿಸಿದ 750 ಪುಟಗಳ 'ಕ್ರಿಮಿನಲ್ ಪ್ರೊಸೀಜರ್ ಕೋಡ್' ಎನ್ನುವ ಕನ್ನಡ ಕೃತಿಯಲ್ಲಿ ಕಾನೂನಿನ ಪಠ್ಯಭಾಗವಲ್ಲದೆ ನೋಟಿಸುಗಳ ನಮೂನೆಗಳು ಇದ್ದವು. ಕನ್ನಡಿಗರಿಗೆ ಅನುಕೂಲವಾಗಲೆಂದು ಈ ಗ್ರಂಥವನ್ನು ಅವರು ರಚಿಸಿದ್ದರು.
- 1903ರಲ್ಲಿ ಪ್ರಕಟವಾದ 'ಕನ್ನಡ ಇಂಡಿಯನ್ ಪೆನಲ್ ಕೋಡು' ಶ್ರೀಮದಿಂಡಿಯಾ ಗವರ್ನರ್ ಜನರಲ್‌ರವರ ಅನುಮತಿ ಪ್ರಕಾರ 1860ನೇ ಇಸವಿಯಲ್ಲಿ ಮಂಜೂರಾದ ಆಕ್ಟಿನ ವಿವರಣಾ ಪೂರಕ ಕೃತಿ ಇದು.
- 1890ರಲ್ಲಿ ಸುಪ್ರಸಿದ್ಧ ವಿದ್ವಾಂಸರೂ ಮೈಸೂರು ಮುಖ್ಯ ನ್ಯಾಯಾಧೀಶರೂ ಹಾಗೂ ಮೈಸೂರು ವಿಶ್ವವಿದ್ಯಾಲಯದ ಕುಲಪತಿಗಳೂ ಆಗಿದ್ದ ಎಚ್.ವಿ.ನಂಜುಂಡಯ್ಯನವರ 'ವ್ಯವಹಾರ ದೀಪಿಕೆ' ಎಂಬ ಕನ್ನಡದ ಕೃತಿಯಲ್ಲಿ ಸಾಮಾನ್ಯ ಮನುಷ್ಯನಿಗೆ ಅಗತ್ಯವಿರುವ ಎಲ್ಲ ಕಾನೂನುಗಳ ಮಾಹಿತಿಯೂ ದೊರೆಯುತ್ತದೆ.
- ಮೈಸೂರಿನ ಇನ್ನೊಬ್ಬ ನ್ಯಾಯವಿದ್ವಾಂಸರಾಗಿದ್ದ ಎಂ. ಮಲ್ಲಾರಾಧ್ಯರು ಬರೆದು 1907ರಲ್ಲಿ ಪ್ರಕಟಿಸಿದ 'ವ್ಯವಹಾರ ನಿರ್ಣಯ' ಕಾನೂನಿಗೆ ಸಂಬಂಧಿಸಿದ ಮತ್ತೊಂದು ಸಮಗ್ರ ಕೃತಿ. ಲಾ ತಿಳಿಯದರಿಂದ ಬರೆಯಲ್ಪಟ್ಟ ಲಾ ಪುಸ್ತಕಗಳ ಲೋಪದೋಷಗಳನ್ನು ಹೇಳುತ್ತಾ ಎಲ್ಲ ಕಾನೂನುಗಳ ನಿಖರವಾದ ಮಾಹಿತಿಯನ್ನು ನೀಡಿ ಓದುಗರನ್ನು ಕಾನೂನಿನ ನಿರೀಕ್ಷೆಗೆ ಮಾನಸಿಕವಾಗಿ ಸಿದ್ಧಗೊಳಿಸುವ ಉದ್ದೇಶವನ್ನು ಈ ಪುಸ್ತಕವು ಹೊಂದಿದೆ.
- ಮದ್ರಾಸಿನ ಕೃಷ್ಣಮ ನಾಯಕರು ಬರೆದ 'ಹಿಂದೂ ಸ್ತ್ರೀ ಪುನರ್ವಿವಾಹ ವಿಧಿ', ಕೆ.ಎಲ್.ಬಾದಾಮಿ ಬರೆದ 'ಮ್ಯಾಜಿಸ್ಟ್ರೇಟರ ಕ್ರಿಮಿನಲ್ ಪ್ರೊಸೀಜರ್ ಕೋಡಿನ ಕೈಪಿಡಿ', ಕಿಲಪಾಡಿ ಕೃಷ್ಣರಾವ್ ಬರೆದ 'ದಕ್ಷಿಣ ಕನ್ನಡ ಗ್ರಾಮ ಉದ್ಯೋಗಸ್ಥರ ಕಾನೂನುಗಳ ಸಂಗ್ರಹವು' ಬೆಳಗಾವಿ ನಾರಾಯಣ ಭಾಸ್ಕರ ಕಾರಕೂನ 1877ರಲ್ಲಿ ಬರೆದ 'ಪೋಲೀಸು ವಿಷಯದ ಪುಸ್ತಕವು' – ಇಂತಹ ಹಲವಾರು ಕನ್ನಡ ಕಾನೂನು ಗ್ರಂಥಗಳು ಒಂದು ಕಾಲಘಟ್ಟದಲ್ಲಿ ಬೆಳೆದು ಬಂದಿವೆ.
- ಇಂದು ಅನೇಕ ನಿವೃತ್ತ ನ್ಯಾಯಾಧೀಶರುಗಳು ಕಾನೂನು ಕನ್ನಡವನ್ನು ಬಲಪಡಿಸಿದ್ದಾರೆ. ಸಿ.ಕೆ.ಎನ್.ರಾಜರವರ 'ಸಂವಿಧಾನ ರಚನಾ ಇತಿಹಾಸ' ಬೆಂಜಮಿನ್ ರವರ ನ್ಯಾಯಿಕ ಪ್ರಕ್ರಿಯೆಯ ಸ್ವರೂಪ ಶ್ರೇಷ್ಠ ಕಾನೂನು ಕನ್ನಡ ಗ್ರಂಥಗಳಾಗಿವೆ.

- **1970ರ ದಶಕದಿಂದ ಕರ್ನಾಟಕದ ಅಧಿನಿಯಮಗಳು ಮತ್ತು ಉಪನಿಯಮಗಳು ಕನ್ನಡದಲ್ಲಿ ಹೊರಬಂದಿವೆ.**
- **ಲೇಖಕರಾದ ಡಾ.ಪಿ.ಈಶ್ವರ ಭಟ್ಟ್‌ರು ಹೇಳುವಂತೆ 'ವಕೀಲಿ ವೃತ್ತಿಯೂ ಭಾಷೆಯ ಗಡಿಯನ್ನು ಮೀರಿದ ವೃತ್ತಿಯಾಗಿದೆ. ಕಾನೂನಿಗೆ ಸಂಬಂಧಿಸಿದ ವಿದ್ವತ್‌ಪೂರ್ಣವಾದ ಬೃಹತ್‌ಗ್ರಂಥಗಳು ಮತ್ತು ಸಂಶೋಧನಾ ಪೂರ್ವಕ ಗ್ರಂಥಗಳು ಒಂದು ಕಾಲದಲ್ಲಿ ಇಂಗ್ಲೀಷದಲ್ಲಿದ್ದವು ಇಂದು ಅವುಗಳನ್ನು ಕನ್ನಡದಲ್ಲಿ ಓದಬಹುದು. ಕನ್ನಡ ಸಾವಿರಾರು ಕಾನೂನಿಗೆ ಸಂಬಂಧಿಸಿದ ಗ್ರಂಥಗಳ ಭಂಡಾರವೇ ಇಂದು ರಚನೆಗೊಂಡಿದೆ'. ಎಂಬ ಸರ್ವವಿಧಿತವಾಗಿದೆ. ಇಂದು ಹಲವು ಸಿವಿಲ್ ತೀರ್ಪುಗಳನ್ನು ಕನ್ನಡದಲ್ಲಿಯೇ ನ್ಯಾಯಾಧೀಶರು ನೀಡುತ್ತಿರುವುದು ಒಂದು ಭಾಷೆಯ ಬೆಳವಣಿಗೆಗೆ ಸಾಕ್ಷಿಯಾಗಿ ನಿಂತಿವೆ.**
- **ಇಂದು ಕನ್ನಡದಲ್ಲಿ ಕೃಷಿಸಾಹಿತ್ಯ, ವಿಜ್ಞಾನ ಸಾಹಿತ್ಯ, ವೈದ್ಯಸಾಹಿತ್ಯ, ವ್ಯವಾಹರಿಕ ಸಾಹಿತ್ಯ, ತಾಂತ್ರಿಕ ಸಾಹಿತ್ಯಗಳು ಹೇರಳವಾಗಿ ಬೆಳೆದು ನಿಂತಿವೆ. ಅಂತೆಯೇ ಆ ಸಾಲಿನಲ್ಲಿ ಕಾನೂನು ಕನ್ನಡ ಸಾಹಿತ್ಯವೂ ಬೆಳೆದುನಿಂತಿರುವುದು ಕನ್ನಡಿಗರು ಹೆಮ್ಮೆಪಡಬೇಕಾದ ಸಂಗತಿ ಅಲ್ಲವೇ!**

# IV ಕಾನೂನು ಪತ್ರ ವ್ಯವಹಾರ

## 1. ಮಾಲೀಕ ಮತ್ತು ನೌಕರರ ನಡುವಿನ ಕರಾರು ಪತ್ರ:

ಇದು ಮಾಲೀಕ ಮತ್ತು ನೌಕರರ ನಡುವೆ ನಡೆಯುವ ಪತ್ರ ವ್ಯವಹಾರವಾಗಿದೆ. ಈ ಪತ್ರಗಳ ಕರಾರಿನ ಷರತ್ತುಗಳು ಸಂಬಂಧಿಸಿದ ಕಂಪನಿ ಅಥವಾ ಸಂಸ್ಥೆಯ ಕಾರ್ಯನೀತಿಯ ಪ್ರಕಾರ ರೂಪಿಸಲ್ಪಟ್ಟಿರುತ್ತದೆ. ಈ ಕರಾರಿನಲ್ಲಿ ನೌಕರನು ತನ್ನ ಷರತ್ತುಗಳನ್ನು ಸೇರಿಸುವ ಸ್ವಾತಂತ್ರ್ಯ ಇರುವುದಿಲ್ಲ.

ಲಕ್ಷಣಗಳು:

- ಈ ಕರಾರಿನ ಪತ್ರದಲ್ಲಿ ನೇಮಕಾತಿಯ ಷರತ್ತುಗಳನ್ನು ಸರಿಯಾಗಿ ನಮೂದಿಸಬೇಕು.
- ನೌಕರನ ಜವಾಬ್ದಾರಿಗಳೇನು ಎಂಬುದು ಸ್ಪಷ್ಟವಾಗಿ ತಿಳಿಸಬೇಕು.
- ಅವನ ಕೆಲಸ ಸಮಯ, ವೇತನ ಮತ್ತು ಇತರೆ ಸೌಲಭ್ಯಗಳ ಬಗ್ಗೆ ಸ್ಪಷ್ಟತೆ ಇರಬೇಕು.
- ಅಷ್ಟೇ ಅಲ್ಲದೆ ಯಾವ ಸಂದರ್ಭದಲ್ಲಿ ಮಾಲೀಕನು ಅವನನ್ನು ಕೆಲಸದಿಂದ ತೆಗೆದುಹಾಕಬಹುದು ಅಥವಾ ನೌಕರನು ಕೆಲಸ ಬಿಡುವಾಗ ನೀಡಬೇಕಾದ ನೋಟೀಸಿನ ವಿವರ/ಇತ್ಯಾದಿ ಮಾಹಿತಿ ಇರಬೇಕು.
- ನೌಕರನನ್ನು ಕೆಲಸದಿಂದ ವಜಾಗೊಳಿಸಿದ್ದಾದಲ್ಲಿ ಅವನಿಗೆ ಸಿಗುವ ಸೌಲಭ್ಯಗಳನ್ನು ನಮೂದಿಸಿರಬೇಕು.

## 2. ಬಾಡಿಗೆ ಕರಾರು ಪತ್ರಗಳು:

ಸ್ಥಿರ ಸ್ವತ್ತು, ಕಟ್ಟಡ, ಕೃಷಿಯೇತರ ಭೂಮಿಗಳು ಬಾಡಿಗೆ ಕರಾರಿನ ವಸ್ತುವಾಗುತ್ತವೆ. ಯಾವುದೇ ಕರಾರಿನಂತೆ ಬಾಡಿಗೆ ಕರಾರು ಕೂಡ ಪಕ್ಷಕಾರರ ವಿವರಗಳು, ಬಾಡಿಗೆ ಅವಧಿ, ಷರತ್ತುಗಳು, ಕರಾರಿಗೊಳಪಟ್ಟ ಸ್ವತ್ತಿನ ವಿವರಗಳನ್ನು ಒಳಗೊಂಡಿರುತ್ತದೆ.

ಮುಖ್ಯಾಂಶಗಳು:

- ಬಾಡಿಗೆ ಪತ್ರದಲ್ಲಿ ಜಾರಿಗೆಯಾಗುವ ದಿನಾಂಕ ನಮೂದಾಗಿರಬೇಕು.
- ತಿಂಗಳ ಬಾಡಿಗೆ ಹಣದ ಕುರಿತು ಸ್ಪಷ್ಟವಾದ ವಿವರಗಳು ಇರಬೇಕು.
- ಬಾಡಿಗೆಯನ್ನು ಸ್ವೀಕರಿಸಿದ ಹಾಗೂ ಅದಕ್ಕೆ ರಸೀದಿ ಪಡೆಯುವ ವಿವರಗಳು ಇರಬೇಕು.
- ಬಾಡಿಗೆಯವರು ವಾಸ್ತವ್ಯದ ಉದ್ದೇಶಕ್ಕೆ ಮಾತ್ರ ಬಳಸತಕ್ಕದ್ದು, ಇತರ ಉದ್ದೇಶಗಳಿಗೆ ಬಳಸುವುದಾಗಲೀ ಇತರರಿಗೆ ಒಳಬಾಡಿಗೆಗೆ ಕೊಡುವುದಾಗಲೀ ಅವಕಾಶವಿರುವುದಿಲ್ಲ.
- ಮಾಲೀಕರ ಪರವಾನಿಗೆ ಇಲ್ಲದೆ ದುರಸ್ತಿ ಅಥವಾ ವಿಸ್ತರಣೆ ಮಾಡುವ ಹಕ್ಕು ಎರಡನೇ ಅವರಿಗೆ ಇರುವುದಿಲ್ಲ.
- ಮನೆಯ ಬಾಬ್ತು ನೀರಿನ ಬಿಲ್ಲನ್ನು ಮತ್ತು ಕರೆಂಟ್ ಬಿಲ್ಲನ್ನು ಎರಡನೇಯವರೇ ಪಾವತಿಸಬೇಕು ಎಂಬ ವಿವರ ಇರಬೇಕು.

- ಮೇಲಿನ ಎಲ್ಲಾ ಷರತ್ತುಗಳಿಗೂ ಒಪ್ಪಿ ಪಕ್ಷಕಾರರು ಸಹಿ ಮಾಡಿದ್ದು, ಇದರ ಶರ್ತಗಳಿಗೆ ತಪ್ಪಿ ನಡೆದಲ್ಲಿ ಕಾನೂನು ಪ್ರಕಾರ ನ್ಯಾಯ ಪರಿಹಾರ ಪಡೆಯಲು ಹಕ್ಕಿರುತ್ತದೆ.

### 3 ಸಾಲದ ಕರಾರು ಪತ್ರ:

ಒಬ್ಬ ಸಾಲಿಗ ಇನ್ನೊಬ್ಬನಿಗೆ ಸಾಲ ನೀಡಿರುತ್ತಾನೆ, ಇದಕ್ಕೆ ಸಂಬಂಧಿಸಿದಂತೆ ಇಬ್ಬರೂ ಸಾಲದ ಕರಾರು ಮಾಡಿಕೊಳ್ಳುತ್ತಾರೆ. ಮರುಪಾವತಿಯಲ್ಲಿ ಯಾವುದೇ ತೊಂದರೆ ಆಗಬಾರದೆಂದು ಸಾಲಿಗ ಮತ್ತು ಸಾಲಗಾರರು ವಿಧ್ಯುಕ್ತವಾಗಿ ಮಾಡಿಕೊಳ್ಳುವ ಒಪ್ಪಂದವೇ ಸಾಲದ ಕರಾರು ಪತ್ರ ಎನಿಸಿಕೊಂಡಿದೆ.

1. ಸದರಿ ಸಾಲಗಾರನು ಸದರಿ ಸಾಲದ ಮರುಪಾವತಿ ಮಾಡಬೇಕು ಎಂದು ಸಾಲಿಗನು ಕೇಳಿದ ತಕ್ಷಣ ಪಾವತಿ ಮಾಡತಕ್ಕದ್ದು

2. ಸಾಲಿಗನಿಗೆ ಸದರಿ ಸಾಲ ಅಥವಾ ಸಾಲಗಳ ಮೇಲೆ ಕಾಲದಿಂದ ಕಾಲಕ್ಕೆ ನಿರ್ಧರಿಸಿ ವಿಧಿಸಬಹುದಾದ ಬಡ್ಡಿಗಳನ್ನು, ಶುಲ್ಕಗಳನ್ನು, ಖರ್ಚುಗಳನ್ನು ಮತ್ತು ಎಲ್ಲಾ ಪ್ರಭಾರಗಳನ್ನು ಕೂಡ ಪಾವತಿ ಮಾಡಲು ಸದರಿ ಸಾಲಗಾರ ಬದ್ಧನಾಗಿರುತ್ತಾನೆ. ಸಾಲಿಗ ಬಯಸಿದಾಗ ಮತ್ತು ಬಯಸಿದ ರೀತಿಯಲ್ಲಿ ಆ ಸಾಲಗಾರ ಪಾವತಿ ಮಾಡತಕ್ಕದ್ದು ಅಥವಾ ಸಾಲಿಗನ ಒಪ್ಪಿಗೆಯಂತೆ ನಿಗದಿಯಾದ ಕಂತುಗಳ ರೂಪದಲ್ಲಿ ಪಾವತಿಮಾಡತಕ್ಕದ್ದು.

3. ಸಾಲಿಗನ ಇತರ ಅಧಿಕಾರ ಪರಿಹಾರೋಪಾಯಗಳಿಗೆ ಪ್ರತಿಕೂಲವಾಗದ ರೀತಿಯಲ್ಲಿ ಸಾಲಗಾರನು ನಡೆದುಕೊಳ್ಳುತ್ತೇನೆಂದು ಒಪ್ಪಿಕೊಂಡಿರುತ್ತಾನೆ.

### 4 ಕ್ರಯ ಪತ್ರ:

ಜಮೀನು ಹಾಗೂ ಆಸ್ತಿಗೆ ಸಂಬಂಧಿಸಿದ ಕಾಗದ ಪತ್ರ ವ್ಯವಹಾರಗಳನ್ನು ಕ್ರಯಪತ್ರ ಎಂದು ಕರೆಯಲಾಗುತ್ತದೆ. ಇವುಗಳು ವಿಶಿಷ್ಟ ಮಾದರಿಯನ್ನು ಹೊಂದಿದ್ದು ನ್ಯಾಯಾಲಯದ ನಿಯಮಗಳಿಗೆ ಅನುಸಾರವಾಗಿ ರೂಪಿತಗೊಂಡಿರುತ್ತವೆ. ಆಸ್ತಿಗೆ ಸಂಬಂಧಿಸಿ ಸಮಗ್ರವಾದ ವಿವರಗಳನ್ನು ಹೊಂದಿರುವ ಈ ಪತ್ರ ವ್ಯವಹಾರವು ಕ್ರಯ ಕೊಡುವವನಿಗೂ ಹಾಗೂ ತೆಗೆದುಕೊಳ್ಳುವವನಿಗೂ ಯಾವುದೇ ರೀತಿಯ ತಂಟೆ ತಕಾರರು ಇಲ್ಲದಂತೆ ನಿಯಮಗಳನ್ನು ಬರೆಯಲಾಗಿರುತ್ತದೆ. ಈ ಪತ್ರವು ಒಂದು ನಿರ್ದಿಷ್ಟ ಚೌಕಟ್ಟನ್ನು ಹೊಂದಿದ್ದು ಕಾನೂನಿನ ನಿಬಂಧನೆಗೆ ಒಳಪಟ್ಟಿರುತ್ತದೆ.

### 5 ವಿಭಾಗ / ಪಾಲು ವಿಂಗಡಣಾ ಪತ್ರ:

ಅವಿಭಕ್ತ ಕುಟುಂಬದ ಅಥವಾ ಜಂಟಿ ಹಕ್ಕಿನ ಆಸ್ತಿಗಳನ್ನು ಹಕ್ಕುದಾರರು ವಿಭಾಗಪತ್ರದ ಮೂಲಕ ವಿಭಾಗಿಸಿಕೊಳ್ಳುತ್ತಾರೆ. ವಿಭಾಗ ಪತ್ರದಲ್ಲಿ ಪಕ್ಷಕಾರರ ವಿವರಗಳು, ಹಕ್ಕು ಪ್ರಾಪ್ತವಾದ ಬಗ್ಗೆ ವಿವರಣೆ, ಯಾವ ಪಕ್ಷಕಾರರಿಗೆ ಯಾವ ಹಿಶೆ ಮತ್ತು ಹಿಶೆ ಪಡೆಯದೇ ಹಕ್ಕು ಖುಲಾಸು ಮಾಡಿದ್ದಲ್ಲಿ ಆ ಬಗ್ಗೆ ವಾಚಕಗಳು, ಮೂಲಪ್ರತಿ ಮತ್ತು ಯಥಾಪ್ರತಿಗಳನ್ನು ತಯಾರಿಸಿದ ವಿವರ ಮತ್ತು ಹಿಶೆಗಳ ವಿವರಗಳನ್ನು ಒಳಗೊಂಡಿರುತ್ತದೆ.

ಈ ವಿಭಾಗಪತ್ರಗಳು ಸರಕಾರ ಹೊರಡಿಸಿದ ಮತ್ತು ಜಾರಿಯಲ್ಲಿರುವ ಯಾವುದೇ ಶಾಸನಗಳಿಗೆ ಕಾನೂನು ಅಧಿಸೂಚನೆ ಪ್ರಕಟನೆಗಳಿಗೆ ಮತ್ತು ಸಾರ್ವಜನಿಕ ಹಿತಾಸಕ್ತಿಗೆ ಮತ್ತು ಸರಕಾರಿ ಆದೇಶಕ್ಕೆ ವಿರೋಧವಾಗಿರುವುದಿಲ್ಲ ಎನ್ನುವುದನ್ನು ಗಮನಿಸಬೇಕು.

## 6 ಅಧಿಕಾರ ಪತ್ರ/ ಪವರ್ ಆಫ್ ಅಟಾರ್ನಿ 'ಮೊಕ್ತ್ಯಾರು ನಾಮೆ

ಇದು ಒಬ್ಬ ವ್ಯಕ್ತಿಯ ಇನ್ನೊಬ್ಬ ವ್ಯಕ್ತಿಗೆ ತನ್ನ ಪರವಾಗಿ ಕೆಲಸಗಳನ್ನು ಮಾಡಲು ಭಾರತೀಯ ಕರಾರು ಕಾಯಿದೆಯನ್ವಯ ತನ್ನ ಏಜೆಂಟನಾಗಿ ನಿಯುಕ್ತಿಗೊಳಿಸುವ ದಾಖಲೆಯಾಗಿದೆ.

ಇದರಲ್ಲಿ ಒಂದು ನಿರ್ದಿಷ್ಟ ಕೆಲಸಕ್ಕೆ ಅಧಿಕಾರ ನೀಡಿದರೆ ಅದು ವಿಶೇಷ ಮೊಕ್ತ್ಯಾರು ನಾಮೆ ಎಂದೂ, ಒಂದರಿಂದ ಹೆಚ್ಚು ಕೆಲಸಗಳನ್ನು ನಿರ್ವಹಿಸಲು ಅಧಿಕಾರ ನೀಡಿದರೆ ಸಾಮಾನ್ಯ ಮೊಕ್ತ್ಯಾರು ನಾಮೆ ಎಂದೂ, ಕರೆಯಲ್ಪಡುತ್ತದೆ. ನ್ಯಾಯಾಲಯದ ಅಥವಾ ಸರ್ಕಾರದ ನಿಗದಿತ ಮುದ್ರಾಂಕ ಶುಲ್ಕದ ಪತ್ರದಲ್ಲಿ ಬರೆದು ಅಥವಾ ಟೈಪ್ ಮಾಡಿ ನೋಟರಿ ಅಥವಾ ನ್ಯಾಯಾಲಯದಲ್ಲಿ ಅಟೆಸ್ಟ್ ಮಾಡಬೇಕಾಗುತ್ತದೆ.

## 7 ನೋಟೀಸು :

ನೋಟೀಸು ಒಂದು ಔಪಚಾರಿಕ ಪತ್ರವ್ಯಹಾರವಾಗಿದೆ. ನೋಟೀಸಿನ ಮುಖಾಂತರ ಒಬ್ಬ ವ್ಯಕ್ತಿಯು ಮತ್ತೊಬ್ಬ ವ್ಯಕ್ತಿಯನ್ನು ತಮ್ಮ ನಡುವಿನ ಸಮಸ್ಯೆಯನ್ನು ಬಗೆಹರಿಸಿಕೊಳ್ಳಲು ಕರೆ ನೀಡುತ್ತಾನೆ. ತಪ್ಪಿದಲ್ಲಿ ಆ ವ್ಯಕ್ತಿಯ ವಿರುದ್ಧ ಕಾನೂನಾತ್ಮಕ ಕ್ರಮ ಜರುಗಿಸುವ ತನ್ನ ಉದ್ದೇಶವನ್ನು ಸ್ಪಷ್ಟಪಡಿಸುತ್ತಾನೆ. ಸಾಮಾನ್ಯವಾಗಿ ಕಕ್ಷಿದಾರರ ನಿರ್ದೇಶನದ ಮೇರೆಗೆ ವಕೀಲರು ನೋಟೀಸನ್ನು ನೀಡುತ್ತಾರೆ.

ನೋಟೀಸಿನ ಮುಖ್ಯ ಅಂಶಗಳು:

- ವಕೀಲರ ಮೂಲಕ ನೋಟೀಸನ್ನು ಕೊಡುವುದರಿಂದ ಯಾರು ನೋಟೀಸ್ ನೀಡುತ್ತಿದ್ದಾರೆಂದು ಸ್ಪಷ್ಟವಾಗಿ ತಿಳಿಸಿರಬೇಕು.
- ಯಾರ ವಿರುದ್ಧ ನೋಟೀಸ್ ನೀಡಲಾಗುತ್ತಿದೆಯೋ ಅವರ ಹೆಸರು ಮತ್ತು ವಿಳಾಸ, ದಿನಾಂಕ ಸರಿಯಾಗಿ ನಮೂದಿಸಿರಬೇಕು.
- ಯಾವ ವಿಷಯದ ಕುರಿತು ನೋಟೀಸ್ ನೀಡಲಾಗುತತಿದೆ ಎಂಬುದನ್ನು ಸ್ಪಷ್ಟವಾಗಿ ನಮೂದಿಸಿರಬೇಕು.
- ವಿವಾದದ ಅಂಶವನ್ನು ಸ್ಪಷ್ಟವಾಗಿ ಮತ್ತು ಸಂಕ್ಷಿಪ್ತವಾಗಿ ವಿವರಿಸಬೇಕು.
- ಕೊನೆಯ ಪ್ಯಾರಾದಲ್ಲಿ ಎಷ್ಟು ದಿನದ ಕಾಲಮಿತಿಯಲ್ಲಿ ಸದರಿ ನೋಟೀಸಿಗೆ ಉತ್ತರವನ್ನು ನೀಡಬೇಕು ಅಥವಾ ವಿವಾದವನ್ನು ಬಗೆಹರಿಸಿಕೊಳ್ಳಬೇಕು ಎಂಬುದನ್ನು ತಿಳಿಸಿರಬೇಕು.
- ತಪ್ಪಿದಲ್ಲಿ ಕಾನೂನಿನನ್ವಯ ಕ್ರಮ ಜರುಗಿಸುವ ಬಗೆಗಿನ ಅಂಶವನ್ನೂ ತಿಳಿಸಿರಬೇಕು.
- ಕೊನೆಗೆ ನೋಟೀಸ್ ನೀಡುವ ವಕೀಲರ ಹಸ್ತಾಕ್ಷರವಿರಬೇಕು.

# 4. ಭಾಷಾಂತರ

ಒಂದು ಭಾಷೆಯಿಂದ ಮತ್ತೊಂದು ಭಾಷೆಗೆ ಸಮರ್ಥವಾದ ರೀತಿಯಲ್ಲಿ ವರ್ಗಾಯಿಸುವ ಕಲೆಯೇ ಭಾಷಾಂತರ.

ಮೂಲ ಕೃತಿಯನ್ನು ಓದಿದವರ ಮನಸ್ಸಿನ ಮೇಲೆ ಯಾವ ಪರಿಣಾಮವಾಗುವುದೋ ಅದೇ ಪರಿಣಾಮ ಭಾಷಾಂತರವನ್ನು ಓದಿದವರ ಮೇಲೂ ಆಗುವುದಾದರೆ ಅದನ್ನು ಯಶಸ್ವೀ ಭಾಷಾಂತರವೆನ್ನಬಹುದು.

ಭಾಷಾಂತರಕ್ಕೆ ಅನುವಾದ ಎಂಬ ಪರ್ಯಾಯ ಪದವೂ ರೂಢಿಯಲ್ಲಿದೆ.

ಇಂದು ಎಲ್ಲ ಕ್ಷೇತ್ರಗಳಲ್ಲಿಯೂ ಭಾಷಾಂತರವು ಒಂದು ಸಂವಹನ ಮಾಧ್ಯಮವಾಗಿ ಕಾರ್ಯನಿರ್ವಹಿಸುತ್ತಿದೆ.

ಭಾಷಾಂತರವು ಒಂದು ಕಲೆ. ಅನುವಾದನಿಗೆ ಎರಡು ಭಾಷೆಗಳ ಮೇಲೆ ಪ್ರಭುತ್ವ ಇರಬೇಕು. ಅಂದಾಗ ಭಾಷಾಂತರ ಕ್ರಿಯೆ ಸಮರ್ಥವಾಗುವುದು.

<u>ಭಾಷಾಂತರದ ಪ್ರಕಾರಗಳು:</u>

**1. ಪದಶಃ ಅನುವಾದ:**

ಮೂಲಕ್ಕೆ ಅತ್ಯಂತ ನಿಷ್ಠವಾಗಿ ಮಾಡುವ ಅನುವಾದವೇ ಪದಶಃ ಅನುವಾದವೆನಿಸಿಕೊಂಡಿದೆ. ಶಾಸ್ತ್ರ ಗ್ರಂಥಗಳು, ಕಾನೂನಿಗೆ ಸಂಬಂಧಿಸಿದ ನೀತಿ ನಿಬಂಧನೆಗಳು, ಆಡಳಿತ ಸಂಬಂಧಿ ಆದೇಶಗಳು ಮುಂತಾದವುಗಳನ್ನು ಅನುವಾದಿಸುವಾಗ ಈ ವಿಧಾನವನ್ನು ಬಳಸಲಾಗುತ್ತಿದೆ. ಇಲ್ಲಿ ಅನುವಾದಕನ ಸ್ವಂತ ಕಲ್ಪನೆಗಾಗಲೀ ಅಥವಾ ಅಭಿಪ್ರಾಯಗಳಿಗಾಗಲೀ ಅವಕಾಶವಿಲ್ಲ.

**2. ಸರಳಾನುವಾದ:**

ಸರಳವಾದ ಭಾಷೆಯಲ್ಲಿ ಮೂಲದ ವಸ್ತು, ರೀತಿ ಮತ್ತು ಶೈಲಿಯನ್ನು ಮತ್ತೊಂದು ಭಾಷೆಗೆ ವರ್ಗಾಯಿಸುವ ಈ ಪ್ರಕಾರವನ್ನು ಇಂಗ್ಲೀಷ್‌ನಲ್ಲಿ ಬೆಸಿಕ್ ಟ್ರಾನ್ಸಲೇಷನ್ ಎಂದು ಕರೆಯಲಾಗುತ್ತದೆ. ತಾಂತ್ರಿಕ ವಿವರಗಳ ಜಟಿಲತೆ, ಪಾರಿಭಾಷಿಕ ಶಬ್ದಗಳ ಮುಂತಾದವುಗಳನ್ನು ಕಡಿಮೆ ಮಾಡಿ ಓದುಗರಿಗೆ ಸುಲಭವಾಗಿ ಅರ್ಥವಾಗುವ ರೀತಿಯಲ್ಲಿ ಈ ಅನುವಾದವನ್ನು ಮಾಡುವುದು.

**3. ಸಂಗ್ರಹಾನುವಾದ:**

ಮೂಲ ಬರಹದಲ್ಲಿ ಅನಪೇಕ್ಷಿತವಾದ ಅಥವಾ ಓದುಗರಿಗೆ ಅಗತ್ಯವಲ್ಲದ ವಿಷಯಗಳನ್ನು ಹೊರತುಪಡಿಸಿ ಮಾಡುವ ಅನುವಾದ ಸಂಗ್ರಹಾನುವಾದ. ಈ ರೀತಿ ಸಂಕ್ಷೇಪಗೊಳಿಸುವ ಪ್ರಕ್ರಿಯೆಯಲ್ಲಿ ಮೂಲಬರಹದ ಪ್ರಮುಖ ಅಂಶಗಳಾವುವೂ ಬಿಟ್ಟುಹೋಗದಂತೆ ಗಮನವಹಿಸಬೇಕಾಗುತ್ತದೆ.

## 4.ವಿಸ್ತೃತಾನುವಾದ:

ಮೂಲಬರಹಕ್ಕೆ ಪೂರಕವಾದ ಹೆಚ್ಚಿನ ವಿವರಗಳನ್ನು ಸೇರಿಸಿ ಮಾಡುವ ಅನುವಾದವೇ ವಿಸ್ತೃತಾನುವಾದವೆನಿಸಿಕೊಂಡಿದೆ. ಮೂಲ ಬರಹವು ಬಹಳ ತಾಂತ್ರಿಕವಾಗಿದ್ದು ಮತ್ತು ಸಾಮಾನ್ಯ ಓದುಗರಿಗೆ ಅರ್ಥವಾಗುವುದು ಕಷ್ಟವೆನಿಸಿದಾಗ ಪೂರಕವಾದ ಉದಾಹರಣೆಗಳೂ, ವಿವರಣೆಗಳು ಹಾಗೂ ಹೆಚ್ಚಿನ ಮಾಹಿತಿಗಳನ್ನು ಸೇರಿಸುವ ಮೂಲಕ ಅದನ್ನು ಓದುಗಸ್ನೇಹಿಯನ್ನಾಗಿ ಮಾಡಬೇಕಾಗಬಹುದು.

## 5. ಭಾವಾನುವಾದ ಅಥವಾ ಸ್ವತಂತ್ರ ಅನುವಾದ:

ಮೂಲ ರಚನೆಯನ್ನು ಓದಿ ಆಸ್ವಾದಿಸಿದ ಅನುವಾದಕ ಆ ಕೃತಿಯ ಸೊಬಗು ತನ್ನ ಭಾಷೆಯ ಓದುಗರಿಗೂ ತಿಳಿಯಲೆಂಬ ಉದ್ದೇಶದಿಂದ ಅದರ ಭಾವವನ್ನು ತನ್ನದೇ ಆದ ಶೈಲಿಯಲ್ಲಿ ಅನುವಾದಿಸಿದರೆ ಅದು ಭಾವಾನುವಾದ ಅಥವಾ ಸ್ವತಂತ್ರ ಅನುವಾದ ಎನಿಸಿಕೊಳ್ಳುವುದು. ಈ ಬಗೆಯ ಭಾಷಾಂತರದಲ್ಲಿ ಅನುವಾದಕನಿಗೆ ಕೃತಿಯ ಮೂಲ ಆಶಯವಷ್ಟೇ ಮುಖ್ಯ. ಅವನು ಇಲ್ಲಿ ಪದಶಃ ಅನುವಾದಕ್ಕೆ ಕೈಹಾಕಬೇಕಿಲ್ಲ. ಅಗತ್ಯವಿರುವ ವಿಷಯವನ್ನಷ್ಟೇ ಎತ್ತಿಕೊಂಡು ಅನುವಾದ ಮಾಡಬಹುದು.

## 6. ರೂಪಾಂತರ:

ತನ್ನ ಸಂಸ್ಕೃತಿಗಿಂತ ಸಂಪೂರ್ಣವಾಗಿ ಭಿನ್ನವಾದ ಬೇರೊಂದು ಸಂಸ್ಕೃತಿಯ ಬರಹವನ್ನು ತನ್ನ ನೆಲದ ಜಾಯಮಾನಕ್ಕೆ ಒಗ್ಗುವಂತೆ ಬದಲಾಯಿಸಿಕೊಂಡು ಮಾಡುವ ಅನುವಾದವೇ ರೂಪಾಂತರ. ಒಂದು ಸಂಸ್ಕೃತಿಯ ಪರಂಪರೆಯ ಜ್ಞಾನವಿದ್ದರೆ ಅನುವಾದಕ್ಕೆ ಅನುಕೂಲವಾಗುವುದು. ಅಂತೆಯೆ ಈ ರೀತಿಯ ರೂಪಾಂತರದಿಂದ ಒಂದು ಭಾಷೆಯ ಸಂಸ್ಕೃತಿಯನ್ನು ತಿಳಿದುಕೊಳ್ಳಲು ಅನುಕೂಲವಾಗುವುದು.

## ಆದರ್ಶ ಭಾಷಾಂತರಕಾರನ ಅರ್ಹತೆಗಳು ಮತ್ತು ಲಕ್ಷಣಗಳು:

1. ಒಂದು ಭಾಷೆಯಿಂದ ಮತ್ತೊಂದು ಭಾಷೆಗೆ ಅನುವಾದ ಮಾಡಲು ಶಕ್ತನಾಗಿರಬೇಕು.

2. ಅನುವಾದ ಮೂಲಕ್ಕೆ ನಿಷ್ಠನಾಗಿರಬೇಕು.

3. ತನ್ನ ಭಾಷೆಯ ಮರ್ಜಿ, ಮರ್ಯಾದೆಗಳನ್ನೂ ಗಮನಿಸಬೇಕು.

4. ಅನುವಾದಕನಿಗೆ ವಿಷಯದ ಪರಿಜ್ಞಾನ ವಿರಬೇಕು.

5. ಭಾಷಾಂತಕಾರನಿಗೆ ನಿರಂತರವಾದ ಬೌದ್ಧಿಕ ಜಾಗೃತಿಬೇಕಾಗುತ್ತದೆ.

6. ಅಪಾರವಾದ ಓದುವಿಕೆ, ಸತತ ಅಭ್ಯಾಸ, ಪ್ರತಿಭೆ, ವಿದ್ವತ್, ವಿನಯ, ತಾಳ್ಮೆ, ಶ್ರಮಸಹಿಷ್ಣುತೆ, ಲೋಕಾನುಭವ, ಸಂಸ್ಕೃತಿಯ ಜ್ಞಾನವಿರಬೇಕು.

## ಭಾಷಾಂತರದ ಪ್ರಯೋಜನಗಳು:

1. ವೇಗವಾಗಿ ಬೆಳೆಯುತ್ತಿರುವ ವಿಶ್ವದಲ್ಲಿ ಹಲವಾರು ಸಂಶೋಧನೆಗಳು ನಡೆಯುತ್ತಿವೆ. ಅವುಗಳ ವಿನಮಯಕ್ಕೆ ಅನುವಾದ ಒಂದು ಬಹುಮೂಲ್ಯ ಪ್ರಕ್ರಿಯೆಯಾಗಿದೆ.

2. ಜಗತ್ತಿನ ಯಾವ ಭಾಗದಲ್ಲಿ ಯಾವ ವಿಷಯದಲ್ಲಿ ಏನು ಸಾಧನೆಯಾಗಿದೆ ಎಂಬುದನ್ನು ಅರಿಯಲು ವಿಜ್ಞಾನಿಗಳು ಭಾಷಾಂತರದ ಮೊರೆ ಹೋಗುತ್ತಿದ್ದಾರೆ.

3. ಭಾಷಾಂತರದಿಂದ ಯಾವುದೇ ಭಾಷೆ ಬೆಳೆಯುತ್ತದೆ.

4. ಅನ್ಯಭಾಷೆಗಳ ಕೃತಿಗಳು ನಮ್ಮ ಭಾಷೆಗೆ ಬಂದಾಗ ನಮ್ಮ ಕೃತಿಗಳನ್ನು ಅವುಗಳೊಂದಿಗೆ ಹೋಲಿಸಿನೋಡಬಹುದು.

5. ಅನುವಾದಕನಿಗೆ ಆರ್ಥಿಕವಾಗಿಯೂ ಅನುಕೂಲವಾಗುತ್ತದೆ.

6. ಎರಡು ಭಾಷೆಗಳ ನಡುವೆ ಕೊಡುಕೊಳ್ಳುವಿಕೆಗೆ ದಾರಿಯಾಗುತ್ತದೆ.

7. ರಾಷ್ಟ್ರೀಯ ಅಂತರಾಷ್ಟ್ರೀಯ ಸಂಬಂಧಗಳಿಗೆ ವ್ಯಾಪಾರಗಳಿಗೆ ಭಾಷಾಂತರವು ವಾಹಕವಾಗುತ್ತದೆ.

## ಅನುವಾದಕ ಗಮನಿಸಬೇಕಾದ ಪ್ರಮುಖ ಅಂಶಗಳು:

1. ಒಂದು ಭಾಷೆಯಲ್ಲಿಯ ವ್ಯಾಕರಣ ಹಾಗೂ ವಾಕ್ಯ ರಚನೆಯನ್ನು ತಿಳಿದುಕೊಳ್ಳಬೇಕು. ಕರ್ತೃ, ಕ್ರಿಯಾ ಮತ್ತು ಕರ್ಮಣೀ ಪ್ರಯೋಗಗಳು ವಿಭಿನ್ನವಾಗಿರುವುದನ್ನು ಅರಿಯಬೇಕು.

2. ಒಂದು ಭಾಷೆಯ ನುಡಿಗಟ್ಟು, ಗಾದೆ ಮುಂತಾದವುಗಳನ್ನು ಗಮನಿಸಬೇಕು.

3. ಅಗತ್ಯ ಬಿದ್ದಲ್ಲಿ ಸಂಯುಕ್ತ ವಾಕ್ಯಗಳನ್ನು ಅರ್ಥಸ್ಪಷ್ಟತೆಗಾಗಿ ಸರಳ ವಾಕ್ಯಗಳಾಗಿ ಬಿಡಿಸಿಕೊಂಡು ಭಾಷಾಂತರಿಸಬೇಕು.

## ಕಾನೂನು ಭಾಷಾಂತರದ ಸವಾಲುಗಳು:

- ಕಾನೂನು ಸಂಬಂಧಿ ಸಾಹಿತ್ಯವನ್ನು ಭಾಷಾಂತರಿಸುವುದು ಸುಲಭವಾದ ಕಾರ್ಯವಲ್ಲ. ಕಾನೂನು ಮತ್ತು ಸಂವಿಧಾನಕ್ಕೆ ಸಂಬಂಧಿಸಿದ ಖಚಿತವಾದ ಜ್ಞಾನ ಮತ್ತು ಹಲವು ವರ್ಷಗಳ ಸತತವಾದ ಪರಿಶ್ರಮ ಉಳ್ಳವರು ಮಾತ್ರವೇ ಈ ಸಾಹಸವನ್ನು ಮಾಡಲು ಸಾಧ್ಯ.
- ಸಾಹಿತ್ಯ ಭಾಷಾಂತರದಲ್ಲಿ ಸಣ್ಣಪುಟ್ಟ ತಪ್ಪಗಲಾಗಬಹುದು. ಆದರೆ ಕಾನೂನು ಕೃತಿಗಳನ್ನು ಅನುವಾದಿಸುವಾಗ ಚಿಕ್ಕದೊಂದು ತಪ್ಪು ಕೂಡಾ ಪ್ರಮಾದಕ್ಕೆ ದಾರಿ ಮಾಡಿಕೊಡಬಹುದು. ಹಾಗಾಗೀ ಅನುವಾದಕ ಕಣ್ಣಲ್ಲಿ ಕಣ್ಣಿಟ್ಟು ಕೆಲಸ ಮಾಡಬೇಕಾಗುತ್ತದೆ.

- ಕಾನೂನಿನ ಭಾಷೆ ಮತ್ತು ರಚನಾಶೈಲಿಯು ಸಾಮಾನ್ಯವಾದ ಭಾಷೆಗಿಂತ ಸಂಪೂರ್ಣವಾಗಿ ಭಿನ್ನವೂ, ಕ್ಲಿಷ್ಟವೂ ಆಗಿರುತ್ತದೆ.
- ಕಾನೂನು ಪಾರಿಭಾಷಿಕ ಪದಗಳ ಬಗ್ಗೆ ತಿಳಿದುಕೊಂಡಿರಬೇಕಾಗುತ್ತದೆ. ಭಾಷಾಂತರಕಾರನಿಗೆ ಇವುಗಳ ಬಗೆಗೆ ಸ್ಪಷ್ಟವಾದ ಅರಿವಿರಬೇಕು.
- ಯಾವ ದೇಶ ಕಾನೂನನ್ನು ಅನುವಾದಿಸುತ್ತಿದ್ದಾನೆ ಆ ದೇಶದ ಕಾನೂನಿನ ಅಧ್ಯಯನ ಅಗತ್ಯವೂ ಇರುತ್ತದೆ.